# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (125)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಎಸ್.ರಘು, ಶಾಸಕರು, ಸರ್.ಸಿ.ವಿ.ರಾಮನ್‌ನಗರ, ವಿಧಾನಸಭಾ ಕ್ಷೇತ್ರ ರವರು ಶ್ರೀ.ಮುತ್ಯಾಲಮ್ಮ ದೇವಿ ಮತ್ತು ಶ್ರೀ.ಮಹೇಶ್ವರಮ್ಮ ದೇವಿ, ಶ್ರೀ.ಕಾಟೇರಮ್ಮ ದೇವಿ ದೇವಸ್ಥಾನಗಳ ಅಭಿವೃದ್ಧಿ ಮಂಡಳಿ (ರಿ) ಯ ಅಧ್ಯಕ್ಷರು ಸಲ್ಲಿಸಲಾಗಿರುವ ಮನವಿ ಪತ್ರವನ್ನು ಲಗತ್ತಿಸಿ, ವಾರ್ಡ್ ಸಂಖ್ಯೆ:88 ರ ವ್ಯಾಪ್ತಿಯಲ್ಲಿ ಬರುವ ದೂಪನಹಳ್ಳಿ 100 ಅಡಿ ರಸ್ತೆಯ ಪೂರ್ವಕ್ಕಿರುವ 15ನೇ ಮುಖ್ಯ ರಸ್ತೆಗೆ "ಶ್ರೀ.ಭುವನೇಶ್ವರಿ ದೇವಿ ದೇವಸ್ಥಾನದ ರಸ್ತೆ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಶ್ರೀ.ಭುವನೇಶ್ವರಿ ದೇವಿ ದೇವಸ್ಥಾನವು 15ನೇ ಮುಖ್ಯರಸ್ತೆಯಲ್ಲಿದ್ದು, ಸದರಿ ದೇವಸ್ಥಾನವು ಆದಿ ಕಾಲದಿಂದಲೂ ಇಲ್ಲಿ ನೆಲೆಗೊಂಡಿರುತ್ತದೆ. ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ, ಪ್ರಸ್ತಾವನೆ ಪರವಾಗಿ 9 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೇ ಇರುವುದು ಕಂಡುಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:88 ರ ವ್ಯಾಪ್ತಿಯಲ್ಲಿ ಬರುವ ದೂಪನಹಳ್ಳಿ 100 ಅಡಿ ರಸ್ತೆಯ ಪೂರ್ವಕ್ಕಿರುವ 15ನೇ ಮುಖ್ಯರಸ್ತೆಗೆ "ಶ್ರೀ.ಭುವನೇಶ್ವರಿ ದೇವಿ ದೇವಸ್ಥಾನದ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (126)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಘನ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ:155/2011 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ರಲ್ಲಿ ದಿನಾಂಕ:18-01-2011 ರಂದು ನೀಡಿರುವ ಆದೇಶದಂತೆ, ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಲಿ ಇರುವ ವೈದ್ಯರುಗಳ ಸಿಬ್ಬಂದಿ ಕೊರತೆಯನ್ನು ಕೂಡಲೇ ತುಂಬಬೇಕಾಗದ ಕಾರಣ, ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳನ್ನು ಕೂಡಲೇ ಹಿಂಪಡೆಯುವಂತೆ ಸರ್ಕಾರಕ್ಕೆ ನೀಡಿರುವ ಆದೇಶದ ಹಿನ್ನಲೆಯಲ್ಲಿ, ಸರ್ಕಾರವು ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರತಿ ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳನ್ನು ಸೇವೆಯಿಂದ ತಕ್ಷಣಕ್ಕೆ ಜಾರಿಗೆ ಬರುವಂತೆ ಮಾತೃ ಇಲಾಖೆಗೆ ಹಿಂಪಡೆದು, ಸದರಿ ವೈದ್ಯರುಗಳು 15 ದಿನದೊಳಗೆ ನಿರ್ದೇಶನಾಲಯಕ್ಕೆ ಕರ್ತವ್ಯದ ಮೇರೆಗೆ ಹಾಜರಾಗತಕ್ಕದೆಂದು ಸರ್ಕಾರದ ಆದೇಶ ಸಂಖ್ಯೆ:ಆಕುಕ 52 ಎಂಎಸ್ಎಸ್ 2011, ಬೆಂಗಳೂರು ದಿನಾಂಕ:17-06-2011 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸರ್ಕಾರದಿಂದ ನಿಯೋಜನೆ ಮೇಲೆ 43 ಸಹಾಯಕ ಶಸ್ತ್ರ ಚಿಕಿತ್ಸಕರು ಕಾರ್ಯನಿರ್ವಹಿಸುತ್ತಿದ್ದು, ಮೇಲೆ ಸೂಚಿಸಿರುವ ಸರ್ಕಾರಿ ಆದೇಶದಂತೆ, 43 ವೈದ್ಯರುಗಳನ್ನು ಕೂಡಲೇ ಪಾಲಿಕೆಯಿಂದ ಬಿಡುಗಡೆ ಮಾಡಬೇಕಾಗಿರುತ್ತದೆ. ತಪ್ಪಿದಲ್ಲಿ, ಘನ ಉಚ್ಚನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿದಂತಾಗುತ್ತದೆ. ಇದಕ್ಕೆ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಪೂರ್ಣ ಜವಾಬ್ದಾರರಾಗುತ್ತಾರೆಂದು, ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುತ್ತದೆ.

ಈ ವೈದ್ಯರುಗಳನ್ನು ಕೂಡಲೇ ಬಿಡುಗಡೆ ಮಾಡಿದಲ್ಲಿ ಪಾಲಿಕೆಯ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲದೇ ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯ ಕೊರತೆ ಉಂಟಾಗುತ್ತದೆ. ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 39+2 ಸಹಾಯಕ ಚಿಕಿತ್ಸಕ ವೈದ್ಯರ ಹುದ್ದೆ ಖಾಲಿ ಇದ್ದು, ಇದರ ಜೊತೆಗೆ 43 ಸರ್ಕಾರದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಶಸ್ತ್ರ ವೈದ್ಯರುಗಳನ್ನು ಬಿಡುಗಡೆಗೊಳಿಸಿ ಸರ್ಕಾರಕ್ಕೆ ಕಳುಹಿಸಿದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಲವಾರು ಆಸ್ಪತ್ರೆಗಳನ್ನು ಮುಚ್ಚುವ ಪರಿಸ್ಥಿತಿ ಬರುವುದಲ್ಲದೆ, ಈ ಆಸ್ಪತ್ರೆಗಳ ಮೇಲೆ ಅವಲಂಬಿಸಿರುವ ಹಲವಾರು ನಗರದ ಬಡಜನರಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸುವಲ್ಲಿ ತೀವ್ರ ತೊಂದರೆ ಉಂಟಾಗುತ್ತದೆ. ಈಗಾಗಲೇ, ಖಾಲಿಯಿರುವ ವೈದ್ಯರ ಹುದ್ದೆಗಳನ್ನು ಮತ್ತು ಇತರೆ ಅರೆ ವೈದ್ಯಕೀಯ ಖಾಲಿ ಹುದ್ದೆಗಳನ್ನು ತುಂಬಲು ಈ ಹಿಂದೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಅನುಮೋದನೆ ಪಡೆದು, ಸರ್ಕಾರದ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರದ ಅನುಮೋದನೆ ಪಡೆದ ನಂತರ ವೈದ್ಯರುಗಳ ನೇಮಕಾತಿ ಮಾಡುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮನವಿ ಸಲ್ಲಿಸಿ, ಸಂಸ್ಥೆಯು ವೈದ್ಯರುಗಳ ನೇಮಕಾತಿ ಮಾಡಿ, ಸದರಿ ವೈದ್ಯರುಗಳಿಗೆ ನೇಮಕಾತಿ ಆದೇಶ ನೀಡಲು, ಕನಿಷ್ಠ ಒಂದು ವರ್ಷ ಕಾಲಾವಕಾಶ ಬೇಕಾಗುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:13-07-2011 ರಂದು ಆರ್ಥಿಕ ಇಲಾಖೆಯ ಅಧಿಕಾರಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಾನೂನು ಇಲಾಖೆಯ ಕಾರ್ಯದರ್ಶಿಗಳು, ವೈದ್ಯಕೀಯ ಇಲಾಖೆಯ ಕಾರ್ಯದರ್ಶಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರುಗಳ ಸಭೆ ನಡೆದು, ಸದರಿ ಸಭೆಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಕರ್ನಾಟಕ ಪೌರ ನಿಗಮ ನಿಯಮಗಳು 1977 ರ ನಿಯಮ 26 ರಡಿ ಕೋಷ್ಟಕ 16 ಎ ರನ್ವಯ ಸಹಾಯಕ ಶಸ್ತ್ರ ವೈದ್ಯಾಧಿಕಾರಿಗಳ ವೃಂದದಲ್ಲಿ ಶೇಕಡಾ 50 ರಷ್ಟನ್ನು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ

ಕಲ್ಯಾಣ ಇಲಾಖೆಯ ಸಹಾಯಕ ಶಸ್ತ್ರ ವೈದ್ಯಾಧಿಕಾರಿ ವೃಂದದಿಂದ ಪ್ರತಿ ನಿಯೋಜನೆ ಮೂಲಕ ತುಂಬಬೇಕೆಂದು, ಉಳಿಕೆ ಶೇಕಡಾ 50 ರಷ್ಟನ್ನು ಎಂ.ಬಿ.ಬಿ.ಎಸ್ ಪದವಿ ಹೊಂದಿರುವ ವ್ಯಕ್ತಿಗಳನ್ನು ನೇರ ನೇಮಕಾತಿ ಮೂಲಕ ತುಂಬಬೇಕೆಂದು, ನಿಯಮ ಇರುವುದನ್ನು ವಿವರಿಸಿ, ಬಿ.ಬಿ.ಎಂ.ಪಿಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ 6 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 64 ಆರೋಗ್ಯ ಕೇಂದ್ರಗಳು, ಔಷಧಾಲಯಗಳು ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳು, ನಗರ ಬಡಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಮೇಲ್ಕಂಡಂತೆ ಸರ್ಕಾರದ 43 ವೈದ್ಯರ ಸೇವೆಯನ್ನು ಹಿಂಪಡೆದುಕೊಂಡಿರುವುದರಿಂದ, ಈಗಾಗಲೇ ಖಾಲಿಯಿರುವ 39+2 ಹುದ್ದೆಗಳು ಸೇರಿ ಒಟ್ಟು 84 ಹುದ್ದೆಗಳಲ್ಲಿ, ವೈದ್ಯರು ಮತ್ತು 10 ತಜ್ಞ ವೈದ್ಯರು ಇಲ್ಲದೆ ತೀವ್ರ ತೊಂದರೆ ಉಂಟಾಗುವುದಾಗಿ ವಿವರಿಸಿದರು. ಗ್ರಾಮಾಂತರ ಪ್ರದೇಶದ ಆರೋಗ್ಯ ಕೇಂದ್ರಗಳಂತೆ ಬಿ.ಬಿ.ಎಂ.ಪಿಯ ಈ ಮೇಲ್ಕಂಡ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು, ನಗರದ ಬಡಜನರಿಗೆ ವೈದ್ಯಕೀಯ ಸೇವೆ ಪಡೆಯುವಲ್ಲಿ ಭಾರಿ ವ್ಯತ್ಯಯ ಉಂಟಾಗುತ್ತದೆ ಎಂಬುದಾಗಿ ಆಯುಕ್ತರು ಸಭೆಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವೈದ್ಯರ ನೇರ ನೇಮಕಾತಿ ಮಾಡಿಕೊಳ್ಳುವಲ್ಲಿ ಆಗಿರುವ ವಿಳಂಬದ ಬಗ್ಗೆ ವಿವರಣೆ ಕೋರಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಈಗಾಗಲೇ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರದಿಂದ ಅನುಮತಿ ಕೋರಿದ್ದು, ಸದರಿ ಕಡತವು ಆರ್ಥಿಕ ಇಲಾಖೆಯ ಅನುಮೋದನೆಗೆ ಹೋಗಿದ್ದು, ಆರ್ಥಿಕ ಇಲಾಖೆಯು ಕೆಲವು ಆಕ್ಷೇಪಣೆಗಳನ್ನು ಎತ್ತಿ ವಿವರಣೆಯನ್ನು ಕೋರಿದ್ದು, ಉತ್ತರ ನೀಡುವ ಹಂತದಲ್ಲಿ ಇರುವುದಾಗಿ ಮಾನ್ಯ ಆಯುಕ್ತರು ತಿಳಿಸಿದರು.

ಈ ಹಂತದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮುಂದಿನ 2 ದಿನಗಳಲ್ಲಿ ಆರ್ಥಿಕ ಇಲಾಖೆಯು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವ ವಿಷಯದಲ್ಲಿ ಅನುಮತಿ ನೀಡುವಂತೆ ನಿರ್ದೇಶಿಸಿದರು. ವೈದ್ಯರನ್ನು ಖಾಯಂ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಗಬೇಕಾಗಿದ್ದು, ಸದರಿ ನೇಮಕಾತಿಗೆ ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೂಡಲೇ ನಿವೃತ್ತ ವೈದ್ಯರನ್ನು ನಿಯಮಾನುಸಾರ ಗೌರವಧನ ಆಧಾರದ ಮೇಲೆ ಈ ತಕ್ಷಣದಿಂದಲೇ ಖಾಲಿ ಹುದ್ದೆಗಳಿಗೆ ವೈದ್ಯರನ್ನು ನೇಮಿಸಿಕೊಳ್ಳಬೇಕೆಂದು ಸೂಚಿಸಿ, ಈ ಮೇಲ್ಕಂಡ ಸರ್ಕಾರದಿಂದ ಪ್ರತಿ ನಿಯೋಜನೆ ಮೇಲೆ ಇರುವ 43 ವೈದ್ಯರನ್ನು ಬಿಡುಗಡೆಗೊಳಿಸುವಂತೆ ಸೂಚಿಸಿದರು. ಅಲ್ಲದೇ ಶೇಕಡಾ 100% ರಷ್ಟು ವೈದ್ಯರುಗಳನ್ನು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದಲೇ ನೇರ ನೇಮಕಾತಿ ಮಾಡಿಕೊಳ್ಳಲು ಅನುವಾಗುವಂತೆ ಕರ್ನಾಟಕ ಪೌರ ನಿಗಮ ನಿಯಮಗಳ 1997 ರ ನಿಯಮ 26 ಕ್ಕೆ ತಿದ್ದುಪಡಿ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಕರ್ನಾಟಕ ಪೌರಾಡಳಿತ ನಿಯಮ 1977 ರ ನಿಯಮ 20(1) ರಂತೆ ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ಸರ್ಕಾರದ ಪೂರ್ವಾನುಮತಿಯೊಂದಿಗೆ ನಿಯಮ 20(1)(ಎ) ರಡಿಯಲ್ಲಿ ನಿವೃತ್ತಿ ಹೊಂದಿರುವ ವೈದ್ಯಾಧಿಕಾರಿಗಳನ್ನು ಅವಶ್ಯಕವಾಗಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂತಹ ಅವಧಿಗಾಗಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

ಸರ್ಕಾರದ ದಿನಾಂಕ:25-06-2005ರ ಅಧಿಸೂಚನೆ ಸಂಖ್ಯೆ: ಯು.ಡಿ.ಡಿ 118 ಎಂ.ಎನ್.ಯು 2005 ರಂತೆ ನಿಯಮ 20(1)(ಬಿ)ರಡಿಯಲ್ಲಿ ಸಮರ್ಥರಾದ ಯಾವುದೇ ವ್ಯಕ್ತಿಯನ್ನು, ನಿವೃತ್ತನಾದ ವ್ಯಕ್ತಿಯನ್ನು ಹೊರತುಪಡಿಸಿ ಒಪ್ಪಂದದ ಮೂಲಕ ಆಯುಕ್ತರು ನಿರ್ಧರಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ. ಅಂದರೆ, ವಿದ್ಯಾರ್ಹತೆ ಹೊಂದಿರುವ ಯುವ ವೈದ್ಯರನ್ನೂ ಸಹ ತಾತ್ಕಾಲಿಕ ಅವಧಿಗೆ ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಪಾಲಿಕೆಯಲ್ಲಿ ಸಹಾಯಕ ಶಸ್ತ್ರ ವೈದ್ಯರ ಒಟ್ಟು 91 ಮಂಜೂರಾತಿ ಹುದ್ದೆಯಿದ್ದು, ಶೇಕಡಾ 50% ನೇರ ನೇಮಕಾತಿಯಂತೆ 46 ಹುದ್ದೆಯಿದ್ದು, ಇವುಗಳ ಪೈಕಿ 7 ಹುದ್ದೆಗಳಲ್ಲಿ ಮಾತ್ರ ಸಹಾಯಕ ಶಸ್ತ್ರ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, 39 ಸಹಾಯಕ ಶಸ್ತ್ರ ವೈದ್ಯರ ಹುದ್ದೆಗಳು ಖಾಲಿ ಇರುತ್ತದೆ.

ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ಶೇಕಡಾ 50% ರಷ್ಟರ ಅಡಿಯಲ್ಲಿ 45 ಹುದ್ದೆಗಳು ಇದ್ದು, ಇವುಗಳ ಪೈಕಿ 43 ಹುದ್ದೆಗಳಲ್ಲಿ ಎರವಲು ಸೇವೆಯ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, 2 ಹುದ್ದೆ ಖಾಲಿ ಇರುತ್ತದೆ. ಅಂದರೆ ಈಗ ಸರ್ಕಾರವು ಎರವಲು 43 ವೈದ್ಯರನ್ನು ಹಿಂಪಡೆದುಕೊಂಡು ಆದೇಶಿಸಿರುವುದರಿಂದ 39+43+2 ಒಟ್ಟು 84 ಸಹಾಯಕ ಶಸ್ತ್ರ ವೈದ್ಯರ ಹುದ್ದೆಗಳನ್ನು ಕೂಡಲೇ ತುಂಬುವ ಅವಶ್ಯಕತೆ ಇರುತ್ತದೆ.

ತಜ್ಞರ ಪೈಕಿ ಮಕ್ಕಳ ತಜ್ಞರ 1 ಹುದ್ದೆ, ಪ್ರಸೂತಿ ತಜ್ಞರ 7 ಹುದ್ದೆ, ಅರವಳಿಕೆ ತಜ್ಞರ 2 ಹುದ್ದೆಗಳನ್ನು ನೇರ ನೇಮಕಾತಿ ಕಾಯ್ದಿರಿಸಿ, ತಾತ್ಕಾಲಿಕವಾಗಿ ಈ ಮೇಲ್ಕಂಡ 10 ಹುದ್ದೆಗಳನ್ನು ಸಹ ಈ ಕೂಡಲೇ ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ತುಂಬಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಸದರಿಯವರುಗಳಿಗೆ ಗೌರವಧನವನ್ನು ನಿಗಧಿಪಡಿಸುವ ಬಗ್ಗೆ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ಸುತ್ತೋಲೆ ಸಂಖ್ಯೆ:ಉ.ನಿ/ತಾ.ಆ/ವೈ.ನೇ/79/2009–10 ದಿನಾಂಕ:17–03–2010ರ ಸುತ್ತೋಲೆಯನ್ನು ಆಧಾರವಾಗಿಟ್ಟು ಕೊಂಡು ಎಂ.ಬಿ.ಬಿ.ಎಸ್ ಪದವಿ ಹೊಂದಿರುವ ಸಹಾಯಕ ಶಸ್ತ್ರ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ.25,000/– ಗಳ ಗೌರವಧನ ಮತ್ತು ಎಂ.ಬಿ.ಬಿ.ಎಸ್ ಜೊತೆಗೆ ಡಿಪ್ಲೋಮಾ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ಗೌರವಧನ ರೂ.30,000/– ಎಂ.ಬಿ.ಬಿ.ಎಸ್ ಜೊತೆಗೆ ಸ್ನಾತಕೋತ್ತರ ಪದವಿ ಹೊಂದಿರುವ ತಜ್ಞ ವೈದ್ಯರಿಗೆ ರೂ.35,000/– ಗಳ ಮಾಸಿಕ ಗೌರವಧನವನ್ನು ನೀಡುವ ಆಧಾರದ ಮೇಲೆ 6 ತಿಂಗಳ ಕಾಲಾವಧಿಗೆ ಒಟ್ಟು 84 ಸಹಾಯಕ ಶಸ್ತ್ರ ವೈದ್ಯರು ಮತ್ತು 10 ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18–07–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:27–07–2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01–08–2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01–08–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01–08–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (128)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹುಡ್ಕೊ ಸಂಸ್ಥೆ ಭಾರತ ಸರ್ಕಾರದ ಒಂದು ಅಂಗಸಂಸ್ಥೆಯಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದೀರ್ಘಾವಧಿ ಸಾಲ (15 ವರ್ಷಗಳು) ಒದಗಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂಸ್ಥೆಯು ಸಲ್ಲಿಸಿರುವ ಷರತ್ತುಗಳು ಈ ಕೆಳಕಂಡಂತಿವೆ.

**ಹುಡ್ಕೊ ಸಾಲ ಮಂಜೂರಾತಿಯ ಷರತ್ತುಗಳು**

1. ಬಡ್ಡಿದರ 11.00% Floating
   Rate of Interest:- Reference rate 10%+1%=11% Floating
2. ಸಾಲ ಮಂಜೂರಾತಿ ಫೀ (Front End Fee) 0.5% ಗರಿಷ್ಠ 100.00 ಲಕ್ಷಗಳು ಮತ್ತು ಸೇವಾಶುಲ್ಕ 10.30%
3. ಅರ್ಜಿ ಶುಲ್ಕ 0.10% ಗರಿಷ್ಠ ರೂ.5 ಲಕ್ಷಗಳು ಸೇವಾಶುಲ್ಕ 10.30%
4. ಸಾಲದ ಮೊತ್ತದ 125.00% ರಷ್ಟು ಮೌಲ್ಯದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಭೂಮಿ/ಕಟ್ಟಡಗಳನ್ನು ಹುಡ್ಕೊ ಸಂಸ್ಥೆಗೆ ಅಡವಿಡಬೇಕು.
5. ಸಾಲದ ತೀರುವಳಿ ಮಾಡಲು ಮಾಹೆಯಾನ ಬೇಕಾಗುವ ಮೊತ್ತದ 150% ರಷ್ಟು Tax/Fee ಬ್ಯಾಂಕುಗಳ ಹಣವನ್ನು ಹುಡ್ಕೊ ಸಂಸ್ಥೆಗೆ Escrow Mechanism ಮಾಡಬೇಕು. Structured Escrow Mechanism against identified receivables such as taxes/fee/charges etc. with coverage of 150% as pass through revenue.

ಪ್ರಸ್ತುತ ಸಾಲ ಪಡೆಯಲಾಗಿರುವ Canara Bank ಮತ್ತು Syndicate Bank ಇವುಗಳಲ್ಲಿ ಬಾಕಿ ಇರುವ ಸಾಲದ ಮೊತ್ತ ರೂ. 266.12 ಕೋಟಿ ಮತ್ತು ಅದರ ಮೇಲಿನ ಬಡ್ಡಿ ಮರುಪಾವತಿಯನ್ನು, ಹುಡ್ಕೊ ಸಂಸ್ಥೆಯಿಂದ ಸಾಲವನ್ನು ಪಡೆದು ಮೇಲ್ಕಂಡ ಎರಡು ಬ್ಯಾಂಕ್‌ಗಳ ಬಾಕಿ ಸಾಲದ ಮೊತ್ತವನ್ನು ತೀರುವಳಿ ಮಾಡಿದಲ್ಲಿ ಪಾಲಿಕೆಗೆ ಬಡ್ಡಿ ಮೊತ್ತ ರೂ.824.43 ಲಕ್ಷಗಳು ಉಳಿತಾಯವಾಗಲಿದೆ. ಉಳಿತಾಯದ ವಿವರ ಈ ಕೆಳಗಿನಂತಿದೆ.

| Sl. No | Bank Name | Out standing loan amount as on 01-04-11 | Bank interest rate | Bank interest amount | HUDCO Interest Rate | HUDCO Interest Amount | Savings Cost | Additional Cost | | Net Benefit to BBMP |
|---|---|---|---|---|---|---|---|---|---|---|
| | | | | | | | Savings from Difference of Interest | Less pre payment charges to banks | Less front end & Applica-tion fee | |
| 1 | Canara Bank Loan-II | 18600.41 | 12.75% | 6429.40 | 11.00% | 5546.93 | 882.47 | 186.00 | 79.09 | 617.37 |
| 2 | Syndicate Bank Loan-II | 8636.23 | 13.25% | 1944.22 | 11.00% | 1614.07 | 330.15 | 86.36 | 36.72 | 207.06 |
| | **Total** | **27236.64** | | **8373.61** | | **7161.00** | **1212.62** | **272.37** | **115.82** | **824.43** |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಹುಡ್ಕೊ ಸಂಸ್ಥೆಯಿಂದ ರೂ.266.12 ಕೋಟಿಗಳ 15 ವರ್ಷಗಳ ದೀರ್ಘಾವಧಿ ಸಾಲವನ್ನು ಪಡೆದು, ಸಿಂಡಿಕೇಟ್ ಬ್ಯಾಂಕಿನ ಸಾಲದ ಮೊತ್ತ ರೂ. 77.95 ಕೋಟಿಗಳನ್ನು ಹಾಗೂ ಕೆನರಾ ಬ್ಯಾಂಕಿನ ಸಾಲದ ಮೊತ್ತ ರೂ.188.17 ಕೋಟಿಗಳನ್ನು ತೀರುವಳಿ ಮಾಡುವ ಬಗ್ಗೆ

. . . . .2

ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 12-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (94)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು 1987 ರಿಂದ 1992 ರ ಅವಧಿಯಲ್ಲಿ ಕೋರಮಂಗಲದಲ್ಲಿ ಆರ್ಥಿಕ ದುರ್ಬಲ ವರ್ಗದವರಿಗಾಗಿ ಸುಮಾರು 15 ಎಕರೆ ಪ್ರದೇಶದಲ್ಲಿ 1512 ಮನೆಗಳನ್ನು ನಿರ್ಮಿಸಿತ್ತು (36 ಫ್ಲಾಟ್‌ಗಳು, 42 ಕಟ್ಟಡಗಳು). ಈ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಕೆಲವು ಕಟ್ಟಡಗಳು ಕುಸಿದಿರುತ್ತವೆ. ಈ ಹಿನ್ನಲೆಯಲ್ಲಿ, ಹಾಲಿ ಇರುವ ಮನೆಗಳನ್ನು ಕೆಡವಿ ಈ ಪ್ರದೇಶದಲ್ಲಿ ಜಂಟಿ ಸಹಭಾಗಿತ್ವದಲ್ಲಿ 1640 ಮನೆಗಳನ್ನು ನಿರ್ಮಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಉದ್ದೇಶಿಸಿರುತ್ತದೆ. ಒಟ್ಟು ಜಾಗದಲ್ಲಿ 1640 ವಾಸದ EWS ಮನೆಗಳ ಸಂಕೀರ್ಣ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಉಳಿದ ಜಾಗದಲ್ಲಿ ಹೆಚ್ಚಿನ ವಸತಿ / ವಸತಿಯೇತರ ಕಟ್ಟಡ ನಿರ್ಮಾಣದಲ್ಲಿ ಪಾಲಿಕೆಗೆ 50 ಪ್ರತಿ ಶತ: ಭಾಗ ಮತ್ತು ಪಾಲಿಕೆಯ ಭಾಗವನ್ನು ಮೂವತ್ತು ವರ್ಷಗಳವರೆವಿಗೂ ಡೆವಲಪ್‌ದಾರರೇ ನಿರ್ವಹಿಸಿ, ಪಾಲಿಕೆಗೆ ನೀಡಬೇಕಾದ ತ್ರೈಮಾಸಿಕ ಪಾವತಿ ಈ ಮಾದರಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಒಟ್ಟು 15 ಎಕರೆ ಪ್ರದೇಶದ ಜಾಗದಲ್ಲಿ ಸುಮಾರು 8 ಎಕರೆ ಪ್ರದೇಶದಲ್ಲಿ 1640 ಮನೆಗಳನ್ನು ಒಳಗೊಂಡಂತೆ EWS ವಸತಿಗೃಹಗಳ ಸಮುಚ್ಚಯ ನಿರ್ಮಾಣ ಮಾಡುವ ಬಗ್ಗೆ ಮತ್ತು ಉಳಿದ ಸುಮಾರು 7 ಎಕರೆ ಪ್ರದೇಶದಲ್ಲಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡುವ ಅಂಶವನ್ನು ಮೂಲ ಯೋಜನೆಯಲ್ಲಿ ಸೇರಿಸಲಾಗಿದೆ.

ಸದರಿ ಯೋಜನೆಯನ್ನು PPP ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, EWS ವಸತಿಗೃಹಗಳ ಸಮುಚ್ಚಯ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಪಾಲುದಾರ ಸಂಸ್ಥೆಯವರು ವಸತಿಯೇತರ ಸಂಕೀರ್ಣದಿಂದ ಬರುವ ಆದಾಯದಿಂದ ಭರಿಸಿಕೊಳ್ಳಬಹುದಾಗಿದೆ ಹಾಗೂ 30 ವರ್ಷಗಳ ದೀರ್ಘಾವಧಿ ಗುತ್ತಿಗೆಯ ಅವಧಿಯಲ್ಲಿ EWS ವಸತಿಗೃಹಗಳ ಸಮುಚ್ಚಯದ ಸಂಪೂರ್ಣ ನಿರ್ವಹಣೆಯು ಪಾಲುದಾರ ಸಂಸ್ಥೆಯವರ ಹೊಣೆಯಾಗಿದ್ದು, ಈ ಬಾಬ್ತಿಗಾಗಿ ತಗಲುವ ವೆಚ್ಚವನ್ನು ಕೂಡ ವಾಣಿಜ್ಯ ಸಂಕೀರ್ಣದಿಂದ ಬರುವ ಆದಾಯದಿಂದ ಭರಿಸಿಕೊಳ್ಳಬಹುದಾಗಿದೆ.

ಮೇಲಿನಂತೆ, ಎಲ್ಲಾ ವೆಚ್ಚವನ್ನು ಭರಿಸಿಕೊಂಡು, ವಸತಿಯೇತರ ಸಂಕೀರ್ಣದಿಂದ ಬರುವ ಆದಾಯದಲ್ಲಿ ಪಾಲಿಕೆಗೆ Quantity management fees ಅನ್ನು ಯಶಸ್ವಿ ಪಾಲುದಾರರು ನೀಡಬೇಕಾಗಿರುತ್ತದೆ. EWS ವಸತಿಗೃಹಗಳ ಸಮುಚ್ಚಯ ನಿರ್ಮಾಣ ಹಾಗೂ 30 ವರ್ಷಗಳ ಅವಧಿಯೊಳಗೆ ಇವುಗಳ ನಿರ್ವಹಣೆಯನ್ನು ಕಡ್ಡಾಯವಾಗಿ ಯಶಸ್ವಿ ಪಾಲುದಾರರು ಪಾಲಿಸಬೇಕಾಗಿದ್ದು, (mandatory requirements) ಉಳಿದಂತೆ ವಸತಿಯೇತರ ಸಂಕೀರ್ಣದ ಭಾಗದಲ್ಲಿ ದೀರ್ಘಾವಧಿ ಅವಧಿಯ ನಂತರ ಶೇ. 50 ರಷ್ಟು ಭಾಗವನ್ನು ಯಥಾ ಸ್ಥಿತಿಯಲ್ಲಿ ಪಾಲಿಕೆಗೆ ಹಸ್ತಾಂತರಿಸುವ ನಿಬಂಧನೆಗೊಳಪಟ್ಟಿರುತ್ತದೆ. ಉಳಿದಂತಹ ಶೇ. 50 ರಷ್ಟು ಭಾಗದ ಮಾಲೀಕತ್ವವನ್ನು ಯಶಸ್ವಿ ಬಿಡ್ಡುದಾರರು ಹೊಂದಿರುತ್ತಾರೆ. ಈ ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಈಜಿಪುರದಲ್ಲಿ EWS ವಸತಿಗೃಹಗಳ ಸಮುಚ್ಚಯ ನಿರ್ಮಾಣ ಮಾಡುವ ಸಂಬಂಧ, BOT/JV ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪಾಲಿಕೆವತಿಯಿಂದ ದಿನಾಂಕ:12-10-2004 ರಂದು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

. . . . .2

ಈ ಕಾರ್ಯಕ್ಕಾಗಿ ಆಸಕ್ತಿ ಇರುವ ಸಂಸ್ಥೆಗಳಿಂದ ಎರಡು ಹಂತದಲ್ಲಿ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದು, ಮೊದಲನೆಯ ಹಂತದಲ್ಲಿ ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್ (EOI) ಎಂದು, ಎರಡನೆಯ ಹಂತದಲ್ಲಿ ರಿಕ್ವೆಸ್ಟ್ ಫಾರ್ ಕ್ವಾಲಿಫಿಕೇಷನ್ (RFQ) ಗಳನ್ನು ಆಹ್ವಾನಿಸಿದ್ದು, ಮೊದಲನೆಯ ಹಂತದಲ್ಲಿ 21 ಏಜೆನ್ಸಿಗಳು ಭಾಗವಹಿಸಿ, ಎರಡನೆಯ ಹಂತದಲ್ಲಿ 6 ಏಜೆನ್ಸಿಗಳು ಅರ್ಹತೆ ಪಡೆದುಕೊಂಡಿದ್ದು, ಅಂತಿಮವಾಗಿ ಕೆಳಕಂಡ ಮೂರು ಪ್ರಸ್ತಾವನೆಗಳನ್ನು ಪಾಲಿಕೆಯ ಹಿತದೃಷ್ಟಿಯಿಂದ ಪರಿಶೀಲಿಸಿ, ಒಂದು ಪ್ರಸ್ತಾವನೆಯನ್ನು ಆಯ್ಕೆ ಮಾಡಬೇಕಾಗಿರುತ್ತದೆ.

ಸದರಿ ಟೆಂಡರ್ ಪ್ರಕಟಣೆಗೆ ಪ್ರತಿಕ್ರಿಯಿಸಿ ಭಾಗವಹಿಸಿದ್ದ ಸಂಸ್ಥೆಗಳ ಪೈಕಿ, ತಾಂತ್ರಿಕವಾಗಿ ಅರ್ಹರಾದ ಸಂಸ್ಥೆಗಳಿಗೆ RFP ಕಡತಗಳನ್ನು ವಿತರಿಸಲಾಯಿತು. ಕೆಳಕಂಡ 3 ಸಂಸ್ಥೆಗಳು ತಮ್ಮ ಬಿಡ್‌ಗಳನ್ನು ಸಲ್ಲಿಸಿರುತ್ತಾರೆ.

1) ಮೆ॥ ಆಕೃತಿ ನಿರ್ಮಾಣ ಪ್ರೈ. ಲಿಮಿಟೆಡ್
2) ಮೆ॥ ಐ.ಡಿ.ಇ.ಬಿ. ಇತ್ಯಾದಿ
3) ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ.

RFP ಕಡತದಲ್ಲಿನ ಅಂಶಗಳಿಗೆ ಸ್ಪಂದಿಸಿ, ಮೇಲೆ ತಿಳಿಸಿರುವ ಮೂವರು ಸಂಸ್ಥೆಯವರು ತಮ್ಮ ತಾಂತ್ರಿಕ ಪ್ರಸ್ತಾವನೆಗಳೊಂದಿಗೆ ಆರ್ಥಿಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ತಾಂತ್ರಿಕ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ, ಪಾಲಿಕೆಯ mandatory requirements ನಂತೆ, EWS ವಸತಿಗೃಹಗಳ ಸಮುಚ್ಚಯ ನಿರ್ಮಾಣ ಮಾಡುವುದನ್ನು ಯಾವುದೇ ವ್ಯತ್ಯಾಸವಿಲ್ಲದೇ, ಹಾಗೇ ನಿರ್ಮಿಸಿಕೊಡಲು 3 ಏಜೆನ್ಸಿಗಳು ತಮ್ಮ ತಾಂತ್ರಿಕ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ಮುಂದುವರೆದಂತೆ, ವಸತಿಯೇತರ ತಾಂತ್ರಿಕ ಪ್ರಸ್ತಾವನೆಯಲ್ಲಿ ವ್ಯತ್ಯಾಸಗಳು ಕಂಡು ಬಂದಿರುತ್ತವೆ. ಆದರೆ, ವಸತಿಯೇತರ ಕಟ್ಟಡದಲ್ಲಿ ನಿರ್ಮಾಣ ಮಾಡುವ Built Up Area ದಲ್ಲಿ ವ್ಯತ್ಯಾಸಗಳು ಕಂಡು ಬಂದಿದ್ದು, ಮೆ॥ ಮ್ಯಾವರಿಕ್ ಸಂಸ್ಥೆಯವರು ಕಟ್ಟಲು ಪ್ರಸ್ತಾಪಿಸಿರುವ BUA ಅತ್ಯಧಿಕವಾಗಿದ್ದು, ಮೆ॥ಆಕೃತಿ ನಿರ್ಮಾಣ ಪ್ರೈ. ಲಿಮಿಟೆಡ್ ಮತ್ತು ಐ.ಡಿ.ಇ.ಬಿ. ಸಂಸ್ಥೆಯವರು ಪ್ರಸ್ತಾಪಿಸಿರುವ BUA ಕ್ರಮವಾಗಿ ಕಡಿಮೆಯಿರುತ್ತವೆ. 30 ವರ್ಷಗಳ ದೀರ್ಘಾವಧಿ ಗುತ್ತಿಗೆ ನಂತರ ಪಾಲಿಕೆಗೆ ಹಸ್ತಾಂತರಿಸಬೇಕಾಗಿರುವ ವಸತಿಯೇತರ ಭಾಗದ ಪ್ರತಿ ಶತ: 50 ರಷ್ಟು ಭಾಗವನ್ನು ಗಮನದಲ್ಲಿಟ್ಟುಕೊಂಡು ತಾಂತ್ರಿಕ ಪ್ರಸ್ತಾವನೆ ಮತ್ತು ಆರ್ಥಿಕ ಪ್ರಸ್ತಾವನೆಗಳೆರಡನ್ನೂ ಸೇರಿಸಿ, ಸದರಿ ಟೆಂಡರ್ ಅನ್ನು ಅಂತಿಮಗೊಳಿಸಬೇಕಾಗಿರುವ ಅನಿವಾರ್ಯತೆಯನ್ನು ಮನಗಂಡು, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ತೀರ್ಮಾನಿಸಲಾಯಿತು.

ತಾಂತ್ರಿಕ ಬಿಡ್ಡುಗಳನ್ನು ತೆರೆದ ನಂತರ ಮೂವರು ಬಿಡ್ಡುದಾರರುಗಳು ಪಾಲಿಕೆಗೆ ನೀಡಬೇಕಾಗಿರುವ Quantity Management Fee ಅನ್ನು ಕೆಳಕಂಡಂತೆ ನಮೂದಿಸಲಾಗಿದೆ;

| | | |
|---|---|---|
| 1 | ಮೆ॥ ಆಕೃತಿ ನಿರ್ಮಾಣ ಪ್ರೈ. ಲಿಮಿಟೆಡ್ | ರೂ.1,50,50,500/- |
| 2 | ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ | ರೂ.1,35,00,000/- |
| 3 | ಮೆ॥ ಐ.ಡಿ.ಇ.ಪಿ. ಇತ್ಯಾದಿ | ರೂ. 32,25,000/- |

ತಾಂತ್ರಿಕ ಹಾಗೂ ಆರ್ಥಿಕ ಪ್ರಸ್ತಾವನೆಗಳನ್ನು ಒಟ್ಟಾಗಿ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ, ಮೆ॥ ಆಕೃತಿ ನಿರ್ಮಾಣ ಪ್ರೈ. ಲಿಮಿಟೆಡ್ ರವರು ಪಾಲಿಕೆಯ Bye Law ನಿಬಂಧನೆಯನ್ನು ಪ್ರಸ್ತಾವನೆಯಲ್ಲಿ ಪಾಲಿಸದೇ ಇರುವುದನ್ನು ಗಮನಿಸಿದ ನಂತರ ಹಾಗೂ ಸದರಿ ಯೋಜನೆಯ ಮೂಲ

. . . . .3

ಸಲಹೆಗಾರರಾದ ಮೆ॥ ಐಡೆಕ್ ರವರು ಬಿಡ್ಡುದಾರರುಗಳ ತಾಂತ್ರಿಕ ವರದಿಯನ್ನು ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ Bye Law ನಿಬಂಧನೆಯಂತೆ, ಕಾರ್‌ಪಾರ್ಕ್‌ನ ಅಳತೆ ಇರಬೇಕಾಗಿರುವುದನ್ನು ಪರಿಶೀಲಿಸದೇ ಇರುವುದನ್ನು ಹಾಗೂ ತಮ್ಮ ವರದಿಯಲ್ಲಿ ತಿಳಿಸದೇ ಇರುವುದನ್ನು ಗಮನಿಸಿದ ನಂತರ ತಾಂತ್ರಿಕ ಹಾಗೂ ಆರ್ಥಿಕ ಪ್ರಸ್ತಾವನೆಗಳನ್ನು ಮತ್ತೊಮ್ಮೆ ವಿಶ್ಲೇಷಿಸಿ ಇತರೆ ಸಲಹೆಗಾರರಿಂದ ವರದಿ ಪಡೆಯಲು ತೀರ್ಮಾನಿಸಲಾಯಿತು. ಅಂತೆಯೇ, ಮೆ॥ ಮಾನಸ ಕನ್ಸಲ್ಟೆಂಟ್ಸ್ ಮತ್ತು ಮೆ॥ ಸ್ಟ್ರಕ್ಟ್ ಜಿಯೋಟೆಕ್ ರೀಸರ್ಚ್ ಲ್ಯಾಬೋರೇಟರೀಸ್ ಪ್ರೈ. ಲಿ. ರವರಿಂದ ವರದಿಗಳನ್ನು ಪಡೆಯಲಾಗಿದೆ.

ಸದರಿ BOT ಟೆಂಡರ್ ಅನ್ನು Net Present Value (NPV) ಆಧಾರದ ಮೇಲೆ ಮೂರು ಸಲಹೆಗಾರರುಗಳು ಟೆಂಡರ್‌ನಲ್ಲಿ ಆರ್ಥಿಕ ಪ್ರಸ್ತಾವನೆಗಳನ್ನು ಒಟ್ಟಾಗಿ ವಿಶ್ಲೇಷಣೆ ಮಾಡಿ ವರದಿ ನೀಡಿರುತ್ತಾರೆ. ವರದಿಯ ಸಾರಾಂಶ ಕೆಳಕಂಡಂತಿದೆ.

ಮೆ॥ ಐಡೆಕ್ ಸಂಸ್ಥೆಯವರು Quaterly Management Fee ಆಧಾರದ ಮೇಲೆ ಮೆ॥ ಆಕೃತಿ ನಿರ್ಮಾಣ ಲಿ. ರವರನ್ನು ಯಶಸ್ವಿ ಬಿಡ್ಡುದಾರರೆಂದು ವರದಿ ನೀಡಿರುತ್ತಾರೆ. ಮೆ॥ ಮಾನಸ ಕನ್ಸಲ್‌ಟೆಂಟ್ಸ್ ಮತ್ತು ಮೆ॥ ಸ್ಟ್ರಕ್ಟ್ ಜಿಯೋಟೆಕ್ ರವರು Net present value ಆಧಾರದ ಮೇಲೆ ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ. ರವರನ್ನು ಯಶಸ್ವಿ ಬಿಡ್ಡುದಾರರೆಂದು ವರದಿ ನೀಡಿರುತ್ತಾರೆ.

ಮೇಲ್ಕಂಡ ಸಂದರ್ಭದಲ್ಲಿ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ ಎರಡನ್ನು ಆಧರಿಸಿ ಸಲಹೆಗಾರರು ನೀಡಿರುವ ಅಭಿಪ್ರಾಯಗಳ ಆಧಾರದಲ್ಲಿ 30 ವರ್ಷದ ಗುತ್ತಿಗೆ ಅಂತ್ಯದಲ್ಲಿ ಮೆ॥ ಆಕೃತಿ ನಿರ್ಮಾಣ ಪ್ರೈ. ಲಿ. ಸಂಸ್ಥೆಯವರ ವಸತಿ/ವಸತಿಯೇತರ ಪ್ರಸ್ತಾವನೆ ಹೆಚ್ಚು ವರಮಾನ ನೀಡಿದ್ದರೂ, ಇತರೆ ಇಬ್ಬರು ಸಲಹೆಗಾರರ ಅಭಿಪ್ರಾಯಗಳನ್ವಯ ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ. ರವರ ಪ್ರಸ್ತಾವನೆ ಕಟ್ಟಡ ನಿಯಮಾವಳಿಗನುಗುಣವಾಗಿದ್ದು, ಪಾಲಿಕೆಗೆ ಅತೀ ಹೆಚ್ಚು ಲಾಭದಾಯಕವಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ, ಪಾಲಿಕೆಗೆ ಹೆಚ್ಚು ಲಾಭದಾಯವಾಗುವ ಪ್ರಸ್ತಾವನೆ ನೀಡಿರುವ ಸಂಸ್ಥೆಯನ್ನು ಪಾಲುದಾರರನ್ನಾಗಿ ಆಯ್ಕೆ ಮಾಡುವ ನಿರ್ಧಾರಕ್ಕಾಗಿ ಪಾಲಿಕೆಯು ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ದಿನಾಂಕ:03-05-2006 ರಂದು ಟಿಪ್ಪಣಿ ಮಂಡಿಸಲಾಯಿತು.

ಟಿಪ್ಪಣಿ ಮಂಡಿಸುವ ಸಂದರ್ಭದಲ್ಲಿದ್ದ ಆಯುಕ್ತರಾದ ಮಾನ್ಯ ಶ್ರೀ. ಕೆ.ಜ್ಯೋತಿ ರಾಮಲಿಂಗಂ ರವರ ವರ್ಗಾವಣೆಯಾಗಿ ಹೊಸದಾಗಿ ಅಧಿಕಾರ ವಹಿಸಿಕೊಂಡ ಆಯುಕ್ತರದ ಮಾನ್ಯ ಶ್ರೀ. ಜೈರಾಜ್ ರವರು ಪಾಲಿಕೆಯ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಪೂರಕ ಟಿಪ್ಪಣಿ ಮಂಡಿಸಿ ಸದರಿ ಪ್ರಸ್ತಾವನೆಯು ಪಾಲಿಕೆಗೆ ಲಾಭದಾಯಕವಾಗಿರುವುದಿಲ್ಲವೆಂದೂ, ಬದಲಾಗಿ ಕಟ್ಟಡ ನಿರ್ಮಾಣ, ನಿರ್ವಹಣೆ, ಮಾಲೀಕತ್ವ ಮತ್ತು ವರ್ಗಾವಣೆ (BOOT-Built Operate Own and Transfer) ಯೋಜನೆಯು ಅತ್ಯುತ್ತಮವಾಗಿರುವುದರಿಂದ ಹಾಲಿ ಸಲ್ಲಿಸಿರುವ ಪ್ರಸ್ತಾವನೆಯು ಪಾಲಿಕೆಯ ಆರ್ಥಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಫಲಪ್ರದವಾಗದಂತಹ ಯೋಜನೆಯೆಂದು ನಿರ್ಣಯಿಸಬಹುದಾಗಿದೆ ಎಂದು ಪೂರಕ ಟಿಪ್ಪಣಿ ಮಂಡಿಸಿರುತ್ತಾರೆ.

ಮುಂದುವರೆದಂತೆ, ದಿನಾಂಕ:19-05-2006 ರಂದು ನಡೆದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ: ಸಾಕಾಸ್ಥಾಸ/329/06-07, ರೀತ್ಯಾ ಇತರೆ ಇಬ್ಬರು ಸಲಹೆಗಾರರು ನೀಡಿರುವ ವರದಿಯನ್ನಾಧರಿಸಿ, ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ. ಸಂಸ್ಥೆಯವರನ್ನು ಪಾಲುದಾರರನ್ನಾಗಿ ಆಯ್ಕೆ ಮಾಡುವುದೆಂದು ತೀರ್ಮಾನಿಸಲಾಯಿತು. ದಿನಾಂಕ:30-10-2006 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ:13(306) ನಡವಳಿಯ ರೀತ್ಯಾ

. . . . .4

ದಿನಾಂಕ:03-05-2006 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ದಿನಾಂಕ:19-05-2006 ರ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು.

ಮೇಲ್ಕಂಡ ಪಾಲಿಕೆ ಸಭೆಯ ನಿರ್ಣಯವನ್ನು ಪ್ರಶ್ನಿಸಿ ಬಿಡ್ಡುದಾರಲ್ಲೊಬ್ಬರಾದ ಮೆ॥ ಆಕೃತಿ ನಿರ್ಮಾಣ್ ಪ್ರೈ. ಲಿ. ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದರು (Writ Petition No.16216/2006). ಸದರಿ ಟೆಂಡರ್ ಅನ್ನು ಅಂಗೀಕರಿಸುವ ಅಧಿಕಾರವು ಘನ ಸರ್ಕಾರದ ವ್ಯಾಪ್ತಿಗೆ ಒಳಪಡುವುದರಿಂದ, ಪಾಲಿಕೆ ಸಭೆಯ ನಿರ್ಣಯವು ಅಂತಿಮವಲ್ಲದೇ ಇರುವುದರಿಂದ ಹಾಗೂ ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ, ಯಾವುದೇ ಅಂತಿಮ ನಿರ್ಧಾರವನ್ನು ಸರ್ಕಾರವು ತೆಗೆದುಕೊಳ್ಳದೇ ಇರುವುದರಿಂದ, ಸರ್ಕಾರದ ವಾದ ಹಾಗೂ ಪಾಲಿಕೆಯ ವಾದವನ್ನು ಆಲಿಸಿದ ನಂತರ, ರಿಟ್ ಅರ್ಜಿಗೆ ಸಂಬಂಧಿಸಿದಂತೆ, ನೀಡಿರುವ ತಡೆಯಾಜ್ಞೆಯು ಸರ್ಕಾರ ತೆಗೆದುಕೊಳ್ಳಬೇಕಾಗಿರುವ ನಿರ್ಣಯಕ್ಕೆ ಅಡ್ಡಿಬರುವುದಿಲ್ಲವೆಂದು ನ್ಯಾಯಾಲಯವು ತೀರ್ಪು ನೀಡಿತು.

ಮುಂದುವರೆದಂತೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಮೇಲಿನ ಆದೇಶದ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರದಿಂದ ದಿನಾಂಕ:30-10-2010 ರಂದು ಪಾಲಿಕೆಯು ತೆಗೆದುಕೊಂಡ ನಿರ್ಣಯವನ್ನು ರದ್ದುಪಡಿಸಿರುವುದಾಗಿ, ದಿನಾಂಕ:09-06-2008 ರಂದು ಆದೇಶ ಹೊರಡಿಸಲಾಯಿತು. ನಂತರದ ಬೆಳವಣಿಗೆಯಲ್ಲಿ ಇ.ಡಬ್ಲ್ಯೂ.ಎಸ್. ವಸತಿಗೃಹದ ನಿವಾಸಿಗಳ ಸಂಘವು ವಸತಿಗೃಹಗಳನ್ನು ಕೂಡಲೇ ನಿರ್ಮಿಸಿಕೊಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿದ್ದ ಮನವಿಯನ್ನು ಆಧರಿಸಿ ಹಾಗೂ ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ. ರವರ ಮನವಿಯನ್ನು ಆಧರಿಸಿ, ಈಜಿಪುರದ ವಸತಿಗೃಹದ ನಿವಾಸಿಗಳ ಹಿತದೃಷ್ಟಿಯಿಂದ, ದಿನಾಂಕ:09-06-2008 ರಂದು ತೆಗೆದುಕೊಂಡ ನಿರ್ಣಯವನ್ನು ಪುನರ್ ಪರಿಶೀಲಿಸಿ, ದಿನಾಂಕ:30-10-2006 ರ ಪಾಲಿಕೆಯ ನಿರ್ಣಯದಂತೆ, ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಅಂಡ್ ಇನ್ವೆಸ್ಟ್‌ಮೆಂಟ್ಸ್ ಪ್ರೈ. ಲಿ. ರವರನ್ನು ಪಾಲುದಾರರನ್ನಾಗಿ ನೇಮಿಸಿ, ವಸತಿಗೃಹ ನಿರ್ಮಾಣ ಮಾಡುವ ಯೋಜನೆಗೆ ಸಂಬಂಧಿಸಿದಂತೆ, ಕೆಳಕಂಡ ಷರತ್ತಿಗೊಳಪಟ್ಟು ದಿನಾಂಕ:26-09-2008 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ.

1) A suitable and legally enforceable Joint Development Agreement should be executed by the Bruhat Bangalore Mahanagara Palike with the Developer (M/s. Maverick Holdings & Investments Pvt. Ltd.) with the best legal advice available.

2) The project should be completed within the stipulated period from the date of execution of the agreement and "Occupancy Certificate" obtained accordingly; no part of the building shall be used by the Developer for any commercial purposes until "Occupancy Certificate" has been obtained and BBMP's share fully delivered to BBMP.

3) Bruhat Bangalore Mahanagara Palike shall ensure adherence to prescribed quality standards in all aspects including materials to be used and for that purpose shall employ such employ such quality supervisors/consultants as may be required.

ಸದರಿ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಮೆ॥ ಆಕೃತಿ ನಿರ್ಮಾಣ ಲಿ. ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂಖ್ಯೆ. W.P. No.13918/2008 (ಎಲ್.ಬಿ-ಬಿಎಂಪಿ) ರೀತ್ಯ ದಾವೆ ಹೂಡಿರುತ್ತಾರೆ. ಸದರಿ ರಿಟ್ ಅರ್ಜಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿತು.

. . . . .5

ಸರ್ಕಾರದ, ಪಾಲಿಕೆಯ ಹಾಗೂ ಅರ್ಜಿದಾರರ ವಾದ ಮತ್ತು ಪ್ರತಿವಾದವನ್ನು ಆಲಿಸಿದ ನಂತರ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:21-09-2010 ರಂದು ತೀರ್ಪು ನೀಡಿದ್ದು, ಪಾಲಿಕೆಯು ದಿನಾಂಕ:30-10-2006 ರಂದು ತೆಗೆದುಕೊಂಡಿರುವ ನಿರ್ಣಯ ಹಾಗೂ ಸರ್ಕಾರವು ದಿನಾಂಕ:26-09-2008 ರಂದು ಹೊರಡಿಸಿರುವ ಆದೇಶವನ್ನು ಎತ್ತಿಹಿಡಿದು, ಕೂಡಲೇ ನಿವಾಸಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಕಾಮಗಾರಿ ಕೈಗೆತ್ತಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಮುಂದುವರೆದಂತೆ, ಮೆ॥ ಆಕೃತಿ ನಿರ್ಮಾಣ ಪ್ರೈ. ಲಿಮಿಟೆಡ್ ರವರು ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದ ಮುಂದೆ ಮತ್ತೊಮ್ಮೆ ದಾವೆ ಹೂಡಿದ್ದು, ಈ ಅರ್ಜಿ ಸಂಖ್ಯೆ. WA/3793 OF 2010 A/W Misc. W.Nos.850 & 3931 of 2011 ಗಳಿಗೆ ಸಂಬಂಧಿಸಿದಂತೆ, ತಡೆಯಾಜ್ಞೆ ಜಾರಿ ಮಾಡಿ 6 ತಿಂಗಳುಗಳ ಅವಧಿಗೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ನಿರ್ದೇಶನ ನೀಡಲಾಯಿತು.

ನಂತರದ ಬೆಳವಣಿಗೆಯಲ್ಲಿ ಅರ್ಜಿದಾರರು ಅರ್ಜಿ ಸಂಖ್ಯೆ: WA/3793 OF 2010 ಅನ್ನು ಹಿಂಪಡೆದಿದ್ದರಿಂದ, ದಿನಾಂಕ:21-04-2011 ರಂದು ಮೇಲಿನ ರಿಟ್ ಅರ್ಜಿ ಹಾಗೂ ರಿಟ್ ಅರ್ಜಿಗಳಾದ Misc. W.Nos.850 & 3931 of 2011 ಗಳನ್ನು ವಜಾಗೊಳಿಸಿ ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಿಂದ ತೀರ್ಪು ನೀಡಲಾಗಿದೆ.

ಈ ಕ್ಷೇತ್ರದಲ್ಲಿ / ಬಡಾವಣೆಯಲ್ಲಿ ವಾಸಿಸುತ್ತಿರುವ ದಲಿತ ಸಂಘ ಸಮಿತಿ ಹಾಗೂ ಇತರೆ ಸಂಘ ಸಂಸ್ಥೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿ, ಪಾಲಿಕೆ ನಿವೇಶನದಲ್ಲಿ ಈಗಾಗಲೇ ಟೆಂಡರ್ ಪ್ರಕ್ರಿಯೆಗಳನ್ನು ಮುಗಿಸಿ ವಸತಿ ಗೃಹ ನಿರ್ಮಾಣಗಳನ್ನು ಕೈಗೆತ್ತಿಕೊಂಡು ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ / ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಿ ಕೊಡಬೇಕೆಂದು ಹಲವಾರು ಮನವಿಗಳನ್ನು ಸಲ್ಲಿಸಿರುವುದು ಸಹ ಕಂಡು ಬಂದಿರುತ್ತದೆ ಹಾಗೂ ಪಾಲಿಕೆಯು ಆದ್ಯತೆ ಮೇರೆಗೆ ತುರ್ತಾಗಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಬೇಕಾಗಿರುವುದೆಂದು ಸರ್ಕಾರವು ಪತ್ರ ಮುಖೇನ ತಿಳಿಸಿರುವುದು ಕಂಡು ಬಂದಿರುತ್ತದೆ.

ಮೇಲ್ಕಂಡ ವಿಷಯದಲ್ಲಿ ಕೋರಮಂಗಲ ಬಡಾವಣೆ ಈಜೀಪುರದಲ್ಲಿ ಖಾಸಗಿ / ಸಾರ್ವಜನಿಕ ಜಂಟಿ ಸಹಭಾಗಿತ್ವದಲ್ಲಿ ಆರ್ಥಿಕವಾಗಿ ದುರ್ಬಲವಾಗಿರುವ ಬಡ ಜನರಿಗೆ ನಿವೇಶನ ನಿರ್ಮಿಸುವ ವಿಷಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯು ದಿನಾಂಕ:30-10-2006 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸರ್ಕಾರವು ದಿನಾಂಕ:18-09-2008 ರ ಸಂಪುಟದ ಸಭೆಯಲ್ಲಿ ಚರ್ಚಿಸಿ, ನಿರ್ಣಯವನ್ನು ಅನುಮೋದನೆ ನೀಡಿರುವಂತೆ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ದಾವೆಗಳು ವಜಾಗೊಂಡು ಮಾನ್ಯ ನ್ಯಾಯಾಲಯವು ಸಹ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ವಸತಿ ಗೃಹಗಳನ್ನು ಆದ್ಯತೆ ಮೇರೆಗೆ ನಿರ್ಮಿಸಿಕೊಡುವಂತೆ ಸೂಚಿಸಲಾಗಿರುವ ವಿಷಯವನ್ನು ಸಹ ಪರಿಗಣನೆಗೆ ತೆಗೆದುಕೊಂಡು ಈಗಾಗಲೇ ಸರ್ಕಾರದ ಅನುಮೋದನೆ ನೀಡಿರುವ ಮೇರೆಗೆ ಸದರಿ ಟೆಂಡರ್ ಪ್ರಕ್ರಿಯೆಗಳಲ್ಲಿ L1 ಟೆಂಡರ್‌ದಾರರಾಗಿ ಅರ್ಹತೆ ಪಡೆದಿರುವ ಮೆ॥ ಮ್ಯಾವರಿಕ್ ಹೋಲ್ಡಿಂಗ್ಸ್ ಮತ್ತು ಇನ್‌ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್‌ರವರಲ್ಲಿ ಒಡಂಬಡಿಕೆ ಮಾಡಿಕೊಂಡು ಜಂಟಿ ಸಹಭಾಗಿತ್ವದಲ್ಲಿ ಯೋಜನೆಯ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲು ಸದರಿ ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳಬೇಕಾಗಿರುತ್ತದೆ.

ಪ್ರಸ್ತಾಪಿತ ವಿಷಯದಲ್ಲಿ ದಿನಾಂಕ:26-09-2008 ರಲ್ಲಿನ ಸರ್ಕಾರಿ ಆದೇಶಗಳಲ್ಲಿ ವಿವರಿಸಿರುವಂತೆ, ಕರಾರು ಒಪ್ಪಂದಗಳನ್ನು ಸದರಿ ಜಂಟಿ ಸಹಭಾಗಿತ್ವದ ಸಂಸ್ಥೆಯೊಡನೆ ಮಾಡಿಕೊಳ್ಳುವ ವಿಷಯದಲ್ಲಿ ಕರಡು ಕರಾರು ಪತ್ರವನ್ನು ತಯಾರಿಸಿ, ಪಾಲಿಕೆಯ ಹಿರಿಯ ವಕೀಲರಾದ ಶ್ರೀ. ಡಿ.ಎನ್.ನಂಜುಂಡರೆಡ್ಡಿ ರವರಿಂದ ಹಾಗೂ ಇನ್ನೊಬ್ಬ ಹಿರಿಯ ವಕೀಲರಿಂದ ಸಹ ಪರಿಶೀಲಿಸಿ ಅಭಿಪ್ರಾಯ ಪಡೆದು ತದನಂತರ ಕರಾರು

. . . . .6

ಪತ್ರವನ್ನು ಸದರಿ ಸಂಸ್ಥೆಯೊಡನೆ ಮಾಡಿಕೊಳ್ಳಬೇಕಾಗಿರುವುದು ಸೂಕ್ತವಾಗಿರುತ್ತದೆ. ವಿಷಯದಲ್ಲಿ ಸದರಿ ಜಂಟಿ ಸಹಭಾಗಿತ್ವದ ಕಾಮಗಾರಿಗಳ ಬಗ್ಗೆ ಸ್ಥಾಯಿ ಸಮಿತಿ (ಕಾಮಗಾರಿ) ಗಳ ನಿರ್ಣಯದ ಮೇರೆಗೆ ಪಾಲಿಕೆಯ ಸಭೆಯಲ್ಲಿ ಸವಿಸ್ತಾರವಾಗಿ ಚರ್ಚಿಸಿ ತೆಗೆದುಕೊಳ್ಳಲಾಗಿರುವ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಘನ ಸರ್ಕಾರವೂ ಸಹ ಸದರಿ ವಿಷಯದಲ್ಲಿ ದಿನಾಂಕ:26-09-2008 ರಲ್ಲಿ ಅನುಮೋದನೆ ನೀಡಿರುತ್ತದೆ ಹಾಗೂ ದಿನಾಂಕ:12-10-2010 ರಲ್ಲಿನ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಪ್ರಸ್ತಾಪಿತ ವಿಷಯದಲ್ಲಿ ಗುತ್ತಿಗೆದಾರರೊಡನೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ವಿಷಯ ಕುರಿತಂತೆ ಸರ್ಕಾರದ ಆದೇಶವನ್ನು ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರವರ ದಿನಾಂಕ: 28-06-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28-06-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:28-06-2011ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (142)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ನಗರ ಪಾಲಿಕೆಯ ವಾರ್ಡ್ ನಂ.43 ರ ಹಿಂದೂ ಬರಿಯಲ್ ಗ್ರೌಂಡ್ ಬಡಾವಣೆಯಲ್ಲಿನ ನಗರ ಪಾಲಿಕೆಯ 125+126/2X50 ಅಡಿಗಳ ಜಾಗವನ್ನು ವರ್ಷಕ್ಕೆ ರೂ.150/-ರಂತೆ ಗುತ್ತಿಗೆ ನಿಗಧಿಪಡಿಸಿ, ಶ್ರೀ.ಕಾವೇರಿ ಆಶ್ರಮ ವಿದ್ಯಾಸಂಸ್ಥೆಯವರಿಗೆ ದಿನಾಂಕ:05-12-1977 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು, ಗುತ್ತಿಗೆ ಅವಧಿಯು ದಿನಾಂಕ:04-12-2007ಕ್ಕೆ ಮುಕ್ತಾಯಗೊಂಡಿರುತ್ತದೆ. ಪ್ರಸಕ್ತ ಮಾರುಕಟ್ಟೆ ದರವನ್ನು ಆಧರಿಸಿ ಮಾಸಿಕ ಗುತ್ತಿಗೆ ಮೊತ್ತ ರೂ.31,114/- ಎಂದು ನಿಗಧಿಪಡಿಸಿ, ಪ್ರತಿ ವರ್ಷವೂ ಶೇ.5% ರಷ್ಟು ಗುತ್ತಿಗೆ ಮೊತ್ತವನ್ನು ಹೆಚ್ಚಿಸುವ ಷರತ್ತುಗಳಿಗೆ ಒಳಪಡಿಸಿ, ಗುತ್ತಿಗೆ ಅವಧಿಯನ್ನು ದಿನಾಂಕ:05-12-2007 ರಿಂದ 30 ವರ್ಷಗಳಿಗೆ ನವೀಕರಿಸುವ ಸಂಬಂಧ ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ, ದಿನಾಂಕ:05-10-2010 ರ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆಯ ಸಭೆಯ ಮುಂದೆ ಪ್ರಸ್ತಾವನೆಯನ್ನು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾಗಿರುತ್ತದೆ.

ಈ ಸಂಬಂಧ ದಿನಾಂಕ:21-12-2010 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:ತೆಆಸ್ಥಾಸ/45/2010-11 ರಲ್ಲಿ ಆಯುಕ್ತರ ದಿನಾಂಕ:05-10-2010ರ ಟಿಪ್ಪಣಿಯನ್ನು ಮಾರ್ಪಡಿಸಿ, ವಾರ್ಷಿಕ ಗುತ್ತಿಗೆ ಮೊತ್ತವನ್ನು ರೂ.1000/- ಗಳಿಗೆ ನಿಗಧಿಪಡಿಸಿ, ದಿನಾಂಕ:05-12-2007 ರಿಂದ 30 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವುದೆಂದು ತೀರ್ಮಾನಿಸಿರುತ್ತದೆ.

ದಿನಾಂಕ:05-04-2011 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ:ನಯೋಅಸ್ಥಾಸ/53/10-11, ರಲ್ಲಿ ಮಾನ್ಯ ಆಯುಕ್ತರ ದಿನಾಂಕ:05-10-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿದ್ದು, ಈ ತೀರ್ಮಾನದ ರೀತ್ಯಾ ಮಾಸಿಕ ಗುತ್ತಿಗೆ ಹಣ ರೂ.31,114/- ಎಂದು ಒಪ್ಪಿದಂತಾಗುತ್ತದೆ.

ನಂತರದಲ್ಲಿ ದಿನಾಂಕ:30-05-2011 ರಂದು ನಡೆದ ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ವಿಷಯದ ಸಂಖ್ಯೆ:21(23)2011-12 ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-12-2010 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯಗಳನ್ನು ಒಪ್ಪುವುದೆಂದು ತೀರ್ಮಾನ ತೆಗೆದುಕೊಂಡಿರುತ್ತದೆ.

ಪ್ರಸ್ತುತ ಶ್ರೀ.ಕಾವೇರಿ ಆಶ್ರಮ ವಿದ್ಯಾಸಂಸ್ಥೆಯವರಿಗೆ ನೀಡಿರುವ ಜಾಗದ ಗುತ್ತಿಗೆ ಅವಧಿ ನವೀಕರಣವು 30 ವರ್ಷಗಳ ಅವಧಿಯದಾಗಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ. ಮೇಲೆ ತಿಳಿಸಿದಂತೆ, ಗುತ್ತಿಗೆ ಮೊತ್ತ ನಿಗಧಿಪಡಿಸುವ ವಿಷಯದಲ್ಲಿ ಸ್ಥಾಯಿ ಸಮಿತಿಗಳ ಹಾಗೂ ನಗರ ಪಾಲಿಕೆಯ ಸಭೆಯ ನಿರ್ಣಯಗಳಲ್ಲಿ ವ್ಯತಿರಿಕ್ತ ನಿರ್ಣಯ ಇರುವುದರಿಂದ ಇದನ್ನು ಸರಿಪಡಿಸಿ ಸ್ಪಷ್ಟವಾದ ನಿರ್ಣಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ಈ ಮೇಲ್ಕಂಡ ನಿರ್ಣಯಗಳನ್ನು ಸರಿಪಡಿಸಲು ಪ್ರಸ್ತಾವನೆಯನ್ನು ನಗರ ಪಾಲಿಕೆಯ ಸಭೆಯ ಮುಂದೆ ಪುನರ್ ಪರಿಶೀಲನೆಗಾಗಿ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

. . . . .2

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21–12–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:21–12–2010ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 25 (144)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.145 ರಲ್ಲಿನ ವಿಲ್ಸನ್‌ಗಾರ್ಡನ್ ವಿದ್ಯಾ ಸಂಸ್ಥೆಗೆ, 9ನೇ ಅಡ್ಡರಸ್ತೆ, ಹೊಂಬೇಗೌಡನಗರದಲ್ಲಿ ಶಿಕ್ಷಣ ಉದ್ದೇಶಕ್ಕಾಗಿ ಪಾಲಿಕೆಯ 1930 ಚ.ಅಡಿ ನಿವೇಶನವನ್ನು ದಿನಾಂಕ:04-02-1978 ರಿಂದ 10 ವರ್ಷಗಳಿಗೆ ವಾರ್ಷಿಕ ಗುತ್ತಿಗೆ ಹಣ ರೂ.6000/- ಗಳನ್ನು ನಿಗಧಿಪಡಿಸಿ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:03-02-1988ಕ್ಕೆ ಮುಕ್ತಾಯಗೊಂಡಿರುತ್ತದೆ.

ವಿಲ್ಸನ್‌ಗಾರ್ಡನ್ ವಿದ್ಯಾಸಂಸ್ಥೆಯವರು ಈ ಜಾಗದಲ್ಲಿ ಶ್ರೀಮತಿ. ಗಂಗಮ್ಮ ಹೊಂಬೇಗೌಡ ಬಾಲಕಿಯರ ಪ್ರೌಢ ಶಾಲೆ ನಡೆಯುತ್ತಿದ್ದು, ಈ ಶಾಲೆಯು ಅನುದಾನಿತ ಶಾಲೆಯಾಗಿದ್ದು, ಸಂಪೂರ್ಣವಾಗಿ ಸರ್ಕಾರದ ಅನುದಾನದಿಂದ ನಡೆಯುತ್ತಿರುತ್ತದೆ. ಈ ಶಾಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಹೆಣ್ಣು ಮಕ್ಕಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿದ್ದು, ಗುತ್ತಿಗೆ ಅವಧಿಯನ್ನು ಮುಂದಿನ 90 ವರ್ಷಗಳಿಗೆ ನವೀಕರಿಸಲು ಕೋರಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಸಂಸ್ಥೆಯು ಹಿಂದಿನ ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸದೇ, ಶಿಕ್ಷಣ ಉದ್ದೇಶಕ್ಕೆ ಬಳಸುತ್ತಿದ್ದು ಹಾಗೂ 2003-04ನೇ ಸಾಲಿನವರೆಗೆ ವಾರ್ಷಿಕ ರೂ.6000/- ಗಳನ್ನು ಪಾವತಿ ಮಾಡಿದ್ದು, ಗುತ್ತಿಗೆ ಅವಧಿ ನವೀಕರಿಸಲು ಪ್ರಸ್ತಾಪಿಸಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ, ಚದರ ಅಡಿ ಒಂದಕ್ಕೆ ರೂ.3,500/- ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 1930 ಚ.ಅಡಿಗಳಾಗಿರುತ್ತದೆ. ಇದರಂತೆ 3500x1930= ರೂ.67,55,000/- ಗಳಾಗುತ್ತದೆ. ದಿನಾಂಕ:01-03-2002ರ ಆಯುಕ್ತರ ಸುತ್ತೋಲೆಯಂತೆ, ಶೇ.10% ರಷ್ಟು ವಾರ್ಷಿಕ ಗುತ್ತಿಗೆ ಹಣವನ್ನು ಪರಿಗಣಿಸಿದಲ್ಲಿ ರೂ.6,75,500/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಹಣ ರೂ.56,300/- ಗಳಾಗುತ್ತದೆ.

ಶೇ.100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು, ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆಯು ನಿರ್ಧಾರ ತೆಗೆದುಕೊಳ್ಳಬಹುದಾಗಿರುತ್ತದೆ.

ಆದುದರಿಂದ, ಈ ಸಂಸ್ಥೆಗೆ ರಿಯಾಯಿತಿ ದರ ನಿಗಧಿಪಡಿಸಿ, ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸಲು ಹಾಗೂ ನವೀಕರಿಸದೆ ಇರುವ ಅವಧಿಗೆ ಈಗ ನಿಗಧಪಡಿಸುವ ದರದಂತೆ ವಸೂಲು ಮಾಡಬಹುದೆಂದು ಅಭಿಪ್ರಾಯಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಸಂಸ್ಥೆಯವರಿಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಹಾಗೂ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-02-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ದಿನಾಂಕ:28-02-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.12,000/- (ಹನ್ನೆರಡು ಸಾವಿರ ಮಾತ್ರ) ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ವಿಷಯದ ಸಂಖ್ಯೆ:52/2011-12 ರಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಯ ಮುಂದೆ ಮರು ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು

ತೀರ್ಮಾನಿಸಿರುವ ನಿರ್ಣಯ ಹಾಗೂ ದಿನಾಂಕ:28-02-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:02-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)

ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (145)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:15-02-1979 ರಂದು ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಆಸ್ತಿ ಬ್ಲಾಕ್ ನಂ.16/ಎಮ್, ಮಿಲ್ಲರ್ ಬೆಡ್ ಪ್ರದೇಶ ಕ್ವೀನ್ಸ್ ರಸ್ತೆಯಲ್ಲಿ ವಿಸ್ತೀರ್ಣ 125x120+125/2, ಅಂದರೆ 15312 ಚದರ ಅಡಿ ಪ್ರದೇಶವನ್ನು ವಾರ್ಷಿಕ ಗುತ್ತಿಗೆ ರೂ.500ಕ್ಕೆ ಪ್ರಸ್ತುತ ಪ್ರದೇಶದಲ್ಲಿ ಜೋಸಲಿನ್ ಕ್ಲಿನಿಕ್ ಮಾದರಿಯಲ್ಲಿ ಡಯಾಬಿಟೀಸ್ ಕಾಯಿಲೆಯ ಬಗ್ಗೆ ಸಂಶೋಧನೆ ಮತ್ತು ಚಿಕಿತ್ಸೆಯ ಬಗ್ಗೆ ಸಮಗ್ರ ಸವಲತ್ತುಗಳನ್ನು ಒದಗಿಸುವ ಉದ್ದೇಶದ ಮೇಲೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ಈ ಗುತ್ತಿಗೆ ಅವಧಿಯು 14-02-2009 ಕ್ಕೆ ಮುಕ್ತಾಯಗೊಂಡಿರುತ್ತದೆ.

ಬೆಂಗಳೂರು ಡಯಾಬಿಟೀಸ್ ಕ್ಲಬ್ ಸಂಸ್ಥೆರವರು ದಿನಾಂಕ:03-12-2007ರಲ್ಲಿ ಅರ್ಜಿ ಸಲ್ಲಿಸಿ, ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ಮುಂದುವರೆಸಲು ಕೋರಿರುತ್ತಾರೆ. ಜಂಟಿ ಆಯುಕ್ತರು (ಪೂರ್ವ) ಮತ್ತು ಸ್ಥಳೀಯ ಅಧಿಕಾರಿಗಳು ತಮ್ಮ ವರದಿಯಲ್ಲಿ ಮುಂದಿನ 30 ವರ್ಷಗಳ ಕಾಲ ಗುತ್ತಿಗೆ ನವೀಕರಿಸಲು ಪ್ರಸ್ತಾಪಿಸಿರುತ್ತಾರೆ.

ಸ್ಥಳ ಪರಿಶೀಲನೆ ಮಾಡಲಾಗಿ, ಪ್ರಸ್ತುತ ಪ್ರದೇಶದಲ್ಲಿ ಸುಸಜ್ಜಿತವಾದ 2 ಅಂತಸ್ತಿನ ಕಟ್ಟಡದೊಂದಿಗೆ ಈ ಸಂಸ್ಥೆಯು ಡಯಾಬಿಟಿಸ್ ರೋಗಿಗಳಿಗೆ ಪ್ರತ್ಯೇಕವಾಗಿ ಆಸ್ಪತ್ರೆ ಸಂಶೋಧನಾ ಕೇಂದ್ರ ಹೊಂದಿದ್ದು, ಕ್ಲಿನಿಕಲ್ ಸಂಶೋಧನೆ ಕೂಡ ನಡೆಸುತ್ತಿದ್ದು, ಶೈಕ್ಷಣಿಕ ಸಂಶೋಧನೆಗಳನ್ನು ನಡೆಸಲಾಗುತ್ತಿದೆ ಮತ್ತು 8 ಕ್ಲಿನಿಕಲ್ ಸಂಶೋಧನೆಗಳನ್ನು ಮಾಡಲಾಗುತ್ತಿದೆಯೆಂದು ದಾಖಲಾತಿಗಳಿಂದ ತಿಳಿದು ಬಂದಿರುತ್ತದೆ. ಈ ಸಂಸ್ಥೆಯು ಪ್ರತಿ ವಾರ ಡಯಾಬಿಟೀಸ್ ಮಕ್ಕಳಿಗಾಗಿ ಉಚಿತವಾಗಿ ಇನ್ಸುಲಿನ್ ನೀಡಲಾಗುತ್ತಿದ್ದು, ಖಾಯಿಲೆ ಗುರುತಿಸುವ ಕಾರ್ಯವು ಸಹ ಮಾಡಲಾಗುತ್ತಿದ್ದು, ಈ ಸಂಸ್ಥೆ ದಾನಿಗಳ ಧನ ಸಹಾಯದಿಂದ ನಡೆಸಲಾಗುತ್ತಿದೆ. ಬೆಂಗಳೂರು ನಗರ ಹೊರತು ಸುತ್ತಮುತ್ತಲಿನ ಪ್ರದೇಶದಲ್ಲಿಯೂ ಕೂಡ ರಕ್ತ ಪರೀಕ್ಷೆ, ಡಯಾಬಿಟೀಸ್ ಖಾಯಿಲೆಯ ಬಗ್ಗೆ ಶಿಕ್ಷಣ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಲಾಗಿರುತ್ತದೆ ಹಾಗೂ ರಾಷ್ಟ್ರದಲ್ಲಿ ಪ್ರಥಮವಾಗಿ ಡಯಾಬಿಟೀಸ್ ಎಜುಕೇಟರ್ಸ್ ಕೋರ್ಸ್ ನಡೆಸುತ್ತಿರುವ ಸಂಸ್ಥೆಯೆಂಬುದಾಗಿ ಅಂತರ್‌ರಾಷ್ಟ್ರೀಯ ಡಯಾಬಿಟೀಸ್ ಫೆಡರೇಷನ್ ಅಂಗೀಕರಿಸಲಾಗಿದೆ ಎಂಬುದಾಗಿ ದಾಖಲೆಯಿಂದ ತಿಳಿದು ಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976 ರ ಕಲಂ 176 ರ (6) ಹಾಗೂ (ಬಿ) II ರ ಪ್ರಕಾರ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು. ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002, ದಿನಾಂಕ:02-06-2003 ರ ಪ್ರಕಾರ ನಗರ ಸ್ಥಳಿಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ, ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ.ಅ.ಕಂ/ಪಿಆರ್/115/01-02, ದಿನಾಂಕ:01-03-2002ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸ್ತುತ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ ಹಾಗೂ ಅಂಗವಿಕಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದಿದ್ದಾರೆ.

ಡಯಾಬಿಟೀಸ್ ಕ್ಲಬ್‌ರವರು ಗುತ್ತಿಗೆ ಅವಧಿಯನ್ನು 30 ವರ್ಷಗಳ ಕಾಲ ವಿಸ್ತರಿಸುವಂತೆ ಮನವಿ ಮಾಡಿದ್ದು, ಸದರಿ ಅರ್ಜಿಯನ್ನು ಪರಿಶೀಲಿಸಿ 2007ನೇ ಸಾಲಿನ ಸರ್ಕಾರದ ಆದೇಶದ ಪ್ರಕಾರ ಪ್ರಸ್ತಾಪಿತ ಸ್ವತ್ತಿನ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3400/- ಗಳನ್ನು ಮತ್ತು ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿ, ಒಟ್ಟು ಮೊತ್ತ ರೂ.4760.00 ಚಾಲ್ತಿಯಲ್ಲಿರುತ್ತದೆ. ಅದರ ಅಳತೆಯ ಪ್ರಕಾರ 15312 ಚದರ ಅಡಿಗಳಿಗೆ ಬಾಡಿಗೆ ಮಾಸಿಕ ಗುತ್ತಿಗೆ ಹಣ ರೂ.6,07,376 ಗಳಾಗಲಿದೆ.

ಈ ಸಂಸ್ಥೆಯು ಸಾರ್ವಜನಿಕರಿಂದ ವಂತಿಗೆ, ಧನಸಹಾಯದಿಂದ ನಡೆಸಲಾಗುತ್ತಿದ್ದು, ಸಾಮಾಜಿಕ ಸೇವೆಯ ಆಧಾರವಾಗಿ ಸೇವೆ ಸಲ್ಲಿಸುತ್ತಿದ್ದು, ಇಷ್ಟೊಂದು ಗುತ್ತಿಗೆ ಹಣ ಸಂದಾಯ ಮಾಡಲು ಸಶಕ್ತವಾಗಿರುವುದಿಲ್ಲ. ಹಿಂದಿನ ಗುತ್ತಿಗೆ ಮೊತ್ತ ವಾರ್ಷಿಕ ರೂ.500/- ಗಳಾಗಿದ್ದು, ಈಗಿನ ಗುತ್ತಿಗೆ ಮೊತ್ತವನ್ನು ಮಾಹೆಯಾನ ರೂಪಾಯಿ ರೂ.5000/- ಗಳಿಗೆ ಹೆಚ್ಚಿಸಿ, ಹಿಂದಿನ ಗುತ್ತಿಗೆ ಮುಕ್ತಾಯವಾದ ದಿನಾಂಕದಿಂದ ಜಾರಿಗೆ ಬರುವಂತೆ 30 ವರ್ಷಗಳ ಅವಧಿಗೆ ನವೀಕರಿಸುವ ಪ್ರಸ್ತಾವನೆಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ನಿರ್ಣಯದ ನಂತರ ಸರ್ಕಾರದ ಅನುಮೋದನೆ ಕೋರಬಹುದಾಗಿದ್ದು, ಈ ಕುರಿತಂತೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ವಿಷಯದ ಸಂಖ್ಯೆ:55/2011-12 ರಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಯ ಮುಂದೆ ಮರು ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ನಿರ್ಣಯ ಹಾಗೂ ಆಯುಕ್ತರ ದಿನಾಂಕ:27-12-2010 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (146)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.78, ಹೊಸ ವಾಡ್ ನಂ.110, ಶಿವಾಜಿನಗರ ವ್ಯಾಪ್ತಿಯ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ಪಕ್ಕದಲ್ಲಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಬಳಿ ಪಾಲಿಕೆ ಮಾರ್ಜಿನಲ್ ಸ್ವತ್ತಿನಲ್ಲಿ 8x10 ಅಡಿಗಳ ಜಾಗವನ್ನು ನಂದಿನಿ ಮಿಲ್ಕ್ ಪಾರ್ಲರ್‌ಗಾಗಿ ದಿನಾಂಕ:10-12-2003 ರಿಂದ 3 ವರ್ಷಗಳ ಕಾಲಾವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:09-12-2006 ರಂದು ಮುಕ್ತಾಯಗೊಂಡಿರುತ್ತದೆ.

ಅರ್ಜಿದಾರರಾದ ಶ್ರೀ. ನಾಗಶಯ್ಯನವರು ಕಛೇರಿಗೆ ಅರ್ಜಿ ಸಲ್ಲಿಸಿ, ಸದರಿ ಗುತ್ತಿಗೆ ಅವಧಿಯನ್ನು ದಿನಾಂಕ:10-12-2006 ರಿಂದ ಮುಂದಿನ 3 ವರ್ಷಗಳ ಕಾಲಾವಧಿಗೆ ನವೀಕರಿಸುವಂತೆ ಕೋರಿ, ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಮಾನ್ಯ ಆಡಳಿತಗಾರರು ಅರ್ಜಿದಾರರ ಮನವಿಯನ್ನು ಪರಿಗಣಿಸಿ, ಮಾನ್ಯ ಆಯುಕ್ತರವರ ಟಿಪ್ಪಣಿ ದಿನಾಂಕ:21-05-2007 ರಂತೆ, ವಿಷಯದ ಸಂಖ್ಯೆ:77/2007-08, ದಿನಾಂಕ:31-07-2007 ರಲ್ಲಿ ಸದರಿ ಗುತ್ತಿಗೆ ಅವಧಿಯನ್ನು ಮಾಸಿಕ ಬಾಡಿಗೆ ರೂ.2000/- ರಂತೆ ನಿಗಧಿಪಡಿಸಿ, ದಿನಾಂಕ:10-12-2006 ರಿಂದ 09-12-2009 ರವರೆಗೆ ನವೀಕರಿಸಲಾಗಿರುತ್ತದೆ.

ತದನಂತರ, ಸದರಿ ಗುತ್ತಿಗೆ ಅವಧಿಯು 09-12-2009 ರಂದು ಕೊನೆಗೊಂಡಿರುತ್ತದೆ. ಗುತ್ತಿಗೆದಾರರು ಪುನ: ಮನವಿ ನೀಡಿ, ಸದರಿ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳ ಕಾಲಾವಧಿಗೆ ನವೀಕರಿಸಲು ಕೋರಿರುತ್ತಾರೆ. ಈ ಸಂಬಂಧವಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟವಾಗಿರುವ ನಂದಿನಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: CVC/BUD/5/06-07, ದಿನಾಂಕ:17-04-2007 ರ ಪಟ್ಟಿಯಂತೆ, ಮಾಸಿಕ ಬಾಡಿಗೆ ರೂ.2,986.60 ಪೈಸೆಗಳಿಗೆ ನಿಗಧಿಪಡಿಸಲಾಗಿದೆ. ಗುತ್ತಿಗೆ ನವೀಕರಣಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಮಾನ್ಯ ಆಯುಕ್ತರು, ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಸ್ವತ್ತಿನ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-11-2010 ರ ಟಿಪ್ಪಣಿ ಹಾಗೂ ದಿನಾಂಕ:09-12-2009 ರಿಂದ ಮೂರು ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ದಿನಾಂಕ:15-11-2010ರ ಆಯುಕ್ತರ ಟಿಪ್ಪಣಿಯಲ್ಲಿರುವಂತೆ ಗುತ್ತಿಗೆ ಅವಧಿ ಕೊನೆಗೊಂಡಿರುವ ದಿನಾಂಕ: 09-12-2009 ರಿಂದ ಮೂರು ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯವನ್ನು ಮಾರ್ಪಡಿಸಿ ಐದು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ಹಾಗೂ ಮಾಸಿಕ ಬಾಡಿಗೆ ರೂ.3,000/- (ಮೂರು ಸಾವಿರ) ಗಳನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ವಿಷಯದ ಸಂಖ್ಯೆ:47/2011-12 ರಲ್ಲಿ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ಸಭೆಯ ಮುಂದೆ ಮರು ಮಂಡಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ನಿರ್ಣಯ ಹಾಗೂ ದಿನಾಂಕ:15-11-2010 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 3 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011 ರ ನಿರ್ಣಯ.

. . . . .2

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:23-05-2011 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:26-07-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (147)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ/302/ಎಂಎನ್‌ಜಿ/2005, ಬೆಂಗಳೂರು, ದಿನಾಂಕ:10-03-2011 ರಲ್ಲಿ ವಾರ್ಡ್ ನಂ.142 ರ ಬಸವಣ್ಣ ದೇವಸ್ಥಾನದ ರಸ್ತೆ, ಸುಂಕೇನಹಳ್ಳಿಯಲ್ಲಿರುವ ಒಳಾಂಗಣ ಕ್ರೀಡಾಂಗಣವನ್ನು ಮುಂದಿನ ಆದೇಶದವರೆಗೆ ರಾಷ್ಟ್ರೋತ್ಥಾನ ಪರಿಷತ್‌ಗೆ ರೂ.1,80,000/- ಗಳನ್ನು ವಾರ್ಷಿಕ ಬಾಡಿಗೆಯನ್ನಾಗಿ ನಿಗಧಿಪಡಿಸಿ, ಬಾಡಿಗೆ ಆಧಾರದ ಮೇಲೆ ಮಂಜೂರಾತಿ ನೀಡಲು ಆದೇಶಿಸಿದೆ. ಗುತ್ತಿಗೆ ಉದ್ದೇಶದ ಬಗ್ಗೆ ಸರ್ಕಾರಿ ಆದೇಶದಲ್ಲಿ ಪ್ರಸ್ತಾಪಿಸಿರುವುದಿಲ್ಲ.

ದಿನಾಂಕ:25-03-2011 ರಂದು ಗುತ್ತಿಗೆ ಕರಾರು ಪತ್ರವನ್ನು ಅಪರ ಆಯುಕ್ತರು (ದಕ್ಷಿಣ) ಹಾಗೂ ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿರವರೊಂದಿಗೆ ಮಾಡಲಾಗಿದ್ದು, ಕರಾರು ಪತ್ರ ನೊಂದಾಯಿಸಲಾಗಿರುವುದಿಲ್ಲ. ಈ ಕರಾರು ಪತ್ರದಲ್ಲಿ, ಒಳಾಂಗಣ ಕ್ರೀಡಾಂಗಣದ ನಿವೇಶನದ ಅಳತೆ 6400 ಚದರ ಅಡಿ ಎಂದಿರುತ್ತದೆ. ಈ ಕ್ರೀಡಾಂಗಣದಲ್ಲಿ ಯೋಗ, ಜಿಮ್ನಾಷಿಯಂ ಇತ್ಯಾದಿ ಒಳಾಂಗಣ ಕ್ರೀಡೆಗಳಿಗೆ ಅವಕಾಶ ಮಾಡುವುದು ಎಂಬುದಾಗಿದೆ ಹಾಗೂ ಷರತ್ತು (6) ರ ಅನುಸಾರ ಲೈಸನ್ಸ್ ಅವಧಿಯು 3 ವರ್ಷಗಳಿಗೆ ಸೀಮಿತಗೊಳಿಸಲಾಗಿದೆ.

ದಿನಾಂಕ:27-06-2011 ರಂದು ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳು ಮನವಿಯನ್ನು ಸಲ್ಲಿಸಿ, ಈ ಮೂರು ವರ್ಷಗಳ ಅವಧಿ ಕಡಿಮೆಯಾಗಿರುವುದರಿಂದ 30 ವರ್ಷಗಳ ಅವಧಿಗೆ ಲೈಸನ್ಸ್ ಅವಧಿ ಹೆಚ್ಚಿಸಿ ಈಗ ವಿಧಿಸಿರುವ ಶುಲ್ಕವನ್ನು ಕಡಿಮೆಗೊಳಿಸಿ, ಆದೇಶ ನೀಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ-1976 ರ ಅನ್ವಯ ಕಲಂ-176ರ ಅಡಿಯಲ್ಲಿ ಹೊರಡಿಸಲಾಗಿರುವ ಪಾಲಿಕೆಯ ಸುತ್ತೋಲೆ ಸಂಖ್ಯೆ: ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ರ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಾಗೂ ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಹಿನ್ನಲೆಯಲ್ಲಿ, ರಾಷ್ಟ್ರೋತ್ಥಾನ ಪರಿಷತ್ ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ಹೆಚ್ಚಿಸಲು ಹಾಗೂ ವಾರ್ಷಿಕ ಗುತ್ತಿಗೆ ದರದಲ್ಲಿ ರಿಯಾಯಿತಿ ನೀಡುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 28-06-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

. . . . .2

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** **"**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01–08–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು**"**.

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 29 (148)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-94 (27) ಸುಭೇದಾರ್ ಛತ್ರಂ ರಸ್ತೆ, ಹಿಮಾಲಯ ಚಿತ್ರಮಂದಿರದ ಮುಂಭಾಗ, ಪ್ರಸಕ್ತ ವಾಹನ ನಿಲುಗಡೆ (ದ್ವಿಚಕ್ರ ವಾಹನಗಳು) ಸ್ಥಳದ ಒಳಭಾಗದಲ್ಲಿ 8x8 ಅಡಿಗಳ ವಿಸ್ತೀರ್ಣದಲ್ಲಿ ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದ ವತಿಯಿಂದ, ಹಾಲಿನ ಮಾರಾಟ ಮಳಿಗೆಯನ್ನು ನಡೆಸುವ ಸಲುವಾಗಿ ದಿನಾಂಕ:15-07-2002 ರಿಂದ 14-07-2003 ರವರೆಗೆ ಒಂದು ವರ್ಷದ ಅವಧಿಗೆ ಮಾಸಿಕ ರೂ.1,000/-ಗಳಂತೆ ಹಾಲಿನ ಬೂತ್ ನಡೆಸಲು ಶ್ರೀ.ಮಂಜುನಾಥ್ ರವರಿಗೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿರುವ ಮೇರೆಗೆ ಸದರಿಯವರು ಪುನ: 5 ವರ್ಷಗಳ ಅವಧಿಗೆ ನವೀಕರಿಸಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ಜಾಗದ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಅನುಮೋದನೆ ಕೋರಿ, ದಿನಾಂಕ:06-01-2004 ರಂದು ಟಿಪ್ಪಣಿಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಿದ್ದು, ದಿನಾಂಕ:21-06-2004 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯಲ್ಲಿ ಆಯುಕ್ತರ ದಿನಾಂಕ:06-01-2004 ರ ಟಿಪ್ಪಣಿಯನ್ನು ಒಪ್ಪಿದ್ದು, ದಿನಾಂಕ:28-06-2004 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯದಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:21-06-2004 ರ ನಿರ್ಣಯವನ್ನು ಒಪ್ಪುವುದೆಂದು ಮತ್ತು ಗುತ್ತಿಗೆ ಅವಧಿಯನ್ನು 3 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಲಾಗಿರುತ್ತದೆ. ಆದರೆ, ಸದರಿ ಗುತ್ತಿಗೆ ಅವಧಿಯು ದಿನಾಂಕ:15-07-2006ಕ್ಕೆ ಮುಗಿದಿದ್ದು, ಪುನ: ದಿನಾಂಕ:04-07-2007 ರ ಮಾನ್ಯ ಆಡಳಿತಗಾರರ ಅನುಮೋದನೆಯಂತೆ 3 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:16-07-2009 ರಂದು ಮುಗಿದಿರುತ್ತದೆ. ಈಗ, ಈ ದಿನಾಂಕದಿಂದ ಪುನ: 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮನವಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧ 2007 ರ ಸರ್ಕಾರದ ಮಾರ್ಗಸೂಚಿಯಂತೆ, ಈ ಸ್ಥಳದ ಮಾರುಕಟ್ಟೆ ದರವು ವಸತಿಯೇತರಕ್ಕೆ ಚದರ ಅಡಿ ಒಂದಕ್ಕೆ ರೂ.10,000/- ಗಳಿದ್ದು, ಹಾಲಿ ಸ್ಥಳದ ವಿಸ್ತೀರ್ಣ 8x8=64 ಚದರ ಅಡಿಗಳಾಗಿದ್ದು, ವಾಣಿಜ್ಯ ಉದ್ದೇಶಕ್ಕಾಗಿ ಶೇಕಡ 40% ರಷ್ಟು ಹೆಚ್ಚಿಸಲಾಗಿ ಚದರ ಅಡಿ ಒಂದಕ್ಕೆ ರೂ.14,000/- ಗಳಾಗುತ್ತದೆ. ಅದರಂತೆ ಲೆಕ್ಕಾಚಾರ ಮಾಡಿದಾಗ ಸ್ವತ್ತಿನ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.14,000x64=8,96,000/- ಗಳಾಗುತ್ತದೆ. ಅದರಲ್ಲಿ ಶೇ.10% ರಷ್ಟು ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 89,600/- ಗಳಾಗಿದ್ದು ಮತ್ತು ಮಾಸಿಕ ಗುತ್ತಿಗೆ ಮೊತ್ತ ರೂ.7,466/- ಗಳಾಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಆರ್.ಮಂಜುನಾಥ್ ಇವರಿಗೆ ಹಾಲಿನ ಕೇಂದ್ರ ನಡೆಸಲು ಗುತ್ತಿಗೆ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷದ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-05-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-06-2011 ರ ನಿರ್ಣಯ ಹಾಗೂ ದಿನಾಂಕ:07-06-2011 ರ ನಗರ ಯೋಜನೆ ಮತ್ತು

. . . . .2

ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.1,500/- (ಒಂದು ಸಾವಿರದ ಐದು ನೂರು) ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (149)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 165, ಗಣೇಶ ಮಂದಿರ (ಹಳೆ ವಾರ್ಡ್ ನಂ. 55) ಮತ್ತು ವಾರ್ಡ್ ನಂ. 182 ಪದ್ಮನಾಭನಗರದಲ್ಲಿ ಬರುವ (ಹಳೆ ವಾರ್ಡ್ ನಂ. 56) ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ನಾಗರೀಕ ಸೌಲಭ್ಯ ಕಲ್ಪಿಸಲು ಅಂದರೆ ಮೇಲುಸೇತುವೆ ನಿರ್ಮಿಸಲು 30 ಸ್ವತ್ತುಗಳ 2695.042 ಚ. ಮೀ. (28999.0 ಚದರ ಅಡಿ) ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮೇಲುಸೇತುವೆ ನಿರ್ಮಾಣ ಕಾಮಗಾರಿಗಾಗಿ ಪ್ರಸ್ತಾಪಿಸಿರುವ ಸ್ವತ್ತುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾಗಿರುವ ಬಡಾವಣೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಖಾಸಗಿ ಬಡಾವಣೆಗಳಿಗೆ ಸೇರಿದವುಗಳಾಗಿದ್ದು, ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | C.T.S.No./ B.D.A. Site No. | ಖಾತೆದಾರರ/ ಅನುಭವದಾರರ ಹೆಸರು | ಖಾತೆ ನಂ. | ವಿಸ್ತೀರ್ಣ (ಚ.ಅ.) (ಖಾತೆಯಂತೆ) ಮತ್ತು ತರಹೆ | ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿರುವ ವಿಸ್ತೀರ್ಣ | |
|---|---|---|---|---|---|---|
| | | | | | ಚ.ಮೀ. ಗಳಲ್ಲಿ | ಚ. ಅಡಿಗಳಲ್ಲಿ |
| ಕನಕಪುರ ರಸ್ತೆ ಜಂಕ್ಷನ್ ನಂತರ 100 ಅಡಿ ರಿಂಗ್ ರಸ್ತೆ ಎಡಭಾಗದ ಸ್ವತ್ತುಗಳು | | | | | | |
| 1 | 2170/1570 | ಕೆ. ಹೆಚ್. ರಮೇಶ್ | 56/32/1570 | 2800 ಆರ್‌ಸಿಸಿ ಕಟ್ಟಡ | 1.197 (1.20) | 12.88 |
| 2 | 2169/1569 | ಕೆ. ಅಬ್ದುಲ್‌ವಹಾಬ್ | 56/32/1569 | 3264 ಕಟ್ಟಡ+ ಬೋರ್‌ವೆಲ್ | 8.261 | 88.89 |
| 3 | 2168/1568 | ಸಿ.ಆರ್. ನರಸಿಂಹಮೂರ್ತಿ | 56/32/1568 | 3185 ಆರ್‌ಸಿಸಿ ಕಟ್ಟಡ+2 ಮರ+ ಬೋರ್‌ವೆಲ್ | 17.596 | 189.33 |
| 4 | 2167/1567 | ಕೆ.ಗಣಪತಿ | 56/32/1567 | 2800 ಕಟ್ಟಡ+ ಬೋರ್‌ವೆಲ್ | 20.909 | 224.98 |
| 5 | 2166/1566 | ಕೆ.ಎಲ್. ರಾಮಲಿಂಗಶಾಸ್ತ್ರಿ | 56/32/1566 | 2800 ಕಟ್ಟಡ, ಮರ, ಬೋರ್‌ವೆಲ್ (1032 ಚ.ಅ) | 25.430 | 273.63 |
| 6 | 2166/1565 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 56/CA/ 1461/A | ಖಾಲಿ ನಿವೇಶನ | 74.665 | 803.40 |
| 7 | 2104 ದೋಬಿ ಘಾಟ್ | ಬಿ.ಡಿ.ಎ. ಸ್ವತ್ತು | ಖಾತೆ ಯಾಗಿರುವುದಿಲ್ಲ | ಎಸಿ ಶೀಟ್ ಶೆಡ್‌ಗಳು | 33.384 | 359.21 |
| 8 | 2197/CA-1461/ A, ಬಿ.ಡಿ.ಎ ಸ್ವತ್ತು | ಕರ್ನಾಟಕ ಅಗ್ನಿ ಶಾಮಕ ದಳ ಇಲಾಖೆಯ fire station (lessee) | ಖಾತೆಯಾಗಿರು ವುದಿಲ್ಲ | 12870.00 ಕಾಂಪೌಂಡ್ | 7.924 | 85.26 |

. . . . .2

| | | | | | | |
|---|---|---|---|---|---|---|
| 9 | 2197/CA-1461 (ಬಿ.ಡಿ.ಎ ಸ್ವತ್ತು) | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (KPTCL) A power house (lessee) | 56/1461/A | 6800 ಕಾಂಪೌಂಡ್ | 11.814 | 127.12 |
| 10 | 2197/CA 1461 (ಬಿ.ಡಿ.ಎ ಸ್ವತ್ತು) | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (KPTCL) A power house (lessee) | ಖಾತೆಯಾಗಿ ರುವುದಿಲ್ಲ | ಕಾಂಪೌಂಡ್ | 2.220 | 23.89 |
| **ಕಿತ್ತೂರು ರಾಣಿ ಚೆನ್ನಮ್ಮ ಜಂಕ್ಷನ್‌ನಿಂದ ವಿದ್ಯಾಪೀಠದ ಎಡಭಾಗದ ಸ್ವತ್ತುಗಳು** | | | | | | |
| 11 | ಸೈಟ್ ನಂ – 1 BDA Approved Layout | ಶ್ರೀಮತಿ. ಸಿ.ಜಿ.ಸರೋಜಮ್ಮ | 56/1 | 28000 ಕಾಂಪೌಂಡ್ | 45.067 | 484.92 |
| 12 | ಸೈಟ್ ನಂ –609 BDA Approved Layout | ಶ್ರೀಮತಿ. ನಳಿನಾಕ್ಷಿ ಸಿ. | 56/609 | 4800 ಆರ್‌ಸಿಸಿ ಕಟ್ಟಡ | 64.905 | 698.38 |
| 13 | ಸೈಟ್ ನಂ –610 BDA Approved Layout | ಶ್ರೀಮತಿ. ಸುಮಿತ್ರಮ್ಮ ಶ್ರೀನಿವಾಸ | 56/610 | 4000 ಖಾಲಿ ನಿವೇಶನ | 62.140 | 668.63 |
| 14 | ಸೈಟ್ ನಂ – 611 BDA Approved Layout | ಶ್ರೀಮತಿ. ಪುಷ್ಪಲತಾ | 56/611 | 4000 ಖಾಲಿ ನಿವೇಶನ + 3 ಮರ | 61.847 | 665.47 |
| **100 ರಿಂಗ್ ರಸ್ತೆಯ ಎಡಭಾಗದ ಆಸ್ತಿಗಳು (ಕನಕಪುರ ರಸ್ತೆಯ ಕಡೆಗೆ)** | | | | | | |
| 15 | ಸೈಟ್ ನಂ – 612 BDA Approved Layout (CA Site) | ಶ್ರೀಮತಿ. ಅನಿತಾ ಕುಮಾರಸ್ವಾಮಿ | 56/612 | 4620 ಎಸಿ ಶೀಟ್ ಕಟ್ಟಡ | 120.889 | 1300.77 |
| 16 | ಸೈಟ್ ನಂ – 613 BDA Approved Layout | ಶ್ರೀಮತಿ. ಅನಿತಾ ಕುಮಾರಸ್ವಾಮಿ | 56/613 | 4620 ಆರ್‌ಸಿಸಿ ಕಟ್ಟಡ | 38.874 | 418.28 |
| 17 | ಸೈಟ್ ನಂ – 614 BDA Approved Layout | ಶ್ರೀ. ಶಾಂತಾ ಚೆನ್ನೇಗೌಡ | 56/614 | 3300 ಖಾಲಿ ನಿವೇಶನ | 58.070 | 624.83 |
| 18 | ಸೈಟ್ ನಂ – 615 BDA Approved Layout | ಶ್ರೀ. ಎನ್.ಚಿನ್ನಪ್ಪ ನಾಯ್ಡು ಮತ್ತು ಶ್ರೀ.ಎನ್. ಜಯರಾಂ (ಜಂಟಿ) | 56/615 | 3300 ಆರ್‌ಸಿಸಿ ಕಟ್ಟಡ+ ಬೋರ್‌ವೆಲ್ | 24.387 | 262.40 |

. . . . .3

| | | | | | | |
|---|---|---|---|---|---|---|
| 19 | (CA Site) | ಬಿ.ಬಿ.ಎಂ.ಪಿ ಉದ್ಯಾನವನ | ಖಾತೆಯಾಗಿರುವುದಿಲ್ಲ | ಉದ್ಯಾನವನ ಮತ್ತು ಕಾಂಪೌಂಡ್ | 60.009 | 645.70 |
| 20 | ಬಿ.ಡಿ.ಎ ಸ್ವತ್ತು (CA Site) | ಸಪ್ತರ್ಷಿ ಫೌಂಡೇಶನ್ ಟ್ರಸ್ಟ್ Lessee | 56/275/ CA/01 | 3020.0625 ಖಾಲಿ ನಿವೇಶನ | 19.810 | 213.156 |
| 21 | ಬಿ.ಡಿ.ಎ ಸ್ವತ್ತು (CA Site) | ಒಕ್ಕಲಿಗರ ಸಂಘ Lessee | 56-42- CA19/ CA 21 | 658 * 279.5 | 09.255 | 99.584 |
| **100 ಅಡಿ ರಿಂಗ್ ರಸ್ತೆಯ ಬಲಭಾಗದ ಆಸ್ತಿಗಳು (ಮೈಸೂರು ರಸ್ತೆ ಕಡೆಗೆ)** | | | | | | |
| 22 | ಸೈಟ್ ನಂ - 306 BDA Approved Layout | ಆರ್.ನಿರಂಜನಾರಾಧ್ಯ, ಎಸ್. ಆರ್. ಶಿವಪ್ರಸಾದ್, ಎಸ್.ಆರ್. ಹರ್ಷ & ಅನುರಾಧ ವಿಜಯ್ | 55/182/306 | 4000 ಆರ್‌ಸಿಸಿ ಕಟ್ಟಡ | 3.879 | 41.74 |
| 23 | ಸೈಟ್ ನಂ - 307 BDA Approved Layout | ಶ್ರೀ. ಪವನ್‌ಕುಮಾರ್ ಮತ್ತು ಶ್ರೀ. ಸುಶೀಲ್ ಕುಮಾರ್ (ಜಂಟಿ) | (55)/182/307 | 372.00 ಚ.ಮೀ ಆರ್‌ಸಿಸಿ ಕಟ್ಟಡ | 10.761 | 115.79 |
| 24 | ಸೈಟ್ ನಂ - 308 BDA Approved Layout | ಶ್ರೀ. ಬಿ.ಆರ್.ಮೋಹನ್ | (55)/182/308 | 4000 ಆರ್‌ಸಿಸಿ ಕಟ್ಟಡ | 13.801 | 148.50 |
| 25 | ಸೈಟ್ ನಂ - 309 BDA Approved Layout | ಶ್ರೀಮತಿ. ಬಿ.ವಿ. ಉಷಾದೇವಿ | (55)/182/309 | 4000 ಆರ್‌ಸಿಸಿ ಕಟ್ಟಡ | 18.490 | 198.95 |
| 26 | ಸೈಟ್ ನಂ - 310 BDA Approved Layout | ಶ್ರೀ. ಶಿವಲಿಂಗಯ್ಯ | (55)/182/310 | 4000 ಆರ್‌ಸಿಸಿ ಕಟ್ಟಡ | 27.675 | 297.78 |
| 27 | ಸೈಟ್ ನಂ - 311 BDA Approved Layout | ಶ್ರೀ. ವೈ.ಎ.ಸುಬ್ರಮಣ್ಯ, ಶ್ರೀ. ವೈ.ಎ. ಶಿವಕುಮಾರ್, ಶ್ರೀ. ವೈ.ಎ.ಬಾಲಕೃಷ್ಣ | (55)/182/311 & 310A | 5488 ಆರ್‌ಸಿಸಿ ಕಟ್ಟಡ | 47.956 | 516.01 |
| 28 | ಬಿ.ಡಿ.ಎ ಸ್ವತ್ತು ಸರ್ಕಾರಿ ಕೆರೆ ಜಾಗ | Regional institute of Co-op Management | ಖಾತೆಯಾಗಿರುವುದಿಲ್ಲ | ಕಾಂಪೌಂಡ್ | 197.488 | 2124.97 |
| 29 | CTS NO-2197 | CITB (ಬಿ.ಡಿ.ಎ ಸ್ವತ್ತು) | ಖಾತೆಯಾಗಿರುವುದಿಲ್ಲ | ಖಾಲಿ ಜಾಗ | 230.113 | 2476.0 |
| 30 | CTS NO-2197 | CITB (ಬಿ.ಡಿ.ಎ ಸ್ವತ್ತು) | ಖಾತೆಯಾಗಿರುವುದಿಲ್ಲ | ಖಾಲಿ ಜಾಗ | 1376.226 | 14808.19 |
| | | | | ಒಟ್ಟು | **2695.042** | **28999.0** |

. . . . .4

ಮೇಲ್ಕಂಡ ಸ್ವತ್ತುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿತ ಬಡಾವಣೆಗಳಾಗಿ ಹಂಚಿಕೆಯಾಗಿರುವ ಸ್ವತ್ತುಗಳೆಂದು ತಿಳಿದುಬಂದಿರುತ್ತದೆ. ಇವುಗಳಲ್ಲಿ ಕೆಲವು ಸ್ವತ್ತುಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾತೆ ದಾಖಲಾಗಿರುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿ (ಬನಶಂಕರಿ) ಮತ್ತು ಸಹಾಯಕ ಕಂದಾಯ ಅಧಿಕಾರಿ (ಪದ್ಮನಾಭನಗರ) ರವರುಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಭೂಸ್ವಾಧೀನ ಕಾಯ್ದೆಯ ಕಲಂ 5(ಎ) ರ ವಿಚಾರಣೆಯಲ್ಲಿ ಈ ಸ್ವತ್ತುಗಳ ಹಕ್ಕು ದಾಖಲೆಗಳನ್ನು ಪರಿಶೀಲಿಸಬಹುದಾಗಿರುತ್ತದೆ.

ಪ್ರಸ್ತಾಪಿತ ಭೂಸ್ವಾಧೀನ ಸ್ವತ್ತುಗಳ ಸ್ಥಳ ತನಿಖೆಯನ್ನು ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ: 07-04-2011 ರಂದು ನಡೆಸಿದ್ದು, ಪ್ರಸ್ತಾಪಿತ ಭೂಸ್ವಾಧೀನ ಸ್ವತ್ತುಗಳಲ್ಲಿ ಕ್ರಮ ಸಂಖ್ಯೆ 19 ರಲ್ಲಿನ ಸ್ವತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಉದ್ಯಾನವನದ ಜಾಗವಾಗಿದ್ದು, ಇದರಲ್ಲಿ 645.70 ಚ.ಅಡಿ ವಿಸ್ತೀರ್ಣವನ್ನು ಈ ಕಾಮಗಾರಿಗಾಗಿ ಉಪಯೋಗಿಸುತ್ತಿದ್ದು, ಇದು ಪಾಲಿಕೆಗೆ ಸೇರಿದ ಜಾಗವಾಗಿರುವುದರಿಂದ ಇದನ್ನು ಭೂಸ್ವಾಧೀನಪಡಿಸಿಕೊಂಡು ಪರಿಹಾರ ಪಾವತಿಸುವ ಅವಶ್ಯಕತೆ ಇರುವುದಿಲ್ಲ. ಕ್ರಮ ಸಂಖ್ಯೆ 6, 7, 8, 9, 10, 20, 21, 28, 29 ಮತ್ತು 30ರ ಸ್ವತ್ತುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ನಾಗರೀಕ ಸೌಲಭ್ಯ ನಿವೇಶನಗಳಾಗಿದ್ದು, ಇವುಗಳನ್ನು ಕೆಲವು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗಿದ್ದು, ಇವುಗಳಲ್ಲಿರುವ ಕಟ್ಟಡಗಳಿಗೆ ಸಂಬಂಧಪಟ್ಟಂತೆ, ಅವುಗಳ ಹಾಲಿ ಗುತ್ತಿಗೆದಾರರಿಗೆ/ಖಾತೆದಾರರಿಗೆ/ಅನುಭವದಾರರಿಗೆ ಕಟ್ಟಡಗಳ ಪರಿಹಾರವನ್ನು ಮಾತ್ರ ನೀಡಬಹುದಾಗಿರುತ್ತದೆ.

ಹಾಗೂ ಈ ನಿವೇಶನಗಳಲ್ಲಿ ಮೇಲುಸೇತುವೆ ಕಾಮಗಾರಿಗಾಗಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಖಾಲಿ ಜಾಗಗಳ ಒಟ್ಟು 21,120.78 ಚದರ ಅಡಿ ವಿಸ್ತೀರ್ಣವನ್ನು ಉಚಿತವಾಗಿ ಪಾಲಿಕೆಗೆ ಹಸ್ತಾಂತರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಸ್ಥೆಯನ್ನು ಕೋರಲಾಗಿದೆ. ಆದರೆ, ಈ ಜಾಗಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಉಚಿತವಾಗಿ ನೀಡಲು ನಿರಾಕರಿಸಿದಲ್ಲಿ, ಈ ಸ್ವತ್ತುಗಳಿಗೂ ಸಹ ಪರಿಹಾರ ಪಾವತಿಸಬೇಕಾಗಿರುವುದರಿಂದ, ಈ ಸ್ವತ್ತುಗಳಿಗೂ ಸಹ ಈಗಲೇ ಪರಿಹಾರ ನಿಗಧಿಪಡಿಸಿ, ನಂತರ ಪ್ರಾಧಿಕಾರದೊಂದಿಗೆ ಪತ್ರ ವ್ಯವಹರಣೆ ನಡೆಸಿ, ಪ್ರಾಧಿಕಾರವು ಸದರಿ ಸ್ಥಳಗಳನ್ನು ಉಚಿತವಾಗಿ ಹಸ್ತಾಂತರಿಸಲು ಒಪ್ಪಿಗೆ ನೀಡಿದಲ್ಲಿ, ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಹಂತದ ಅವಾರ್ಡ್ ರಚನೆ ಸಮಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಈ ಸ್ವತ್ತುಗಳಿಗೆ ಪರಿಹಾರ ಪಾವತಿಸುವುದನ್ನು ಕೈಬಿಡಬಹುದಾಗಿದೆ. ಆದ್ದರಿಂದ, ಕ್ರಮಸಂಖ್ಯೆ 19 ರ ಸ್ವತ್ತನ್ನು ಕೈಬಿಟ್ಟು ಉಳಿದ 29 ಸ್ವತ್ತುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿತ ಗೃಹ ನಿರ್ಮಾಣ ಸಂಘದ ಬಡಾವಣೆಗಳಲ್ಲಿರುವ ಸ್ವತ್ತುಗಳಾಗಿರುವುದರಿಂದ, ಈ ಸ್ವತ್ತುಗಳಿಗೆ ಸರ್ಕಾರದ ದಿನಾಂಕ: 19-04-2007 ರ ಮಾರ್ಗಸೂಚಿ ಬೆಲೆ ಅನ್ವಯ ಪರಿಹಾರವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**"ಅ" - ಭೂ ಪರಿಹಾರ ವೆಚ್ಚ**

| ಕ್ರ.ಸಂ. | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ: 19-04-2007 ರ ಸರ್ಕಾರದ ಮಾರ್ಗಸೂಚಿ ದರದಂತೆ,<br>1. ಕ್ರಮಸಂಖ್ಯೆ 1 ರಿಂದ 10, 15 ರಿಂದ 18, 20 ರಿಂದ 30 ರವರೆಗಿನ ಹೊರವರ್ತುಲ ರಸ್ತೆಗೆ ಅಭಿಮುಖವಾಗಿರುವ 25 ಸ್ವತ್ತುಗಳಿಗೆ ಚ.ಅಡಿ ಒಂದಕ್ಕೆ ರೂ.4,400/- ರಂತೆ 25835.9 ಚದರ ಅಡಿಗಳಿಗೆ | 11,36,77,960/- |
| | 2. ಕ್ರಮಸಂಖ್ಯೆ 11 ರಿಂದ 14 ರವರೆಗಿನ 30ನೇ ಮುಖ್ಯ ರಸ್ತೆಯಲ್ಲಿನ ಖಾಸಗಿ 4 ಸ್ವತ್ತುಗಳಿಗೆ ಚ.ಅಡಿ ಒಂದಕ್ಕೆ ರೂ.2,600/- ರಂತೆ 2517.4 ಚದರ ಅಡಿಗಳಿಗೆ | 65,45,240/- |

. . . . .5

| | | |
|---|---|---|
| | 3. ಕಟ್ಟಡಗಳ ಮೌಲ್ಯ (ಇಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುವ ಲೆಕ್ಕಾಚಾರ ವ್ಯಾಲ್ಯುವೇಷನ್ ತಃಖ್ತೆಯಂತೆ) | 71,28,764/- |
| **ಒಟ್ಟು** | | **12,73,51,964/-** |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡ 30 ರಂತೆ ಶಾಸನ ಬದ್ಧ ಭತ್ಯೆ | 3,82,05,589/- |
| 3 | 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 1,52,82,236/- |
| **ಒಟ್ಟು (1+2+3)** | | **18,08,39,789/-** |

**"ಆ" – ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡ 10 ರಷ್ಟು | – |
| 5 | ಆಡಿಟ್ ವೆಚ್ಚ ಶೇಕಡ 1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | 2,00,000/- |
| **ಒಟ್ಟು (1+2+3+6)** | | **18,10,39,789/-** |
| ಷರಾ: ದಿನಾಂಕ: 5-09-1063 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ. | | |

**(ಅ+ಆ) ಒಟ್ಟು**

**(ರೂ. ಹದಿನೆಂಟು ಕೋಟಿ ಹತ್ತು ಲಕ್ಷದ ಮೂವತ್ತೊಂಭತ್ತು ಸಾವಿರದ ಏಳು ನೂರ ಎಂಭತ್ತೊಂಭತ್ತು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ, 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.18,10,39,789/- (ರೂ. ಹದಿನೆಂಟು ಕೋಟಿ ಹತ್ತು ಲಕ್ಷದ ಮೂವತ್ತೊಂಭತ್ತು ಸಾವಿರದ ಏಳು ನೂರ ಎಂಭತ್ತೊಂಭತ್ತು ಮಾತ್ರ) ಗಳನ್ನು ಪಾಲಿಕೆಯ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-06-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01–08–2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:07–09–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (150)/2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಿಶೇಷವಿತ್ತ ವಲಯಕ್ಕೆ (SEZ) ಸಂಪರ್ಕ ಕಲ್ಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ–23, ನಾಗವಾರ ವ್ಯಾಪ್ತಿಯಲ್ಲಿನ ಹೊರವರ್ತುಲ ರಸ್ತೆಯಿಂದ ಕೆಂಪಾಪುರದವರೆಗೆ (ನಾಗವಾರ ಕೆರೆ ಏರಿ ಮೂಲಕ) ಸರಪಳಿ 0.0 ರಿಂದ 1.00 ಮೀ.ರವರೆಗೆ 100 ಅಡಿ ಅಗಲದ ರಸ್ತೆ ನಿರ್ಮಾಣ ಮಾಡಲು ಬೇಕಾಗುವ ನಾಗವಾರ ಗ್ರಾಮದ ಸರ್ವೇ ನಂ.50/1ಎ ರಲ್ಲಿ 3266.98 ಚ.ಅಡಿ ಹಾಗೂ ಸರ್ವೆ ನಂ.158ರಲ್ಲಿ 2178 ಚ.ಅ.ಗಳ ಒಟ್ಟು 5444.98 ಚ.ಅಡಿ ವಿಸ್ತೀರ್ಣದ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ:29–05–2010 ರಂದು ನಡೆದ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ವಿಷಯದ ಸಂಖ್ಯೆ:17/2010–11 ರಂತೆ ನಿರ್ಣಯ ಕೈಗೊಳ್ಳಲಾಗಿದ್ದು, ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಭೂಸ್ವಾಧೀನ ಕಾಯ್ದೆಯ ಕಲಂ 4(1) ರನ್ವಯ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಯೋಜನೆಗೆ ನಾಗವಾರ ಗ್ರಾಮದ ಸರ್ವೆ ನಂ.73/1 ರಲ್ಲಿನ 03 ಗುಂಟೆ ಜಮೀನು ಸಹ ಅವಶ್ಯಕತೆ ಇರುವುದಾಗಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ (ವಿಶೇಷ ವಿಭಾಗ–1) ರವರು ದಿನಾಂಕ:03–05–2011 ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು 5.23 ಎ–ಗು ವಿಸ್ತೀರ್ಣದ ಜಮೀನು ಇದ್ದು, (ಆರ್.ಟಿ.ಸಿ. ಪ್ರಕಾರ) ಈ ವಿಸ್ತೀರ್ಣದಲ್ಲಿ ಖರಾಬು 12 ಗುಂಟೆ ಕಳೆದು ಬಾಕಿ 5ಎ–11 ಗುಂಟೆ ಜಮೀನಿನಲ್ಲಿ 2 ಎಕರೆ 37 ಗುಂಟೆ ಜಮೀನನ್ನು ಅರ್ಕಾವತಿ ಬಡಾವಣೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡಿರುತ್ತದೆ. (ಅಧಿಸೂಚನೆ ಸಂಖ್ಯೆ:ಯುಡಿಡಿ 193 MNX 2004, ಬೆಂಗಳೂರು, ದಿನಾಂಕ:23–02–2004). ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:23–02–2004 ರಂದು ಪ್ರಕಟವಾಗಿರುತ್ತದೆ.

ಆದರೆ, ವಿಶೇಷ ವಿತ್ತ ವಲಯಕ್ಕಾಗಿ (SEZ) ಭೂಸ್ವಾಧೀನಪಡಿಸಿಕೊಳ್ಳುತ್ತಿರುವ, ನಾಗವಾರ ಗ್ರಾಮದ ಸರ್ವೆ ನಂಬರ್–73/1 ರಲ್ಲಿನ 03 ಗುಂಟೆ ವಿಸ್ತೀರ್ಣವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನವಾಗಿರುವುದಿಲ್ಲವೆಂದು, ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ವಾಯುವ್ಯ), ಪರ್ಯಾವೇಕ್ಷಕರು ಹಾಗೂ ಬಿಡಿಎ ಪರ್ಯಾವೇಕ್ಷಕರು ಜಂಟಿ ಅಳತೆ ತ:ಖ್ತೆಯಲ್ಲಿ ವರದಿ ಮಾಡಿರುತ್ತಾರೆ. ಆದುದರಿಂದ, ಈ ಕಾಮಗಾರಿಗಾಗಿ ಮೇಲ್ಕಂಡ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ.

ನಾಗವಾರ ಗ್ರಾಮದ ಸರ್ವೆ ನಂ.73/1, 2010–11 ನೇ ಸಾಲಿನ ಆರ್.ಟಿ.ಸಿ ಯನ್ನು ಪರಿಶೀಲಿಸಲಾಗಿ ಅದರ ವಿವರಗಳು ಈ ಕೆಳಕಂಡಂತೆ ಇರುತ್ತದೆ;

**ಬೆಂಗಳೂರು ಉತ್ತರ ತಾಲ್ಲೂಕು** **ಕಸಬಾ ಹೋಬಳಿ** **ನಾಗವಾರ ಗ್ರಾಮ**

| ಖಾತೆದಾರರ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ಒಟ್ಟು ವಿಸ್ತೀರ್ಣ ಎ–ಗು | ಖರಾಬು ಎ–ಗು | ಐನು ಎ–ಗು | ಭೂಸ್ವಾಧೀನಕ್ಕೆ ಬೇಕಾದ ವಿಸ್ತೀರ್ಣ |
|---|---|---|---|---|---|---|
| 1 | 2 | 3 | 4 | 5 | 6 | 7 |
| ದಾವೀದಪ್ಪ ವೆಂಕಟಪ್ಪ.ಎಂ<br>ಅರವಿಂದ್ ಕುಮಾರ್ ಪರೇಕ್ ಬಿನ್ ಲೇ.ಮಂಗೀಲಾಲ್<br>ಆನಂದ ಸುರಾನಾ ಕೋಂ ಗೇವರ್ ಚಂದ್ ಸುರಾನ್<br>ಆನಂದ ಸುರಾನಾ ಬಿನ್ ಫೇವಿಯರ ಸುರಾನ<br>ಅರವಿಂದ್ ಪಾರೇಖ್ ಬಿನ್ ಲೇಟ್ ಮಂಗೀಲಾಲ್ | ದಾವೀದಪ್ಪ<br>ಜೇಜಪ್ಪ.ಆರ್<br>ಕೋದಂಡರಾಮ.ಎಂ<br>ವೆಂಕಟಪ್ಪ.ಎಂ.<br>ಅರವಿಂದ್ ಪರೇಖ್<br>ಆನಂದ ಸುರಾನಾ<br>ಅರವಿಂದ್ ಪಾರೇಖ್ | 73/1 | 5–23 | 0–12 | 5–11 | 03 ಗುಂಟೆ (3267 ಚ.ಅ) |

. . . . .2

ಭೂಸ್ವಾಧೀನಪಡಿಸಕೊಳ್ಳಲು ಪ್ರಸ್ತಾಪಿಸಿರುವ ಜಮೀನು ವ್ಯವಸಾಯದ ಜಮೀನಾಗಿದ್ದು, ಇದಕ್ಕೆ ಸರ್ಕಾರವು ಪ್ರಕಟಿಸಿರುವ ಮಾರ್ಗಸೂಚಿ ದರವು ಎಕರೆ ಒಂದಕ್ಕೆ ರೂ.2,50,00,000/- ಗಳಾಗಿರುತ್ತದೆ. ಈ ದರವನ್ನು ತಾತ್ಕಾಲಿಕವಾಗಿ ಗಣನೆಗೆ ತೆಗೆದುಕೊಂಡಾಗ, ಚ.ಅಡಿ ಒಂದಕ್ಕೆ ರೂ.574/- ಗಳಾಗುತ್ತದೆ. ಈ ದರವನ್ನು ಭೂಸ್ವಾಧೀನ ಕಾಯ್ದೆಯಡಿ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

"ಅ"

| ಕ್ರ.ಸಂ. | ವಿವರಣೆ | ಮೊಬಲಗು |
|---|---|---|
| 01. | ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ವಿಸ್ತೀರ್ಣ | 0.03 ಗುಂಟೆ (3267 ಚ.ಅ) |
| 02 | ಜಮೀನಿನ ಮೌಲ್ಯ ಮಾರ್ಗಸೂಚಿ ಬೆಲೆಯಂತೆ ಚ.ಅಡಿ 1ಕ್ಕೆ ರೂ.574/- ರಂತೆ 3267 ಚ.ಅ.ಗಳಿಗೆ<br>ಕಟ್ಟಡದ ಮೌಲ್ಯ ಚ.ಅ.1ಕ್ಕೆ ರೂ.300/- ರಂತೆ 649 ಚ.ಅ ಗಳಿಗೆ | 18,75,258/-<br>1,92,000/- |
| | | **ಒಟ್ಟು 20,67,258/-** |
| 03 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 2,48,071/- |
| | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರ ಅನ್ವಯ ಶೇಕಡಾ 30 ರಂತೆ ಶಾಸನಬದ್ದ ಭತ್ಯೆ | 6,20,177/- |
| | **ಒಟ್ಟು** | **29,35,506/-** |

"ಆ"

| | | |
|---|---|---|
| 04 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | ಕೈಬಿಡಲಾಗಿದೆ |
| 05 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | ಕೈಬಿಡಲಾಗಿದೆ |
| 06 | ಪ್ರಕಟಣಾ ವೆಚ್ಚ | 1,00,000/- |
| | **ಒಟ್ಟು** | **1,00,000/-** |
| | **(ಅ+ಆ) ಒಟ್ಟು** | **30,35,506/-** |

**ಷರಾ:** ದಿನಾಂಕ:05-09-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ:FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಚಾರದಿಂದ ಕೈಬಿಡಲಾಗಿದೆ.

**(ಮೂವತ್ತು ಲಕ್ಷದ ಮೂವತ್ತೈದು ಸಾವಿರದ ಐದು ನೂರ ಆರು ರೂಪಾಯಿಗಳು ಮಾತ್ರ)**

ಈ ಮೇಲ್ಕಂಡ ಪ್ರಸ್ತಾಪಿತ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಭೂ-ಪರಿಹಾರ ವೆಚ್ಚ ರೂ.30,35,506/- ಗಳಾಗಲಿದ್ದು, ಈ ಪ್ರಕರಣದ ಸ್ವತ್ತನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಭೂ-ಪರಿಹಾರ ಮತ್ತು ಇತರೆ ವೆಚ್ಚಗಳನ್ನು ಪಾಲಿಕೆಯ 2011-12 ನೇ ಸಾಲಿನ

. . . . .3

ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08-06-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (151)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:144 (ಹಳೇ ವಾರ್ಡ್ ನಂ.61), ಸಿದ್ದಾಪುರ-ಹೊಸೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಮಳೆ ನೀರಿನ ಚರಂಡಿಯನ್ನು ಅಗಲೀಕರಣಗೊಳಿಸಲು ಕೋರಿ ಶ್ರೀ.ಎಂ.ಉದಯಶಂಕರ್, ಪಾಲಿಕೆಯ ವಾರ್ಡ್:144 ರ ಸದಸ್ಯರು ರವರು ಮನವಿ ಸಲ್ಲಿಸಿರುತ್ತಾರೆ. ಸದರಿ ಮನವಿಯಲ್ಲಿ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿರುವ ಸುಮಾರು 6 ಕೊಳಚೆ ಪ್ರದೇಶಗಳಿಂದ ಬರುವ ನೀರು ಈ ಮಳೆ ನೀರಿನ ಚರಂಡಿಗೆ ಸೇರುತ್ತಿದ್ದು, ಚರಂಡಿಯ ಅಗಲ ಕಿರಿದಾಗಿರುವುದರಿಂದ ಹಾಗೂ ಸದರಿ ಜಾಗವು ತಗ್ಗು ಪ್ರದೇಶವಾಗಿರುವುದರಿಂದ ಮಳೆಗಾಲದಲ್ಲಿ ಮಳೆ ನೀರು ಸುಗಮವಾಗಿ ಹರಿಯದೇ ಸದರಿ ಜಾಗದಲ್ಲಿ ಮನೆಗಳಿಗೆ ನೀರು ನುಗ್ಗಿ ಸ್ಥಳೀಯ ನಿವಾಸಿಗಳಿಗೆ ತುಂಬ ತೊಂದರೆಯಾಗುತ್ತಿರುವುದಾಗಿ ತಿಳಿಸಿ, ಹಾಲಿ ಇರುವ ಚರಂಡಿಗೆ ಹೊಂದಿಕೊಂಡಿರುವ ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2 ರಲ್ಲಿನ ಭಾಗಶ: ಜಮೀನನ್ನು ಭೂಸ್ವಾಧೀನಪಡಿಸಕೊಂಡು ಚರಂಡಿಯನ್ನು ಅಗಲೀಕರಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಈ ಸಂಬಂಧ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊಂಬೇಗೌಡ ನಗರ ಉಪವಿಭಾಗ ಹಾಗೂ ಕಾರ್ಯಪಾಲಕ ಅಭಿಯಂತರರು ವರದಿ ಮಂಡಿಸಿ, ಪ್ರಸ್ತಾಪಿತ ಪ್ರದೇಶದಲ್ಲಿ ಹಾಲಿ 231.93 ಚ.ಮೀ. 2496.49 ಚ.ಅ. ವಿಸ್ತೀರ್ಣವಿರುವ ಮಳೆ ನೀರು ಚರಂಡಿಯು ಚಾಲ್ತಿಯಲ್ಲಿದ್ದು, ಇದನ್ನು ಕೆಳಕಂಡ ಖಾತೆದಾರರ ಹಿಡುವಳಿ ಜಮೀನಿನಲ್ಲಿ ನಿರ್ಮಿಸಲಾಗಿದ್ದು, ಈ ಹಿಂದೆ ಇದನ್ನು ನಿಯಮಾನುಸಾರ ಭೂಸ್ವಾಧೀನಪಡಿಸಿಕೊಂಡು ಪರಿಹಾರವನ್ನು ಪಾವತಿಸಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಇದಕ್ಕೆ ಹೆಚ್ಚುವರಿಯಾಗಿ 144.27 ಚ.ಮೀ ಜಮೀನನ್ನು ಸೇರಿಸಿಕೊಂಡು ಒಟ್ಟಾರೆ 376.20 ಚ.ಮೀ. ಅಂದರೆ, 4049.42 ಚ.ಅ.ಗಳಿಗೆ ಹಾಲಿ ಇರುವ ಚರಂಡಿಯನ್ನು ಅಗಲಗೊಳಿಸಲು ಹಾಗೂ ಚರಂಡಿಗೆ ಹೊಂದಿಕೊಂಡಿರುವ ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2 ರಲ್ಲಿನ ಒಟ್ಟು 376.20 ಚ.ಮೀ (4049.42 ಚ.ಅ) ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲು ಶಿಫಾರಸ್ಸು ಮಾಡಿ, ದಿನಾಂಕ:12-04-2011 ರಂದು ದಾಖಲೆಗಳೊಂದಿಗೆ ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದಂತೆ, ಸಹಾಯಕ ಕಂದಾಯ ಅಧಿಕಾರಿ, ಹೊಂಬೇಗೌಡನಗರ ವಲಯರವರು ನೀಡಿರುವ ವರದಿ ಹಾಗೂ ದಾಖಲೆಗಳಂತೆ, ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2, ಹಾಲಿ ಸಿಟಿಎಸ್ ನಂ.821/1 ಎಂದು ಆಗಿದ್ದು, ಇದರಲ್ಲಿನ 5468.75 ಚ.ಅಡಿ ವಿಸ್ತೀರ್ಣದ ಖಾಲಿ ನಿವೇಶನವನ್ನು ಶ್ರೀಮತಿ.ನರಸಮ್ಮ ಕೋಂ ನಾರಾಯಣ ರಾವ್ ಇವರು ಶ್ರೀಮತಿ.ಗೌರಮ್ಮ ಕೋಂ ಚಂದ್ರಶೇಖರಯ್ಯ ಇವರಿಂದ ದಿನಾಂಕ:10-10-1946 ರಂದು ನೊಂದಾಯಿತ ಎಸ್.ಆರ್.ನಂ.2264/1946-47 ರ ಮೂಲಕ ಶುದ್ದ ಕ್ರಯಕ್ಕೆ ಪಡೆದಿರುತ್ತಾರೆ. ನಂತರ, ಇದನ್ನು ಶ್ರೀಮತಿ. ನರಸಮ್ಮ ಕೋಂ ನಾರಾಯಣರಾವ್ ರವರು ದಿನಾಂಕ:13-07-1981 ರಂದು ನೊಂದಾಯಿತ ಎಸ್.ಆರ್.ನಂ.1799/1981-82ರನ್ವಯ ಶ್ರೀ.ಎಸ್.ಎ.ಖಾದರ್ ಶರೀಫ್ ರವರಿಗೆ ಶುದ್ದ ಕ್ರಯಕ್ಕೆ ಮಾರಿರುತ್ತಾರೆ. ಈ ನಿವೇಶನ ಮತ್ತು ಇವರ ಒಟ್ಟು ಕುಟುಂಬದ ಆಸ್ತಿಯಲ್ಲಿ ಇವರ ಭಾಗಕ್ಕೆ ಬಂದ ಇತರೆ ಸ್ವತ್ತುಗಳು ಸೇರಿ ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2, ಮುನಿಸಿಪಲ್ ನಂ.90 ರಲ್ಲಿನ (27.6+37.0)/2x195=6298.5 ಚ.ಅ ವಿಸ್ತೀರ್ಣದ ನಿವೇಶನವನ್ನು ಶ್ರೀ.ಎಸ್.ಎ.ಖಾದರ್ ಶರೀಫ್ ರವರು ದಿನಾಂಕ:20-07-2004 ರ ನೊಂದಾಯಿತ ಎಸ್.ಆರ್.ನಂ.2497/2004-05 ರನ್ವಯ ಶ್ರೀ.ಎಂ.ಅಕ್ಬರ್, ಶ್ರೀಅಯಾಜ್ ಶರೀಫ್, ಶ್ರೀಮತಿ.ರೆಹನಾ ಕೋಂ ಅಕ್ಬರ್ ಶರೀಫ್ ಮತ್ತು ಶ್ರೀ.ವಾಸೀಂ ಶರೀಫ್ ಇವರುಗಳಿಗೆ ಶುದ್ದ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ. ಹಾಲಿ ಈ ಸ್ವತ್ತು ಶ್ರೀ.ಎಂ.ಅಕ್ಬರ್ ಶರೀಫ್, ಶ್ರೀ.ಅಯಾಜ್ ಶರೀಫ್, ಶ್ರೀಮತಿ ರೆಹನಾ ಕೋಂ ಅಕ್ಬರ್ ಶರೀಫ್ ಮತ್ತು

. . . . .2

ಶ್ರೀ.ವಾಸೀಂ ಶರೀಫ್ ರವರ ಸ್ವಾಧೀನಾನುಭವದಲ್ಲಿದ್ದು, ಈ ಸ್ವತ್ತಿಗೆ ಇವರ ಹೆಸರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾತಾ ನೊಂದಾಯಿಸಿ, ಪಿಐಡಿ ನಂ-61-51-90 ಎಂದು ನೀಡಲಾಗಿದೆ. ಖಾತಾ ನಕಲಿನಂತೆ ಈ ನಿವೇಶನದ ಅಳತೆ 6137.00 ಚ.ಅಡಿ ಎಂದು ದಾಖಲಾಗಿರುತ್ತದೆ. ಈ ಸ್ವತ್ತಿನಲ್ಲಿ 2953.62 ಚ.ಅಡಿ ಜಾಗವನ್ನು ಪ್ರಸ್ತಾಪಿತ ಮಳೆ ನೀರು ಚರಂಡಿಯ ಅಗಲೀಕರಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

ಹಾಗೂ ಇದೇ ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2 (ಸಿಟಿಎಸ್.ನಂ.821/1) ರಲ್ಲಿ (25+28.75)/2X250=6718.75 ಚ.ಅಡಿ ವಿಸ್ತೀರ್ಣದ ಖಾಲಿ ನಿವೇಶನವನ್ನು ಶ್ರೀಮತಿ. ಗೌರಮ್ಮ ಕೋಂ ಚಂದ್ರಶೇಖರಯ್ಯ ರವರು ದಿನಾಂಕ:10-10-1946 ರಂದು ನೊಂದಾಯಿತ ಎಸ್.ಆರ್.ನಂ.2263/1946-47 ರ ಮೂಲಕ ಶ್ರೀಮತಿ.ಕಮಲಮ್ಮ ಕೋಂ ಚನ್ನಕೃಷ್ಣಯ್ಯರವರಿಗೆ ಶುದ್ದ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ನಂತರ, ಇದನ್ನು ಶ್ರೀಮತಿ.ಶಹನಾಝ್ ಬೇಗಂರವರು ದಿನಾಂಕ:07-09-1981 ರಂದು ನೊಂದಾಯಿತ ಕ್ರಯ ಪತ್ರ ಎಸ್.ಆರ್.ನಂ.-2597/1981-82 ರನ್ವಯ ಶ್ರೀಮತಿ ಕಮಲಮ್ಮ ಕೋಂ ಚನ್ನಕೃಷ್ಣಯ್ಯ ರವರಿಂದ ಶುದ್ದ ಕ್ರಯಕ್ಕೆ ಪಡೆದಿರುತ್ತಾರೆ. ಈ ಸ್ವತ್ತಿನಲ್ಲಿ 7 X 70=490 ಚ.ಅಡಿ ಜಾಗವನ್ನು ಶ್ರೀಮತಿ ಪರ್ವಿನ್ ತಾಜ್ ಕೋಂ ಮಹಮದ್ ಸಾದತ್ತ್ ಉಲ್ಲಾ ಖಾನ್ ರವರು ನೊಂದಾಯಿತ ಕ್ರಯ ಪತ್ರ ಎಸ್.ಆರ್.ನಂ.743/2000-01 ರ ಮೂಲಕ ಶ್ರೀಮತಿ ಶಹನಾಜ್ ಬೇಗಂ ರವರಿಂದ ಶುದ್ದ ಕ್ರಯಕ್ಕೆ ಪಡೆದಿರುತ್ತಾರೆ. ಹಾಲಿ ಈ ಸ್ವತ್ತು ಶ್ರೀಮತಿ.ಪರ್ವಿನ್ ತಾಜ್ ಕೋಂ ಮಹಮದ್ ಸಾದತ್ ಉಲ್ಲಾಖಾನ್ ರವರ ಸ್ವಾಧೀನಾನುಭವದಲ್ಲಿದ್ದು, ಸದರಿಯವರು 2010-11ನೇ ಸಾಲಿನವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿ ಮಾಡಿರುತ್ತಾರೆ. ಆದರೆ, ಈ ಸ್ವತ್ತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶ್ರೀಮತಿ.ಪರ್ವಿನ್ ತಾಜ್ ಇವರ ಹೆಸರಿಗೆ ಖಾತೆ ನೋಂದಾಯಿಸಿರುವುದಿಲ್ಲ. ಈ ಸ್ವತ್ತಿನಲ್ಲಿ ಒಂದು ಎ.ಸಿ ಶೀಟಿನ ಮನೆ ಇದ್ದು, ಹಳೆಯದಾದ ಕಾರಣ, ಯಾವುದೇ ಮೌಲ್ಯ ನಿರ್ಧರಿಸಿರುವುದಿಲ್ಲ. ಈ ಬಗ್ಗೆ ದಾಖಲಾತಿಗಳನ್ನು 5(ಎ) ವಿಚಾರಣೆಯಲ್ಲಿ ಪರಿಶೀಲಿಸಬೇಕಾಗಿರುತ್ತದೆ ಹಾಗೂ ಇದೇ ಅರೆಕೆಂಪನಹಳ್ಳಿ ಗ್ರಾಮದ ಸರ್ವೆ ನಂ.15/2 (ಸಿಟಿಎಸ್ ನಂ.821/1) ರಲ್ಲಿ 8X70=560.00 ಚ.ಅಡಿ ಜಾಗವನ್ನು ಶ್ರೀಮತಿ ಪರ್ವಿನ್ ತಾಜ್ ಕೋಂ ಮಹಮದ್ ಸಾದತ್ತ್ ಉಲ್ಲಾ ಖಾನ್ ರವರಿಗೆ ದಿನಾಂಕ:01-06-2000 ರಂದು ಶ್ರೀಮತಿ. ಶಹನಾಝ್ ಬೇಗಂ ರವರು ಜಿ.ಪಿ.ಎ ಮೂಲಕ ನೀಡಿದ್ದು, ಇದರ ಸ್ವಾಧೀನದಲ್ಲಿ ಶ್ರೀಮತಿ. ಪರ್ವಿನ್ ತಾಜ್ ಕೋಂ ಮಹಮದ್ ಸಾದತ್ತ್ ಉಲ್ಲಾ ಖಾನ್ ಇರುತ್ತಾರೆ. ಹೀಗೆ ಶ್ರೀಮತಿ. ಪರ್ವಿನ್ ತಾಜ್ ಕೋಂ ಮಹಮದ್ ಸಾದತ್ತ್ ಉಲ್ಲಾ ಖಾನ್ ರವರ ಸ್ವಾಧೀನದಲ್ಲಿರುವ ಒಟ್ಟು 1050.00 ಚ.ಅ ಜಾಗದಲ್ಲಿ ಅಂದರೆ, 1049.73 ಚ.ಅ ಜಾಗವನ್ನು ಪ್ರಸ್ತಾಪಿತ ಮಳೆ ನೀರು ಚರಂಡಿಯ ಅಗಲೀಕರಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

ಮೇಲ್ಕಂಡ ಸ್ವತ್ತುಗಳ ಬಗ್ಗೆ ಶ್ರೀಮತಿ ಶಹನಾಜ್ ಬೇಗಂರವರು ಪಾಲಿಕೆಯನ್ನು ಪ್ರತಿವಾದಿಯನ್ನಾಗಿ ಮಾಡಿ ಓ.ಎಸ್.ನಂ.3749/1990 ರಂತೆ ಒಂದನೇ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರತಿವಾದಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ಹಿಡುವಳಿ ಜಮೀನಿನಲ್ಲಿ ದಿ:06-07-1990 ರಂದು ಬಲವಂತವಾಗಿ ಪ್ರವೇಶಿಸಿ ಮಳೆನೀರು ಚರಂಡಿ ನಿರ್ಮಿಸಲು ಪ್ರಯತ್ನಿಸಿರುವ ಬಗ್ಗೆ ದಾವೆ ಹೂಡಿದ್ದು, ಇದರಲ್ಲಿ ನ್ಯಾಯಾಲಯವು ಪ್ರತಿವಾದಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿರುದ್ದ ಪ್ರತಿಬಂಧಕಾಜ್ಞೆಯನ್ನು ಸಹ ನೀಡಿರುವುದು ಕಂಡುಬರುತ್ತದೆ. ಇದೇ ರೀತಿ ಇದೇ ವಾದಿಯ ಗಂಡ ಶ್ರೀ.ಎಸ್.ಎ.ಖಾಲಕ್ ರವರು ಸಹ ಮತ್ತೊಂದು ದಾವೆ ಸಂಖ್ಯೆ ಓ.ಎಸ್.ನಂ.10558/1985 ರಂತೆ ಪಾಲಿಕೆ ವಿರುದ್ಧ ದಾವೆ ಹೂಡಿ, ಇದರಲ್ಲೂ ಸಹ ಡಿಕ್ರಿ ಪಡೆದಿರುವುದು ಕಂಡುಬರುತ್ತದೆ. ಈ ದಾವೆಯ ವಿರುದ್ಧ ಪ್ರತಿವಾದಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್.ಎಫ್.ಎ ನಂ.269/1989 ರಂತೆ ಅಪೀಲು ದಾಖಲಿಸಿದ್ದು, ಇದೂ ಸಹ ಪಾಲಿಕೆಯ ವಿರುದ್ಧವಾಗಿ ಆದೇಶವಾಗಿರುವುದು ಓ.ಎಸ್.ನಂ.3749/1990 ರ ಆದೇಶದಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ಈ ಜಮೀನು ಖಾಸಗಿ ಹಿಡುವಳಿ

. . . . .3

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (92)/2011-12

ಶ್ರೀ. ಸಿ.ಅಶ್ವತ್ಥನಾರಾಯಣ ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಆಪ್ತ ಕಾರ್ಯದರ್ಶಿ ರವರು ಶ್ರೀ ವಿ. ನಾಗರಾಜ ಗುಪ್ತ ವಕೀಲರ ಮನವಿಯನ್ನು ಲಗತ್ತಿಸುತ್ತಾ, ಬೆಂಗಳೂರು ಮಿಡಿಲ್ ಸ್ಕೂಲ್ ರಸ್ತೆ, ರಾಮಯ್ಯ ಐಯ್ಯಂಗಾರ್ ರಸ್ತೆ ಮತ್ತು ಶ್ರದ್ಧಾನಂದ ಭವನದ ರಸ್ತೆ ಅಡ್ಡವಾಗಿರುವ ರಸ್ತೆಯಾದ ಆರ್.ಕೆ.ಕಲರ್ ಸೆಂಟರ್‌ನಿಂದ ಆರ್.ವಿ. ರಸ್ತೆಯ ಭಾಸ್ಕರ್ ಬಿಲ್ಡಿಂಗ್‌ವರೆಗೆ ಇರುವ ರಸ್ತೆಗೆ ದಿವಂಗತ ಶ್ರೀಮತಿ ಕುಸುಮ ಅನಂತಯ್ಯ ಶೆಟ್ಟಿರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀಮತಿ ಕುಸುಮ ಅನಂತಯ್ಯ ಶೆಟ್ಟಿರವರು ಹಲವಾರು ಸಂಘ ಸಂಸ್ಥೆಗಳಿಗೆ ದೇಣಿಗೆಯನ್ನು ನೀಡಿರುತ್ತಾರೆ ಹಾಗೂ ಸಮಾಜ ಸೇವೆಯನ್ನು ಸಲ್ಲಿಸಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 3 ಮಂದಿ, ವಿರೋಧವಾಗಿ 20 ಮಂದಿ ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 143 ರ ವ್ಯಾಪ್ತಿಯಲ್ಲಿ ಬರುವ ವಿ.ವಿ.ಪುರಂ, ಆರ್.ಕೆ.ಕಲರ್ ಸೆಂಟರ್‌ನಿಂದ ಆರ್.ವಿ.ರಸ್ತೆಯ ಭಾಸ್ಕರ್ ಬಿಲ್ಡಿಂಗ್‌ವರೆಗೆ (ಹಾಲಿ ಶ್ರದ್ಧಾನಂದ ಭವನ ಅಡ್ಡರಸ್ತೆ) ಇರುವ ರಸ್ತೆಗೆ "ದಿವಂಗತ ಶ್ರೀಮತಿ ಕುಸುಮ ಅನಂತಯ್ಯ ಶೆಟ್ಟಿ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರವರ ದಿನಾಂಕ:27-06-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

. . . . .2

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈಬಿಡಲಾಗಿದೆ".

ಶಾರದಮ್ಮ
(ಶಾರದಮ್ಮ)
ಮಹಾಪೌರರು

ಜಮೀನು ಎಂಬುದು ವ್ಯಕ್ತವಾಗುತ್ತದೆ. ಈ ಬಗ್ಗೆ ಭೂಸ್ವಾಧೀನ ಕಾಯ್ದೆಯ ಸೆಕ್ಷನ್ 5ಎ ಹಾಗೂ 9 ಮತ್ತು 10 ರ ವಿಚಾರಣೆ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸಬೇಕಾಗಿರುತ್ತದೆ.

ಪ್ರಸ್ತಾಪಿತ ಮಳೆ ನೀರುಗಾಲುವೆಯ ಅಗಲೀಕರಣಕ್ಕೆ ಅವಶ್ಯವಿರುವ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ಸರ್ವೇಯರ್‌ರವರು ತಯಾರಿಸಿ, ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿರುವ ನಕ್ಷೆಯಂತೆ ಜಯನಗರ 1ನೇ ಬ್ಲಾಕ್, ಎಲ್.ಎ.ನಂ.34, ಸಿ.ಟಿ.ಸಿ ನಂ.821/1 ರಲ್ಲಿ ಹಿಡುವಳಿ ಜಮೀನಿನಲ್ಲಿ ಹಾಲಿ ಇರುವ 231.93 ಚ.ಮೀ ವಿಸ್ತೀರ್ಣದ ಮಳೆ ನೀರು ಚರಂಡಿಯ ಜಾಗವನ್ನು ಸಹ ಭೂಸ್ವಾಧೀನಪಡಿಸಲು ಪರಿಗಣಿಸಿ, ಇದರ ಪಕ್ಕದಲ್ಲಿ ಗುರುತಿಸಿರುವ ಬ್ಲಾಕ್ ನಂ.I ರಲ್ಲಿ ಶ್ರೀ.ಎಂ.ಅಕ್ಬರ್ ಶರೀಫ್, ಶ್ರೀ.ಅಯಾಜ್ ಶರೀಫ್, ಶ್ರೀಮತಿ ರೆಹನಾ ಕೋಂ ಅಕ್ಬರ್ ಶರೀಫ್ ಮತ್ತು ಶ್ರೀ.ವಾಸೀಂ ಶರೀಫ್ ಇವರುಗಳಿಗೆ ಸೇರಿದ ಸ್ವತ್ತಿನಲ್ಲಿ ಒಟ್ಟು 2953.62 ಚ.ಅಡಿ ಹಾಗೂ ಬ್ಲಾಕ್ ನಂ.II ರಲ್ಲಿ ಶ್ರೀಮತಿ ಪರ್ವೀನ್ ತಾಜ್ ರವರ ಸ್ವಾಧೀನದಲ್ಲಿರುವ ಸ್ವತ್ತಿನಲ್ಲಿ ಒಟ್ಟು 1049.73 ಚ.ಅ ಜಾಗವನ್ನು ಅಂದರೆ ಒಟ್ಟು 4003.35 ಚ.ಅ. ಜಾಗವನ್ನು ಮಳೆ ನೀರುಗಾಲುವೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಭೂಸ್ವಾಧೀನಪಡಿಸಲು ಗುರುತಿಸಿರುತ್ತಾರೆ.

**<u>ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.</u>**

<table>
<tr><th>ಬ್ಲಾಕ್ ನಂ.</th><th>ಗ್ರಾಮ/ಸರ್ವೆ ನಂ./ ಸಿ.ಟಿ.ಎಸ್ ನಂ.</th><th>ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ಮಾಲೀಕರ/ಖಾತೆದಾರರ/ ಅನುಭವದಾರರ ಹೆಸರು</th><th>ಸ್ವತ್ತಿನ ಖಾತಾ ನಂ.</th><th>ವಿಸ್ತೀರ್ಣ (ಚ.ಅಡಿಗಳಲ್ಲಿ)</th><th>ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತಿನ ವಿಸ್ತೀರ್ಣ (ಚ.ಅಡಿಗಳಲ್ಲಿ)</th><th>ಚಕ್ಕುಬಂದಿ</th></tr>
<tr><td>1</td><td>2</td><td>3</td><td>4</td><td>5</td><td>6</td><td>7</td></tr>
<tr><td>I</td><td>ಅರೆಕೆಂಪನಹಳ್ಳಿ, ಸರ್ವೆ ನಂ.15/2, ಸಿ.ಟಿ.ಎಸ್.ನಂ. 821/1</td><td>1. ಶ್ರೀ.ಎಂ.ಅಕ್ಬರ್ ಶರೀಫ್.<br>2. ಶ್ರೀಮತಿ ರೆಹನಾ ಶರೀಫ್<br>3. ಶ್ರೀ.ಆಯಾಜ್ ಶರೀಫ್<br>4. ಶ್ರೀ. ವಾಸೀಮ್ ಶರೀಫ್</td><td>90</td><td>6137.00</td><td>2953.62</td><td>ಉ-ಹೊಸೂರು ರಸ್ತೆ,<br>ದ-ಬ್ಲಾಕ್ II ರ ಜಾಗ,<br>ಪೂ-ಉಳಿಕೆ ಜಾಗ,<br>ಪ-ಮಳೆ ನೀರು ಚರಂಡಿ</td></tr>
<tr><td>II</td><td>ಅರೆಕೆಂಪನಹಳ್ಳಿ ಸರ್ವೆ ನಂ.15/2, ಸಿ.ಟಿ.ಎಸ್.ನಂ. 821/1</td><td>ಶ್ರೀಮತಿ ಪರ್ವೀನ್ ತಾಜ್ ಕೋಂ ಮಹಮದ್ ಸಾದತ್ ಉಲ್ಲಾ ಖಾನ್</td><td>ಇರುವುದಿಲ್ಲ</td><td>490.000</td><td rowspan="2">1049.73</td><td>ಉ-ಬ್ಲಾಕ್ I ರ ಜಾಗ<br>ದ-ರಸ್ತೆ<br>ಪೂ-ಉಳಿಕೆ ಜಾಗ,<br>ಪ-ಮಳೆ ನೀರು ಚರಂಡಿ</td></tr>
<tr><td>III</td><td>ಅರೆಕೆಂಪನಹಳ್ಳಿ ಸರ್ವೆ ನಂ.15/2, ಸಿ.ಟಿ.ಎಸ್.ನಂ. 821/1</td><td>ಶ್ರೀಮತಿ ಶಹನಾಜ್ ಬೇಗಂ (ಶ್ರೀಮತಿ ಪರ್ವೀನ್ ತಾಜ್ ಕೋಂ ಮಹಮದ್ ಸಾದತ್ ಉಲ್ಲಾಖಾನ್ ಜೆ.ಪಿ.ಎ.ದಾರರು)</td><td>ಇರುವುದಿಲ್ಲ</td><td>560.00</td><td></td></tr>
<tr><td colspan="4">ಒಟ್ಟು</td><td></td><td>4003.35</td><td></td></tr>
</table>

ಈ ಮೂರೂ ಸ್ವತ್ತುಗಳಿಗೆ ಜಿಲ್ಲಾಧಿಕಾರಿಗಳಿಂದ 1965 ರಲ್ಲಿ ಭೂಪರಿವರ್ತನೆ ಆದೇಶವಾಗಿದ್ದು, ಈ ಸ್ವತ್ತುಗಳು ಪಾಲಿಕೆ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿದ ವಸತಿ ಪ್ರದೇಶದಲ್ಲಿರುವುದರಿಂದಲೂ, ಇದರಲ್ಲಿ ಸ್ವತ್ತಿನ ಸಂಖ್ಯೆ 90 ಕ್ಕೆ ಪಾಲಿಕೆಯಲ್ಲಿ ಖಾತಾ ನೋಂದಾವಣೆಯಾಗಿರುವುದರಿಂದಲೂ, ಲಗತ್ತು ಸ್ವತ್ತು ಸೇರಿ ಮೂರೂ ಸ್ವತ್ತುಗಳಿಗೆ ವಾಸೋಪಯೋಗಿ ನಿವೇಶನಗಳಿಗೆ ನಿಗಧಿಪಡಿಸಲಾಗಿರುವ ದರವನ್ನು ಪರಿಹಾರವಾಗಿ

. . . . .4

ಪರಿಗಣಿಸುವುದು ಸೂಕ್ತವಾಗಿರುತ್ತದೆ. ಆದುದರಿಂದ, ಈ ಸ್ವತ್ತುಗಳಿಗೆ ಸರ್ಕಾರದ ದಿನಾಂಕ:19-04-2007 ರ ಮಾರ್ಗಸೂಚಿ ಬೆಲೆಯನ್ವಯ ಚ.ಅ. 1 ಕ್ಕೆ ರೂ.2500 ಗಳನ್ನು ನಿಗದಿಪಡಿಸಿ, ಭೂ-ಪರಿಹಾರ ಮತ್ತು ಇತರೆ ವೆಚ್ಚಗಳನ್ನು ಲೆಕ್ಕಾಚಾರ ಮಾಡಲಾಗಿದ್ದು, ಅದರ ವಿವರಗಳು ಈ ಕೆಳಕಂಡಂತೆ ಇರುತ್ತವೆ.

"ಅ"

**ಭೂ ಪರಿಹಾರ ವೆಚ್ಚ**

| | | |
|---|---|---|
| 01 | ಚ.ಅ. 1 ಕ್ಕೆ ರೂ.2500 ರಂತೆ 4003.35 ಚ.ಅ.ಗಳಿಗೆ | ರೂ.1,00,08,375.00 |
| 02 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರನ್ವಯ ಶೇ.30 ರಂತೆ ಶಾಸನಬದ್ಧ ಭತ್ಯೆ | ರೂ.30,02,513,00 |
| 03 | 1984 ರ ಭೂಸ್ವಾಧೀನ ಕಾಯ್ದೆಯ ಕಲಂ.24(1)(ಎ)ರನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (1ವರ್ಷಕ್ಕೆ) | ರೂ.12,01,005.00 |
| | **ಒಟ್ಟು** | **ರೂ.1,42,11,893.00** |

"ಆ"

**ಇತರೆ ವೆಚ್ಚ**

| | | |
|---|---|---|
| 01 | ಸಿಬ್ಬಂದಿ ವೆಚ್ಚ ಶೇ.10 ರಷ್ಟು | – |
| 02 | ಆಡಿಟ್ ವೆಚ್ಚ ಶೇ.1 ರಷ್ಟು | – |
| 03 | ಪ್ರಕಟಣಾ ವೆಚ್ಚ (ಅಂದಾಜು) | ರೂ.2,00,000.00 |
| | (ಅ+ಆ) **ಒಟ್ಟು** | **ರೂ.1,44,11,893.00** |

**ಷರಾ:** ದಿನಾಂಕ:05-09-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ:FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಚಾರದಿಂದ ಕೈಬಿಡಲಾಗಿದೆ.

**(ಒಂದು ಕೋಟಿ ನಲವತ್ತಾಲ್ಕು ಲಕ್ಷದ ಹನ್ನೊಂದು ಸಾವಿರದ ಎಂಟುನೂರಾ ತೊಂಭತ್ಮೂರು ರೂ.ಗಳು ಮಾತ್ರ)**

ಮೇಲ್ಕಂಡ ಸ್ವತ್ತುಗಳನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂ ಪರಿಹಾರದ ಮೊತ್ತ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.1,44,11,893.00/- (ಒಂದು ಕೋಟಿ ನಲವತ್ತಾಲ್ಕು ಲಕ್ಷದ ಹನ್ನೊಂದು ಸಾವಿರದ ಎಂಟುನೂರಾ ತೊಂಭತ್ಮೂರು ಗಳು ಮಾತ್ರ) ಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-05-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-07-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

. . . . .5

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 34 (153)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರಿನ ಸರ್ವೆ ನಂ. 155ರ ಉತ್ತರಭಾಗ ಮತ್ತು ರಾಜರಾಜೇಶ್ವರಿನಗರದ ಸುಬ್ಬರಾಯನಪಾಳ್ಯದಲ್ಲಿನ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳನ್ನು ನಿರ್ಮಿಸಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದು, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಮುಖಾಂತರ ಟೆರ್ರಾಫಾರ್ಮ ಸಂಸ್ಥೆಗೆ ಸಾಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

East Zone ಮತ್ತು West Zone ನಿಂದ ದೊಡ್ಡಬಳ್ಳಾಪುರದ ಟೆರ್ರಾಫರ್ಮಾ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯದ ಅವಧಿಯು ಮುಕ್ತಾಯಗೊಂಡಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 8 ಪ್ಯಾಕೇಜ್‌ಗಳಿಗೆ ಆಹ್ವಾನಿಸಲಾದ ಕಸ ಸಂಗ್ರಹಿಸಿ, ಸಾಗಣೆ ಮಾಡುವ ಜಾಗತಿಕ ಟೆಂಡರ್ ಅಂತಿಮಗೊಂಡ ನಂತರ, ಮಂಡೂರಿನ ಸರ್ವೆ ನಂ.155, ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಕಾಂಪ್ಯಾಕ್ಟರ್‌ಗಳು ನೇರವಾಗಿ ದೊಡ್ಡಬಳ್ಳಾಪುರದ ಮೆ॥ ಟೆರ್ರಾಫಾರ್ಮ ತ್ಯಾಜ್ಯ ವಿಲೇವಾರಿ ಘಟಕಕ್ಕೆ ನೇರವಾಗಿ ತ್ಯಾಜ್ಯವನ್ನು ಸಾಗಿಸಲು ವ್ಯವಸ್ಥೆ ರೂಪಿಸಲಾಗಿತ್ತು.

ಹಾಗೂ ಮಂಡೂರಿನ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ವಹಿಸುತ್ತಿರುವ ಮೆ॥ ಎಸ್.ಜಿ.ಆರ್.ಆರ್.ಎಲ್ ಸಂಸ್ಥೆಯವರ ಒಪ್ಪಂದದಂತೆ ತ್ಯಾಜ್ಯದಿಂದ ಉತ್ಪಾದನೆಯ ಮೇ-2011 ರಂದು ಪ್ರಾರಂಭವಾಗುವ ನಿರೀಕ್ಷೆಯಿದ್ದುದರಿಂದ, ಮಂಡೂರಿನ ಸರ್ವೆ ನಂ.155, ಉತ್ತರಭಾಗದಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿರುವ ತ್ಯಾಜ್ಯವನ್ನು ಸ್ಥಗಿತಗೊಳಿಸಿದ್ದು, ತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ದೊಡ್ಡಬಳ್ಳಾಪುರದ ಮೆ॥ ಟೆರ್ರಾಫಾರ್ಮ ಸಂಸ್ಥೆಗೆ ಸಾಗಿಸುವ ಕಾರ್ಯವನ್ನು ಸಹ ಸ್ಥಗಿತಗೊಳಿಸಲು ತೀರ್ಮಾನಿಸಲಾಗಿತ್ತು.

ಆದರೆ, ಕಸ ಸಂಗ್ರಹಿಸಿ ಸಾಗಣೆ ಮಾಡುವ ಜಾಗತಿಕ ಟೆಂಡರ್ ಇನ್ನೂ ಅಂತಿಮಗೊಂಡಿರುವುದಿಲ್ಲ. ಸದರಿ ಟೆಂಡರ್ ಪ್ರಕ್ರಿಯೆ ಇನ್ನೂ ವಿಳಂಬವಾಗುವ ಸಾಧ್ಯತೆ ಇದ್ದು ಹಾಗೂ ಮೆ॥ ಎಸ್.ಜಿ.ಆರ್.ಆರ್.ಎಲ್ ಸಂಸ್ಥೆಯ ತ್ಯಾಜ್ಯದಿಂದ ಉತ್ಪಾದನಾ ಘಟಕದ ಕಾಮಗಾರಿಯು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುತ್ತದೆ.

ಮಂಡೂರಿನ ಸರ್ವೆ ನಂ.155 ರ ಉತ್ತರಭಾಗದ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳಲ್ಲಿ ಸುಮಾರು 120 ಲಾರಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಸದರಿ ಲ್ಯಾಂಡ್‌ಫಿಲ್‌ಗಳಿಂದ 10 ಗಾಲಿಗಳ ಟ್ರಕ್‌ಗಳ ಮುಖಾಂತರ ತ್ಯಾಜ್ಯವನ್ನು ಸ್ಥಳಾಂತರಿಸುವ ಕಾರ್ಯ ಸ್ಥಗಿತಗೊಂಡಲ್ಲಿ, ಲ್ಯಾಂಡ್‌ಫಿಲ್ ಪೂರ್ಣವಾಗಿ ತ್ಯಾಜ್ಯದಿಂದ ತುಂಬಿ ಹೋಗುವ ಸಾಧ್ಯತೆಯಿರುವುದರಿಂದ, ಸದರಿ ಕಾರ್ಯವನ್ನು ಮುಂದುವರೆಸಬೇಕಾದ ಅವಶ್ಯಕತೆಯಿರುತ್ತದೆ ಹಾಗೂ ಈ ವ್ಯವಸ್ಥೆ ತಾತ್ಕಾಲಿಕವಾಗಿ ವಾರ್ಡ್ ಕಸ ಗುಡಿಸುವಿಕೆ ಹಾಗೂ ಕಸ ಸಾಗಾಣಿಕೆ ಟೆಂಡರ್ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವವರೆಗೂ ಮುಂದುವರೆಸಲು ಹಾಗೂ East Zone ಮತ್ತು West Zone ಗಳ ವೈಜ್ಞಾನಿಕ ಟ್ರಾನ್ಸಿಟ್ ಲ್ಯಾಂಡ್‌ಫಿಲ್‌ಗಳಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು 2011-12ನೇ ಸಾಲಿನ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ.

ಮೇಲೆ ಸೂಚಿಸಿರುವ ವಿವರಗಳ ಹಿನ್ನೆಲೆಯಲ್ಲಿ, ಕೆಳಕಂಡ ವಿಷಯಗಳಿಗೆ ಅನುಮೋದನೆಯನ್ನು ಕೋರಲಾಗಿದೆ.

1. Transportation of Waste from BBMP area to D.Pura (East package) - Est cost:295.68 lakhs

2.Transportation of Waste from BBMP area to D.Pura (West package)- Est cost:299.55 lakhs

ಸದರಿ ಟೆಂಡರ್‌ಗಳನ್ನು ಆಹ್ವಾನಿಸಲು ಅವಶ್ಯವಿರುವ ಅನುದಾನವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗಕ್ಕೆ 13ನೇ ಹಣಕಾಸು ಆಯೋಗದ ಅನುದಾನ ಪಡೆಯಲು ಸಲ್ಲಿಸಲಾದ ಪ್ರಸ್ತಾವನೆಯನ್ನು 2010-11 ನೇ ಸಾಲಿನಲ್ಲಿ Transportation of MSW from transfer points to disposal yard scientific landfill sites/Transfer points ಕಾಮಗಾರಿಗೆ ರೂ. 500 ಲಕ್ಷಗಳ ಮೊತ್ತ ಮೀಸಲಿರಿಸಿದ್ದು, ಈ ಅನುದಾನದಲ್ಲಿ ಸದರಿ ಕಾಮಗಾರಿಗೆ ಅವಶ್ಯವಿರುವ ಮೊತ್ತವನ್ನು ಭರಿಸಬಹುದಾಗಿರುತ್ತದೆ.

ಈ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 03-08-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:03-08-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:03-08-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 35 (154)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತದಲ್ಲಿ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ನಾನಾ ಸಮಸ್ಯೆಗಳನ್ನು ಎದುರಿಸಲು ಅನೇಕ ಪ್ರಾಂತ್ಯಗಳಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕೆಂದು ಸತತ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಪ್ರತಿ ಜನರ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯು ಕೈಬಿಡಲಾಗದಂತ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿದ್ದು, ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಸೂಕ್ತ ಪರಿಹಾರ ದೊರಕಿರುವುದಿಲ್ಲ. ಇದೇ ಒಂದು ದೊಡ್ಡ ಸಮಸ್ಯೆಯಾಗಿ ಎದುರಾಗಿದೆ.

ಈ ದಿಕ್ಕಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದ್ದು, ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ಕೆಲವು ನಗರಗಳು ಮತ್ತು ಹಲವಾರು ಪ್ರಾಂತ್ಯದಲ್ಲಿ ಮತ್ತು ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (40 ಮೈಕ್ರಾನ್ಸ್) ಸಹ ಪ್ಲಾಸ್ಟಿಕ್ ಬಳಕೆಯನ್ನು ಸೂಕ್ತ ಕಾನೂನಿನ ಮೂಲಕ ರದ್ದುಪಡಿಸಿದ್ದರೂ ಸಹ, ಈ ಮಾರ್ಗದಲ್ಲಿ ಸಂಪೂರ್ಣ ಯಶಸ್ವಿ ಕಂಡುಬಂದಿರುವುದಿಲ್ಲ.

ಈ ಹಿನ್ನಲೆಯಲ್ಲಿ, ಈಗಾಗಲೇ ಭಾರತದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಮೂಲಕ ತೈಲ ಉತ್ಪಾದನೆಯನ್ನು ಪ್ರಾರಂಭಿಸಿದ್ದು, ಕೆಲವು ಮಹಾನಗರಗಳು ಯಶಸ್ವಿಯಾಗಿರುತ್ತವೆ ಹಾಗೂ ಆ ಮಹಾನಗರದ ರಾಜ್ಯ ಸರ್ಕಾರ, ನಗರ ಸಭೆ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಿನಿಸ್ಟ್ರಿ ಆಫ್ ನಾನಾ ಕನ್ವವೆನಷನಲ್ ಎನರ್ಜಿ ಮತ್ತು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಅಂಡ್ ಪೆಟ್ರೋಕೆಮಿಕಲ್ಸ್ ಇಲಾಖೆಗಳು ಈ ಯೋಜನೆಗೆ ಅನುಮೋದನೆಯನ್ನು ನೀಡಿ, ಸಾಕಷ್ಟು ನಗರಗಳಲ್ಲಿ ಈ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಮೈಸೂರಿನಲ್ಲಿ ಈ ಘಟಕವನ್ನು ಸ್ಥಾಪಿಸಲು ಟೆಂಡರ್ ಅನ್ನು ಆಹ್ವಾನಿಸಿ, ರಾಜ್ಯ ಸರ್ಕಾರ ಮಟ್ಟದಲ್ಲಿ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ, ಪ್ಲಾಸ್ಟಿಕ್ ಬಳಕೆಯನ್ನು ರದ್ದುಗೊಳಿಸುವ ನಿರ್ಧಾರ ದೀರ್ಘ ಕಾಲದ ಯೋಜನೆಯಾಗಿದ್ದು, ಈ ಮಾರ್ಗದಲ್ಲಿ ಸಾಕಷ್ಟು ಜನರಲ್ಲಿ ಅರಿವು ಮೂಡಿಸಿ ಯಶಸ್ವಿಯನ್ನು ಕಾಣಬೇಕಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಕಾನೂನನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ, ಈಗಾಗಲೇ ಉಪಯೋಗದಲ್ಲಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಮೇಲೆ ಸೂಚಿಸಿರುವ ಘಟಕವನ್ನು ಸ್ಥಾಪಿಸಿದ್ದಲ್ಲಿ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ 10 ಟನ್ ಪ್ಲಾಸ್ಟಿಕನ್ನು ಕಚ್ಚಾ ತೈಲವಾಗಿ ಮಾರ್ಪಡಿಸುವ ಸಾಮರ್ಥ್ಯವಿರುವ ಘಟಕವನ್ನು ಅನೇಕ ನಗರಗಳಲ್ಲಿ 5 ಎಕರೆ ಜಮೀನನ್ನು, ಲ್ಯಾಂಡ್‌ಫಿಲ್ ಸೈಟಿನಲ್ಲಿ 25 ವರ್ಷ ಕಾಲಕ್ಕೆ ಲೀಸ್ ಮೂಲಕ ನೀಡಿ, ಭಾರತದ ಅನೇಕ ನಗರಗಳಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಈ ಷರತ್ತಿನಲ್ಲಿ ಕೇವಲ ಪಾಲಿಕೆ ಜಾಗವನ್ನು ನೀಡಿದ್ದಲ್ಲಿ, ಬಿಡ್ಡುದಾರರು ಟಿಪ್ಪಿಂಗ್ ಫೀ ಪಡೆದುಕೊಳ್ಳದೆ ಪ್ಲಾಸ್ಟಿಕ್ ವಿಲೇವಾರಿಯನ್ನು ಮಾಡುತ್ತಿರುತ್ತಾರೆ ಮತ್ತು ತೈಲ ಉತ್ಪಾದನೆಯಲ್ಲಿ ಬಿಡ್ಡುದಾರರು ಶೇ.2% ರಾಯಲ್ಟಿಯನ್ನು ಹಾಗೂ ಶೇ.20% ಸಿ.ಡಿ.ಎಂ ಗ್ರಾಂಟ್ಸ್ ಅನ್ನು ಅಲ್ಲಿನ ಪಾಲಿಕೆಗೆ ನೀಡಿರುತ್ತಾರೆ. ಇದರ ಮೂಲಕ ಚಿಂದಿ ಆಯುವ ಮಂದಿಗೆ ಉದ್ಯೋಗಾವಕಾಶ ದೊರಕಿರುತ್ತದೆ ಮತ್ತು ಆ ಮಂದಿಗೆ ಸಮವಸ್ತ್ರ (uniform) ವನ್ನು ಸಹ ನೀಡಲಾಗಿರುತ್ತದೆ. ಈ ಘಟಕದಲ್ಲಿ 1 ಟನ್ ಪ್ಲಾಸ್ಟಿಕ್‌ನಿಂದ 1000 ಲೀ. ಕಚ್ಚಾ ತೈಲವನ್ನು ಉತ್ಪಾದಿಸಲಾಗುತ್ತಿದೆ. ಇದರಲ್ಲಿ ಉತ್ಪಾದನೆಯಾಗುವ 200 ಲೀ. ಕಚ್ಚಾ ತೈಲವನ್ನು ಈ ಘಟಕದ ಚಾಲನೆಗೆ ಮರು ಬಳಕೆ ಮಾಡಲಾಗುತ್ತಿದೆ ಹಾಗೂ 800 ಲೀ ತೈಲವನ್ನು ತೈಲ ಸಂಸ್ಕರಿಸುವ ಘಟಕಗಳಿಗೆ ಬಿಡ್ಡುದಾರರು ಮಾರಾಟ ಮಾಡುತ್ತಾರೆ. ಈ ಘಟಕದಿಂದ ಪರಿಸರಕ್ಕೆ ಯಾವುದೇ ವಿಧವಾದ

. . . . .2

ಹಾನಿ ಉಂಟಾಗುವುದಿಲ್ಲ. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ ಹಾಗೂ ಇದಕ್ಕೆ ಯಾವುದೇ ವೆಚ್ಚವು ತಗಲದಿರುವ ಕಾರಣ, ಆಯವ್ಯಯದಲ್ಲಿ ಅನುದಾನ ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಈ ಹಿನ್ನಲೆಯಲ್ಲಿ, ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ಉತ್ಪತ್ತಿ ಮಾಡುವ ಘಟಕಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಅಂಶಗಳನ್ನು ಅನುಮೋದನೆ ಕೋರಿದೆ.

1. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ ಹಾಗೂ ಆಪರೇಟರ್ ರವರುಗಳಿಂದ ರಾಜಧನ ಪಡೆಯಲಾಗುವುದು.
2. ಈ ಯೋಜನೆಗೆ DBOT ಆಧಾರದ ಮೇಲೆ ಘಟಕ ಸ್ಥಾಪಿಸಲು ಕೆ.ಸಿ.ಡಿ.ಸಿ, ಕೂಡ್ಲು ಪ್ರದೇಶದಲ್ಲಿ 5 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ 20 ವರ್ಷ ಕಾಲಾವಧಿಗೆ ನೀಡಲು ಅನುಮೋದನೆ ಕೋರಿದೆ.
3. ಪ್ರತಿಯೊಂದು ಘಟಕದಲ್ಲೂ 10 ಮೆ.ಟ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ತಯಾರಿಸಲಾಗುವುದು. ಕಾಲಕಾಲಕ್ಕೆ ಹಂತ ಹಂತವಾಗಿ ಪ್ರತಿ 10 ಟನ್ ಅನ್ನು ಹೆಚ್ಚುವರಿ ಮಾಡಲು ಅನುಮೋದನೆ.
4. ಈ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ರಚಿಸಲಾದ ಹೈ ಪವರ್ ಕಮಿಟಿಯ ಹಾಗೂ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ.
5. ಈ ಘಟಕ ಸ್ಥಾಪಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:03/08/2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:08-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> ""ಸಾರ್ವಜನಿಕ ಆರೋಗ್ಯ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:08-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 37 (156)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ 2 ತಿಂಗಳಿಗೊಮ್ಮೆ BESCOM ರವರು ವಿದ್ಯುತ್ ಕಂಬದ ಅಡ್ಡವಾಗಿ ಬೆಳೆದಿರುವ ಮರಗಳ ರೆಂಬೆಗಳನ್ನು ಕಟಾವು ಮಾಡುತ್ತಿದ್ದು, ಸದರಿ ರೆಂಬೆಗಳ ತ್ಯಾಜ್ಯವು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ವಿಲೇವಾರಿ ಮಾಡಲು ಹರಸಾಹಸ ಪಡಬೇಕಾಗಿದ್ದು, ಈ ನಿಟ್ಟಿನಲ್ಲಿ ನೆರೆಯ ಪ್ರದೇಶವಾದ ಪಾಂಡಿಚೇರಿಯಲ್ಲಿ ಮರದ ರೆಂಬೆಗಳನ್ನು ಮತ್ತು ಎಲೆಗಳನ್ನು ಕಟಾವು ಮಾಡಲು Shredding Machine (ಕಟಾವು ಯಂತ್ರ) ವನ್ನು ಉಪಯೋಗಿಸುತ್ತಿದ್ದು, ಸದರಿ ಯಂತ್ರದಿಂದ ಮರದ ರೆಂಬೆಗಳನ್ನು ಮತ್ತು ಎಲೆಗಳನ್ನು ಅತಿ ಚಿಕ್ಕ ತುಂಡುಗಳಾಗಿ ಕಟಾವು ಮಾಡಿ ವಿಲೇವಾರಿ ಮಾಡುತ್ತಿದ್ದು, ಇದರಿಂದ ವಿಲೇವಾರಿ ಮಾಡುವ ತ್ಯಾಜ್ಯದ ಪ್ರಮಾಣ ಕಡಿಮೆಯಾಗುತ್ತಿರುತ್ತದೆ. ಸದರಿ ಯಂತ್ರವು ಪಾಲಿಕೆಗೆ ಉಪಯುಕ್ತವಾಗಿರುವುದರಿಂದ ಯಂತ್ರವನ್ನು ಖರೀದಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಯಂತ್ರವನ್ನು ಖರೀದಿಸುವ ನಿಟ್ಟಿನಲ್ಲಿ ಟ್ರಾಕ್ಟರ್ ಚಾಲಿತ Shredder ಯಂತ್ರದ "Data Rate" ಗಳನ್ನು ಯುರೇಕಾ ಸಂಸ್ಥೆ ಮತ್ತು ಮಹಿಂದ್ರಾ ಟ್ರಾಕ್ಟರ್ ಸಂಸ್ಥೆಯಿಂದ ಪಡೆದಿದ್ದು, ಸದರಿ Shredder ಯಂತ್ರಕ್ಕೆ ತೆರಿಗೆ ಸೇರಿ ಅಂದಾಜು ರೂ.1,18,552/- (ರೂ. ಒಂದು ಲಕ್ಷದ ಹದಿನೆಂಟು ಸಾವಿರದ ಐನ್ನೂರ ಐವತ್ತೆರಡು ಮಾತ್ರ) ಗಳಾಗುತ್ತದೆ ಮತ್ತು 30 HP ಟ್ರಾಕ್ಟರ್ ಟ್ರೇಲರ್ ಯಂತ್ರಕ್ಕೆ ಅಂದಾಜು ರೂ.5,89,400/- (ರೂ.ಐದು ಲಕ್ಷದ ಎಂಭತ್ತೊಂಭತ್ತು ಸಾವಿರದ ನಾಲ್ಕು ನೂರು ಮಾತ್ರ) ಗಳಾಗುತ್ತದೆ. ಒಟ್ಟು ಒಂದು ಟ್ರಾಕ್ಟರ್ ಚಾಲಿತ Shredder ಯಂತ್ರಕ್ಕೆ ಅಂದಾಜು ರೂ.7,07,952/- (ರೂ. ಏಳು ಲಕ್ಷದ ಏಳು ಸಾವಿರದ ಒಂಭೈನೂರ ಐವತ್ತೆರಡು ಮಾತ್ರ) ಗಳಾಗಿದ್ದು, ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಟೆಂಡರ್ ಮೂಲಕ ಖರೀದಿಸಬೇಕಾಗಿರುತ್ತದೆ.

ಈ ನಿಟ್ಟಿನಲ್ಲಿ ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಖರೀದಿಸಲು ಅಂದಾಜು ರೂ.56,63,616/- (ರೂ. ಐವತ್ತಾರು ಲಕ್ಷದ ಅರವತ್ತ ಮೂರು ಸಾವಿರದ ಆರು ನೂರ ಹದಿನಾರು ಮಾತ್ರ) ಗಳಾಗಲಿದ್ದು, ಮುಖ್ಯ ಲೆಕ್ಕಾಧಿಕಾರಿಗಳು ಸದರಿ ಕಾಮಗಾರಿಯನ್ನು ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟಿರುವ ಅನುದಾನ P0541 ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಾಬ್ ನಂಬರ್ (310-11-00044) ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಖರೀದಿಸಲು ಅಂದಾಜು ಮೊತ್ತ ರೂ.56.64 ಲಕ್ಷಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:01-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (114)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಸವನಗುಡಿಯ ಟ್ಯಾಗೋರ್ ವೃತ್ತದಲ್ಲಿ ಕೆಳಸೇತುವೆ ನಿರ್ಮಾಣದ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತಕ್ಕೆ ದಿನಾಂಕ:01-02-2011 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ವಿಷಯದ ಸಂಖ್ಯೆ:26/2010-11 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಬಸವನಗುಡಿಯ ಟ್ಯಾಗೋರ್ ವೃತ್ತದಲ್ಲಿ ಕೆಳಸೇತುವೆ ನಿರ್ಮಾಣದ ಕಾಮಗಾರಿಯನ್ನು ಜೆ.ಎನ್.ಎನ್.ಯು.ಆರ್.ಎಂ. ಯೋಜನೆಯಡಿಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದು ನಿರ್ವಹಿಸಲಾಗುತ್ತಿದ್ದು, ಸದರಿ ಕಾಮಗಾರಿಯ ಮೂಲ ಅಂದಾಜು ಮೊತ್ತವು ರೂ.2350.00 ಲಕ್ಷಗಳಾಗಿದ್ದು, "ಲಮ್‌ಸಮ್ ಟರ್ನ್‌ಕೀ" ಗುತ್ತಿಗೆ ಆಧಾರದ ಮೇಲೆ ಯಶಸ್ವಿ ಬಿಡ್ಡ್‌ದಾರರಾದ ಮೆಃ ಪಿ.ಎಂ.ಜೆ. ಕನ್ಸ್‌ಟ್ರಕ್ಷನ್ಸ್ ಮತ್ತು ಮೆಃ ಸಿಂಪ್ಲೆಕ್ಸ್ ಪ್ರೈ. ಲಿಮಿಟೆಡ್ (ಜಂಟಿ ಸಹಭಾಗಿತ್ವ) ರವರಿಗೆ ರೂ. 1951.10 ಲಕ್ಷಗಳ ಗುತ್ತಿಗೆ ಮೊತ್ತಕ್ಕೆ (ಶೇ. 11.96 ಕಡಿಮೆ ದರಗಳಿಗೆ) ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯು ದಿನಾಂಕಃ25-10-2009 ರಿಂದ ಪ್ರಾರಂಭವಾಗಿ, ಈವರೆಗೆ ಶೇಕಡ 55 ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಲಾಗಿದೆ. ಸದರಿ ಕಾಮಗಾರಿಯನ್ನು ಡಿಸೆಂಬರ್-2011 ಕ್ಕೆ ಪೂರ್ಣ ಮಾಡಲು ಕಾರ್ಯಸೂಚಿಯನ್ನು ಹಾಕಿಕೊಳ್ಳಲಾಗಿದೆ.

ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿಯು (Technical Advisory Committee (TAC)) ದಿನಾಂಕ:04-11-2009 ರಂದು ಕಾಮಗಾರಿಯ ಸ್ಥಳ ವೀಕ್ಷಣೆ ಮಾಡಿ, ಕೆಳಸೇತುವೆಯ ನಿರ್ಮಾಣದ ಮೂಲ General Arrangement Drawing (GAD) ಯಲ್ಲಿ ಕೆಲವು ಬದಲಾವಣೆ ಮಾಡಿ ಸರ್ವೀಸ್ ರಸ್ತೆಯನ್ನು ಕ್ರಮವಾಗಿ 3.50 ಮೀಟರ್ ನಿಂದ 5.50 ಮೀಟರ್‌ಗೆ ಹಾಗೂ ಪಾದಚಾರಿ ಮಾರ್ಗವನ್ನು 1.50 ಮೀಟರ್‌ನಿಂದ 2.50 ಮೀಟರ್‌ಗೆ ವಿಸ್ತರಿಸಲು ಸೂಚಿಸಿರುತ್ತಾರೆ. ಅದರಂತೆ, ಸರ್ವೀಸ್ ರಸ್ತೆ ಮತ್ತು ಪಾದಚಾರಿ ಮಾರ್ಗವನ್ನು GAD ಪ್ರಕಾರ ಪರಿಷ್ಕರಣೆ ಮಾಡಲಾಗಿರುತ್ತದೆ. ಸದರಿ ಕೆಳಸೇತುವೆ ಕಾಮಗಾರಿಯ ಮೂಲ GAD ಯನ್ನು ಪರಿಷ್ಕರಣೆ ಮಾಡಿದಾಗ, ಭೂಸ್ವಾಧೀನವು ಸೇರಿದಂತೆ ಕೆಲವು ಹೆಚ್ಚುವರಿ ಕಾಮಗಾರಿಗಳು ಸೇರ್ಪಡೆಗೊಂಡಿರುತ್ತದೆ.

ಮೂಲ GAD ಯನ್ನು ಪರಿಷ್ಕರಣೆ ಮಾಡುವುದರಿಂದ ಭೂಸ್ವಾಧೀನ ಅಗತ್ಯವಿದ್ದು, ಒಟ್ಟು 2394.79 ಚದರ ಮೀಟರ್ ಭೂಸ್ವಾಧೀನ ಅಗತ್ಯವಿದ್ದು, ಇದರಲ್ಲಿ ರಾಜ್ಯ/ಕೇಂದ್ರ ಸರ್ಕಾರದ ಸ್ವತ್ತು 1755.32 ಚದರ ಮೀಟರ್ ಮತ್ತು ಖಾಸಗಿ ಸ್ವತ್ತು 639.47 ಚದರ ಮೀಟರ್‌ಗಳಾಗಿರುತ್ತದೆ. ಸದರಿ ಖಾಸಗಿ ಸ್ವತ್ತಿನ ಭೂಸ್ವಾಧೀನದ ಮೊತ್ತ ರೂ. 3,09,63,137.00 ಗಳಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಹೆಚ್ಚುವರಿ ಐಟಂಗಳಾದ ಸೇವಾ ರಸ್ತೆ, ಪಾದಚಾರಿ ಮಾರ್ಗ ಹಾಗೂ ಎನ್.ಆರ್. ಕಾಲೋನಿ ಹಾಗೂ ನ್ಯಾಷನಲ್ ಕಾಲೇಜಿನ ಪೂರ್ವ ಭಾಗದಲ್ಲಿ ಕೆಲವು ನಿವೇಶನಗಳು ರಸ್ತೆಗಿಂತ ಮೇಲ್ಮಟ್ಟದಲ್ಲಿರುವುದರಿಂದ ಸುಮಾರು 4.00 ರಿಂದ 5.00 ಮೀಟರ್ ಎತ್ತರದ ಕಾಂಕ್ರೀಟ್‌ನ ತಡೆಗೋಡೆ ನಿರ್ಮಾಣದ ಅವಶ್ಯಕತೆ ಇರುತ್ತದೆ. ಸದರಿ ಹೆಚ್ಚುವರಿ ಸಿವಿಲ್ ಕಾಮಗಾರಿಗಳ ಅಂದಾಜು ಮೊತ್ತ ರೂ. 2,95,65,175.00 ಗಳಾಗಿರುತ್ತದೆ.

ಹೆಚ್ಚುವರಿ ಸಿವಿಲ್ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತ 2010-11ನೇ ಸಾಲಿನ ದರಪಟ್ಟಿಯನ್ನು ಮತ್ತು ಬೆಸ್ಕಾಂ 2007-08ನೇ ಸಾಲಿನ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದೆ.

. . . . .2

ಹೆಚ್ಚುವರಿ ಸಿವಿಲ್ ಕಾಮಗಾರಿಗಳ ಅಂದಾಜು ಮೊತ್ತ ಹಾಗೂ ಭೂಸ್ವಾಧೀನದ ಅಂದಾಜು ಮೊತ್ತ ಸೇರಿ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯನ್ನು ರೂ.25,86,00,000/- ಗಳಿಗೆ ತಯಾರಿಸಲಾಗಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತಕ್ಕೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರಮ ಸಂಖ್ಯೆ | ವಿವರಗಳು | ಅಂದಾಜು ಮೊತ್ತ (ರೂ.) |
|---|---|---|
| **(A)** | **ಕಾಮಗಾರಿಯ ಮೂಲ ಅಂದಾಜು ಮೊತ್ತದ ವಿವರಗಳು** | |
| 1 | ಕೆಳಸೇತುವೆ ನಿರ್ಮಾಣದ ಗುತ್ತಿಗೆ ಮೊತ್ತ (ಲಮ್‌ಸಮ್ ಟರ್ನ್‌ಕೀ ಗುತ್ತಿಗೆ ಆಧಾರದ ಮೇಲೆ) | 19,51,10,000.00 |
| 2 | ಕಾಮಗಾರಿಯ ಯೋಜನಾ ನಿರ್ವಹಣಾ ಸಮಾಲೋಚಕರ ಶುಲ್ಕ | 25,84,280.00 |
| | **ಒಟ್ಟು ರೂ.** | **19,76,94,280.00** |
| **(B)** | **ಪರಿಷ್ಕೃತ ಅಂದಾಜು ಮೊತ್ತದ ವಿವರಗಳು** | |
| 3 | ಹೆಚ್ಚುವರಿ ಸಿವಿಲ್, ವಿದ್ಯುತ್, ನೀರು ಹಾಗೂ ಒಳಚರಂಡಿ ವ್ಯವಸ್ಥೆ ನಿರ್ಮಾಣದ ಕಾಮಗಾರಿಗಳು | 2,95,65,712.00 |
| 4 | ಕಾಮಗಾರಿಯ ಯೋಜನಾ ನಿರ್ವಹಣಾ ಸಮಾಲೋಚಕರ ಶುಲ್ಕ (ಹೆಚ್ಚುವರಿ ಸಿವಿಲ್ ಕಾಮಗಾರಿಗಳಿಗೆ ಕ್ರಮ ಸಂಖ್ಯೆ-3ರ ಮೊತ್ತಕ್ಕೆ ಶೇಕಡ 1.00 ರಂತೆ) | 2,95,657.12 |
| 5 | ಭೂಸ್ವಾಧೀನದ ವೆಚ್ಚ (ಖಾಸಗಿ ಸ್ವತ್ತು 642.37 ಚದರ ಮೀಟರ್ ಅನ್ನು ರೂ.48420.00 ಚದರ ಮೀಟರ್‌ನಂತೆ) | 3,09,63,137.00 |
| | **ಒಟ್ಟು ಮೊತ್ತ ರೂ.** | **6,08,24,506.12** |
| (C) | **ಇತರೇ ವೆಚ್ಚಗಳು** | 81,213.88 |
| | **ಒಟ್ಟಾರೆ ಮೊತ್ತ (A+B+C) ರೂ.ಗಳಲ್ಲಿ** | **25,86,00,000.00** |

ಕೆಳಸೇತುವೆ ನಿರ್ಮಾಣದ ಕಾಮಗಾರಿಯನ್ನು **"ಟರ್ನ್ ಕೀ"** ಆಧಾರದ ಮೇಲೆ ವಹಿಸಲಾಗಿದ್ದು, ಟೆಂಡರ್ ನಿಯಮಾವಳಿ ಪ್ರಕಾರ ಯಾವುದೇ ಹೆಚ್ಚುವರಿ ಐಟಂಗಳನ್ನು ಹಾಲಿ ಗುತ್ತಿಗೆದಾರರಿಂದಲೇ ಚಾಲ್ತಿ ದರಪಟ್ಟಿಯ ಮೇಲೆ ಟೆಂಡರ್ ಪ್ರೀಮಿಯಂ ಆಧರಿಸಿ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ (ಸದರಿ ಕಾಮಗಾರಿಯ ಶೇಕಡ 11.96% ಕಡಿಮೆ ದರಗಳಿಗೆ ವಹಿಸಲಾಗಿರುತ್ತದೆ) ಹಾಗೂ ಕಾಮಗಾರಿಯ ಸಮಗ್ರ ಹಾಗೂ ತ್ವರಿತಗತಿಯಲ್ಲಿ ನಿರ್ಮಾಣದ ದೃಷ್ಟಿಯಿಂದ ಹೆಚ್ಚುವರಿ ಕಾಮಗಾರಿಗಳನ್ನು ಸಹ ಹಾಲಿ ಗುತ್ತಿಗೆದಾರರಿಂದಲೇ ನಿರ್ವಹಿಸಬೇಕಾದ ಅವಶ್ಯಕತೆ ಇರುತ್ತದೆ. ಹಾಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ ಶೇಕಡ 11.96% ರಷ್ಟು ಕಡಿಮೆ ಇದ್ದು, ಇದರನ್ವಯ ಹೆಚ್ಚುವರಿ ಕಾಮಗಾರಿಗಳನ್ನು ಸದರಿ ಗುತ್ತಿಗೆದಾರರ ಮುಖೇನ ನಿರ್ವಹಿಸಿದಲ್ಲಿ ಪಾಲಿಕೆಗೆ ಆರ್ಥಿಕ ಉಳಿಕೆಯಾಗುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

1. ಬಸವನಗುಡಿಯ ಟ್ಯಾಗೋರ್ ವೃತ್ತದಲ್ಲಿ ಕೆಳಸೇತುವೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ರೂ.25,86,00,000-00 ಗಳಿಗೆ ಅನುಮೋದನೆ.
2. ಹೆಚ್ಚುವರಿ ಕಾಮಗಾರಿಗಳನ್ನು ಹಾಲಿ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ ನಿರ್ವಹಿಸುತ್ತಿರುವ ಗುತ್ತಿಗೆದಾರರಾದ ಮೆ: ಪಿ.ಎಂ.ಜೆ. ಕನ್ಸ್ಟ್ರಕ್ಷನ್ಸ್ ಮತ್ತು ಮೆ: ಸಿಂಪ್ಲೆಕ್ಸ್ ಪ್ರೈ. ಲಿಮಿಟೆಡ್ (ಜೆ.ವಿ.) ರವರಿಂದ ಗುತ್ತಿಗೆ ಕರಾರಿನಲ್ಲಿರುವ ಷರತ್ತುಗಳಿಗೆ ಒಳಪಟ್ಟಂತೆ ನಿರ್ವಹಿಸಲು ಅನುಮೋದನೆ.

. . . . .3

3. ಪರಿಷ್ಕೃತ ಅಂದಾಜುಪಟ್ಟಿ ರೂ.25,86,00,000-00 ಗಳಿಗೆ ಸರ್ಕಾರದ ಮತ್ತು ಜೆ.ಎನ್.ಎನ್. ಯು. ಆರ್.ಎಂ. ನಿಂದ ಅನುಮೋದನೆ ಪಡೆಯಲು ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು **(Revised DPR)** ಸಲ್ಲಿಸಲು ಅನುಮೋದನೆ.

ಮೇಲ್ಕಂಡ ಮೂರು ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕಃ16-07-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-07-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:16-07-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 39 (157)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ. 28 ರ ಸರ್ವೆ ಸಂಖ್ಯೆ.49 ರ ಸರ್ಕಾರಿ ಶಾಲೆಯು ರಸ್ತೆ ಪಕ್ಕದಲ್ಲಿದ್ದು, ವಾಹನಗಳ ಸಂಚಾರದಿಂದಾಗಿ ಶಬ್ದಮಾಲಿನ್ಯ, ವಾಯುಮಾಲಿನ್ಯ ಉಂಟಾಗಿ ಇದರಿಂದ ವಿದ್ಯಾರ್ಥಿಗಳ ಉತ್ತಮ ಕಲಿಕೆಗೆ ಅವಕಾಶವಿರುವುದಿಲ್ಲ. ಮೇಲಾಗಿ ತರಗತಿಯ ಕೊಠಡಿಗಳು ಕಿರಿದಾಗಿದ್ದು, ಗಾಳಿ ಬೆಳಕಿನ ವ್ಯವಸ್ಥೆಯು ಸಹ ಉತ್ತಮವಾಗಿಲ್ಲ ಹಾಗೂ ಮೇಲ್ಛಾವಣಿಯನ್ನು ಎ.ಸಿ. ಶೀಟ್‌ನಿಂದ ನಿರ್ಮಿಸಿದ್ದು, ಕಟ್ಟಡ ತುಂಬಾ ಹಳೆಯದಾಗಿರುತ್ತದೆ. ಆದ್ದರಿಂದ ವಾರ್ಡ್ ಸಂಖ್ಯೆ. 49 ರ ಪಾಲಿಕೆ ಸದಸ್ಯರು ಪತ್ರ ನೀಡಿ, ವಾರ್ಡ್ ನಂ.28 ರ ಸರ್ವೆ-49 ರ ಕೆರೆಯ ಅಂಗಳದ (ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಕಟ್ಟಡದ ಪಕ್ಕದಲ್ಲಿ) ಖಾಲಿ ಜಾಗವಿದ್ದು, ಇಲ್ಲಿ ಶಾಲೆ ನಿರ್ಮಾಣ ಮಾಡಲು ಸೂಚಿಸಿದ ಮೇರೆಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ) ಸ್ಥಳ ಪರಿಶೀಲನೆ ಮಾಡಿ ರೂ.350.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Prosposed BBMP school building near KHB quarters at Ward No.28 Kammanahalli | 350.00 |

ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ.350.00 ಲಕ್ಷಗಳಿಗೆ 2010-11 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ: ಪಿ-0975 "ಶಾಲಾ ಕಟ್ಟಡ/ಗ್ರಂಥಾಲಯ/ಓದುವ ಕೊಠಡಿ/ಟೈಲರಿಂಗ್/ ಕಂಪ್ಯೂಟರ್ ಕೊಠಡಿಗಳ ನಿರ್ಮಾಣ ಮತ್ತು ಅಭಿವೃದ್ಧಿ" ಅಡಿಯಲ್ಲಿ ತೆಗೆದುಕೊಳ್ಳಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01-06-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-06-2011 ರ ನಿರ್ಣಯ ಹಾಗೂ ದಿನಾಂಕ:28-06-2011 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಅಧಿಕ ವಿಷಯದ ಸಂಖ್ಯೆ:15(63)/2011-12 ರಲ್ಲಿ ಆರ್ಥಿಕ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ನಿರ್ಣಯ ಹಾಗೂ ದಿನಾಂಕ:01-06-2011 ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು 2011-12 ನೇ ಸಾಲಿನ ಆಯವ್ಯಯದಲ್ಲಿ ವಲಯ ಕಟ್ಟಡಗಳಿಗೆ ಒದಗಿಸುವ ಅನುದಾನದಲ್ಲಿ ಕೈಗೊಳ್ಳುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:01-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

. . . . .2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ: 01–08–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 40 (158)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನಂತಹ ನಗರಗಳಲ್ಲಿ ಜನರು ದಿನನಿತ್ಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವುದು ಅನಿವಾರ್ಯವಾಗಿರುತ್ತದೆ. ಹತ್ತಿರದ ಸ್ಥಳಗಳಿಗೆ ಓಡಾಡಲು, ದ್ವಿಚಕ್ರ, ತ್ರಿಚಕ್ರ ಅಥವಾ ನಾಲ್ಕು ಚಕ್ರದ ವಾಹನಗಳಿಗಿಂತ ಬೈಸಿಕಲ್ ಬಹಳ ಸೂಕ್ತವಾದ ವಾಹನವಾಗಿರುತ್ತದೆ ಹಾಗೂ National Urban Transport Policy ಯಲ್ಲಿ ಬೈಸಿಕಲ್ ವಾಹನವನ್ನು ನಗರದ ಪ್ರದೇಶದಲ್ಲಿ ಪರ್ಯಾಯ ಸಂಚಾರ ವಾಹನವಾಗಿ ಉತ್ತೇಜನಗೊಳಿಸಿ ಅಳವಡಿಸುವಿಕೆಯ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

ಬೈಸಿಕಲ್ ಓಡಾಡುವುದರಿಂದ, ಅದಕ್ಕೆ ಕಡಿಮೆ ಜಾಗ ಹಿಡಿಯುವುದರಿಂದ, ಸ್ವಲ್ಪಮಟ್ಟಿಗೆ ಸಂಚಾರ ದಟ್ಟಣೆ ಕಡಿಮೆಯಾಗುವುದಲ್ಲದೇ ಇದು ಹೊಗೆರಹಿತ ವಾಹನವಾಗಿದ್ದು, ಯಾವುದೇ ಪರಿಸರ ಮಾಲಿನ್ಯವಿರುವುದಿಲ್ಲ. ಆದ್ದರಿಂದ, ಬೆಂಗಳೂರಿನಾದ್ಯಂತ ಹಂತಹಂತವಾಗಿ ಆದಷ್ಟು ರಸ್ತೆಗಳನ್ನು ಬೈಸಿಕಲ್ ಸ್ನೇಹಿಯಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

ಇದಕ್ಕೋಸ್ಕರ Directorate of Urban Land Transport (DULT) ಇಲಾಖಾವತಿಯಿಂದ ಸಮಗ್ರ ಮಾಹಿತಿಯುಳ್ಳ ವರದಿಯನ್ನು ತಯಾರಿಸಿ, ಈ ಕೆಳಕಂಡ ಸ್ಥಳಗಳಲ್ಲಿ ಸದರಿ ಯೋಜನೆಯನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಹಂತ 1 : ಜಯನಗರ ಕ್ಷೇತ್ರ
ಹಂತ 2 : ಬಸವನಗುಡಿ ಕ್ಷೇತ್ರ
ಹಂತ 3 : ಜೆ.ಪಿ.ನಗರ -ಬಿ.ಟಿ.ಎಂ ಲೇ ಔಟ್ ಕ್ಷೇತ್ರ

ಮೊದಲ ಹಂತವಾಗಿ ಪ್ರಾಯೋಗಿಕವಾಗಿ ಜಯನಗರ ಕ್ಷೇತ್ರವನ್ನು ಆರಿಸಿಕೊಳ್ಳಲು ಕಾರಣವೇನೆಂದರೆ ಸದರಿ ಕ್ಷೇತ್ರದಲ್ಲಿ 32 ಶಾಲಾ ಕಾಲೇಜುಗಳು ಇದ್ದು, ವಿದ್ಯಾರ್ಥಿಗಳ ಓಡಾಟ ಜಾಸ್ತಿಯಿರುವುದರಿಂದ ಆ ಪ್ರದೇಶದಲ್ಲಿ ಇರುವ ರಸ್ತೆಗಳ ಸಂಪರ್ಕ ಜಾಲ ಅಂದರೆ ಮುಖ್ಯ ರಸ್ತೆ ಹಾಗೂ ಅಡ್ಡರಸ್ತೆಗಳ ಲಿಂಕ್ ವ್ಯವಸ್ಥೆಯಿಂದ ಬಹಳ ಉಪಯೋಗವಾಗುವುದರಿಂದ ಈ ಯೋಜನೆಯನ್ನು ಕೈಗೊಳ್ಳಲು ಅನುಕೂಲಕರವಾಗಿರುತ್ತದೆ. ಈ ಕ್ಷೇತ್ರದಲ್ಲಿ ಸುಮಾರು 40 ಕಿ.ಮೀ.ಗಳ ಉದ್ದದ ರಸ್ತೆಯ ಜಾಲವನ್ನು (Network) ಒಳಗೊಂಡಂತೆ 56 ಜಂಕ್ಷನ್‌ಗಳನ್ನು, 26 ಸೈಕಲ್ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

DULT ಇಲಾಖೆಯವರು M/s ಗುಬ್ಬಿ ಲಾಬ್ಸ್ ರವರ ಮೂಲಕ ಸಮಗ್ರ ಯೋಜನಾ ವರದಿ ತಯಾರಿಸಿ, ದಿನಾಂಕ:19-01-11 ರಂದು ಡಾ॥ ಎಂ.ರವೀಂದ್ರ, ಮಾನ್ಯ ಮುಖ್ಯ ಮಂತ್ರಿಗಳ ಸಲಹೆಗಾರರು ರವರ ಉಪಸ್ಥಿತಿಯಲ್ಲಿ ನಡೆದ Co-ordination Committee ಸಭೆಯ ಮುಂದೆ ಮಂಡಿಸಲಾಗಿರುತ್ತದೆ.

ಸದರಿ ಯೋಜನಾ ವರದಿಯಲ್ಲಿರುವ ಸ್ಥಳಗಳನ್ನು ಪರಿಶೀಲಿಸಿ ಟಿ.ಇ.ಸಿ ವಿಭಾಗದಿಂದ ಅಂದಾಜನ್ನು 2010-11 ನೇ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ಡಾಟಾ ರೇಟ್‌ಗಳನ್ನು ಅಳವಡಿಸಿ ರೂ.359.00 ಲಕ್ಷಗಳಿಗೆ ತಯಾರಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ರೂ.259.00 ಲಕ್ಷಗಳಿಗೆ 2010-11 ನೇ ಸಾಲಿನ ಟಿ.ಇ.ಸಿ ಲೆಕ್ಕ ಶೀರ್ಷಿಕೆ P0536 ರಲ್ಲಿ ಕಾಮಗಾರಿ ಸಂಖ್ಯೆ:304-11-000065 ಅನ್ನು ನೀಡಲಾಗಿರುತ್ತದೆ.

. . . . .2

ತದನಂತರ ಈ ಕಾಮಗಾರಿಯ ಅಂದಾಜು ಮೊತ್ತ ರೂ.259.00 ಲಕ್ಷಗಳಿಗೆ ಮುಖ್ಯ ಅಭಿಯಂತರರು (ರ.ಮೂ.ಸೌ) ರವರು ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಅದರಂತೆ ಸದರಿ ಕಾಮಗಾರಿಯನ್ನು ಟಿ.ಇ.ಸಿ ವಿಭಾಗದಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಟೆಂಡರ್ ಪ್ರಕಟಣೆಯಂತೆ, ದಿನಾಂಕ:30-06-2011 ರಂದು ಸದರಿ ಕಾಮಗಾರಿಯ ಒಂದನೇ ಲಕೋಟೆ (ತಾಂತ್ರಿಕ ಬಿಡ್) ಅನ್ನು ತೆರೆಯಲಾಗಿ ಕೆಳಕಂಡ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

1. M/s. RNS Infrastrures Pvt. Ltd.
2. Sri. J C Prakash
3. Md. Najmuddin (Artery Infra Projects Pvt. Ltd.)
4. Sri. V.Venkataswamy

ಸದರಿ ಗುತ್ತಿಗೆದಾರರ ಪೈಕಿ ಕ್ರ.ಸಂ. (4)ರ ಗುತ್ತಿಗೆದಾರರು ಟೆಂಡರ್‌ನ ಪೂರ್ತಿಯಾಗಿ ವಿವರಗಳನ್ನು ಸಲ್ಲಿಸದ ಕಾರಣ ಅವರ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ತಿರಸ್ಕೃತವಾಗಿರುತ್ತದೆ.

ಆದುದರಿಂದ, ಮೇಲಿನ (ಕ್ರ.ಸಂ. 1 ರಿಂದ 3 ರವರೆಗಿನ) ಮೂರು ಜನ ಗುತ್ತಿಗೆದಾರರ ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಲಾಗಿ, ಗುತ್ತಿಗೆದಾರರಾದ M/s. RNS Infrastructures Pvt. Ltd. ಮತ್ತು Sri. J.C Prakash ರವರು ಅರ್ಹತೆ ಹೊಂದಿರುತ್ತಾರೆ. ಈ ಹಿನ್ನಲೆಯಲ್ಲಿ, M/s. RNS Infrastructures Pvt. Ltd. ಮತ್ತು Sri. J C Prakash ರವರ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿದೆ:

ಟೆಂಡರ್‌ಗಿಟ್ಟ ಮೊತ್ತ:ರೂ.2,58,99,197.97 (2010-11ನೇ ಸಾಲಿನ ದರಪಟ್ಟಿಯಂತೆ).
:ರೂ.2,64,23,580.63 (2010-11 ನೇ ಸಾಲಿನ ದರಪಟ್ಟಿ + ಬಿಟುಮಿನ್‌ನ ನೀಡಿಕೆ ದರ)

| Sl. No. | Name of Contractor | EMD in Rs. | Item Rate/Percentage quoted when compared with est. rates | | Remarks |
|---|---|---|---|---|---|
| | | | Amount (in Rs.) | % Above / Below | |
| 1 | Sri. J C Prakash | Rs.3.90 Lakhs (submitted through e-procurement) | 3,10,02,887.16 | 19.71 above compared with Sch-B Rates | 1st Lowest |
| | | | | 17.33 above compared with CSR 2010-11 and issue Rates of Bitumen | |
| 2 | M/s. RNS Infrastructure Ltd. | Rs.3.90 Lakhs (submitted through e-procurement) | 3,16,72,575.90 | 22.29 above compared with Sch-B Rates | 2nd Lowest |
| | | | | 19.86 above compared with CSR 2010-11 and issue Rates of Bitumen | |

....3

ಮೇಲ್ಕಾಣಿಸಿದ ಇಬ್ಬರು ಗುತ್ತಿಗೆದಾರರ ಪೈಕಿ ಶ್ರೀ. ಜೆ.ಸಿ.ಪ್ರಕಾಶ್ ರವರು ಅತಿ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ರೂ.3,10,02,887.16 ಗಳಾಗಿದ್ದು, ಸದರಿ ದರಗಳನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.2,58,99,197.97 ಗಳಿಗೆ ಹೋಲಿಸಿದಾಗ ಶೇ.19.71 ರಷ್ಟು ಹೆಚ್ಚಾಗಿರುತ್ತದೆ ಹಾಗೂ ಸದರಿ ದರಗಳನ್ನು CSR 2010-11 ಹಾಗೂ Issue Rates of Bitumen ದರಗಳಿಗೆ ಹೋಲಿಸಿದಾಗ ಶೇ.17.33 ರಷ್ಟು ಹೆಚ್ಚಾಗಿರುತ್ತದೆ.

ಅದರಂತೆ, ಮುಖ್ಯ ಅಭಿಯಂತರರು (ರ.ಮೂ.ಸೌ) ರವರ ಆದೇಶದಂತೆ, ಸದರಿ ಕಾಮಗಾರಿಯ 'L1' ಟೆಂಡರ್‌ದಾರರಾದ ಶ್ರೀ. ಜೆ.ಸಿ.ಪ್ರಕಾಶ್ ರವರು ನಮೂದಿಸಿರುವ ದರಗಳು ಹೆಚ್ಚಿರುವುದರಿಂದ ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಯಿತು. ಅದರಂತೆ, ಸದರಿ ಗುತ್ತಿಗೆದಾರರು ದಿನಾಂಕ: 08-07-2011 ರಂದು ಈ ಕಛೇರಿಗೆ ಸಂಧಾನಕ್ಕೆ ಹಾಜರಾಗಿ ಪತ್ರವನ್ನು ನೀಡಿರುತ್ತಾರೆ. ಸದರಿ ಪತ್ರದಲ್ಲಿ, ಗುತ್ತಿಗೆದಾರರು ಈ ಕಾಮಗಾರಿಯು Scattered nature of work (ಒಟ್ಟು 56 ಜಂಕ್ಷನ್‌ಗಳು ಕೂಡಿರುತ್ತದೆ) ಆಗಿದ್ದು ಹಾಗೂ ಈ ಕಾಮಗಾರಿಯ ಅಂಶಗಳಾದ ಎತ್ತರಿಸಿದ ಪಾದಚಾರಿ ಮಾರ್ಗ, ಬೈಸಿಕಲ್ ಲೇನ್ ಮಾರ್ಕಿಂಗ್, ಜೀಬ್ರಾ ಕ್ರಾಸಿಂಗ್, ಸೈಕಲ್ ಮಾರ್ಕಿಂಗ್, ಸೂಚನಾ ಫಲಕಗಳು, ರೋಡ್ ಸ್ಟಡ್ಸ್, ಡೆಲಿನೇಟರ್ಸ್ ಅಳವಡಿಸುವುದು ಆಗಿದ್ದು, ಈ ಎಲ್ಲಾ ಕಾಮಗಾರಿಯನ್ನು ರಾತ್ರಿ ವೇಳೆಯೇ ನಿರ್ವಹಿಸಬೇಕಾಗಿರುವುದರಿಂದ ಕಾರ್ಮಿಕರ/ಕೆಲಸಗಾರರ ವೇತನವು ಹೆಚ್ಚಿರುತ್ತದೆ ಹಾಗೂ ಈ ಕಾಮಗಾರಿಯು ನಗರದ ಮಧ್ಯಭಾಗವಾದ ಜಯನಗರ ಪ್ರದೇಶದಲ್ಲಿ ನಿರ್ವಹಿಸಬೇಕಾಗಿದ್ದು, ಸಾಮಾಗ್ರಿಗಳ ಸಂಗ್ರಹ ಹಾಗೂ ಸಾಮಗ್ರಿಗಳನ್ನು ಮತ್ತು ಯಂತ್ರೋಪಕರಣಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಳಾಂತರಿಸುವುದು ಕ್ಲಿಷ್ಟಕರವಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ ತಾವು ನಮೂದಿಸಿದ ದರವು ಸಮಂಜಸವಾಗಿದ್ದು, ಆದರೆ ಸದರಿ ದರವು ಹೆಚ್ಚೆಂದು ಸಂಧಾನಕ್ಕೆ ಆಹ್ವಾನಿಸಿರುವುದರಿಂದ ಈ ಮೊದಲು ನಮೂದಿಸಿರುವ ದರಗಳಿಗಿಂತ ಶೇ.2.38 ರಷ್ಟು (ಸಿ.ಎಸ್.ಆರ್. 2010-11 ಮತ್ತು ದಿನಾಂಕ:15-04-2011 ರ ಬಿಟುಮಿನ್‌ನ ಪರಿಷ್ಕೃತ ದರಗಳಂತೆ) ಕಡಿಮೆ ಮಾಡಿ ಅಂದರೆ ಸಿ.ಎಸ್.ಆರ್ 2010-11 ಮತ್ತು ದಿನಾಂಕ:15-04-2011 ರ ಬಿಟುಮಿನ್‌ನ ಪರಿಷ್ಕೃತ ದರಗಳ ಮೇಲೆ ಶೇ.14.95 ರಷ್ಟು ಹೆಚ್ಚಿನಂತೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ.

ಈ ಯೋಜನೆ ಸಫಲಗೊಳ್ಳಲು ಮಾನ್ಯ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ.ಬಿ.ಎನ್.ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ದಿನಾಂಕ:11-02-2011 ರಂದು ಜಯನಗರ ನಾಗರೀಕರೊಡನೆ ಸಂವಾದ ಸಭೆಯನ್ನು NMKRV ಕಾಲೇಜಿನಲ್ಲಿ ನಡೆಸಲಾಗಿರುತ್ತದೆ ಹಾಗೂ ನಾಗರೀಕರಿಂದ ಉತ್ತಮ ಪ್ರತಿಕ್ರಿಯೆ ದೊರೆತ್ತಿರುತ್ತದೆ.

ಸೈಕಲ್ ಉಪಯೋಗದ ಬಗ್ಗೆ, ಜನರಿಗೆ ಅರಿವು ಮೂಡಿಸುವ ಸಲುವಾಗಿ Ride a Cycle Foundation ಸದಸ್ಯರು, DULT ನ ಅಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಶ್ರೀ. ಎಸ್.ಕೆ. ಲೋಹಿಯ OSD (Urban transport and ex-officio Joint Secretary Ministry of Urban Development) ರವರು ದಿನಾಂಕ:25-06-2011 ರ ಬೆಳಿಗ್ಗೆ 8-15 ಗಂಟೆಗೆ ಎಂ.ಇ.ಎಸ್. ಹೈಸ್ಕೂಲ್ ಮೈದಾನದಿಂದ ಜಯನಗರ 2ನೇ ಬ್ಲಾಕ್‌ನಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯ ಕಛೇರಿವರೆಗೆ ಸೈಕಲ್ ತುಳಿದುಕೊಂಡು ಬಂದು ಜನರಿಗೆ ಅರಿವು ಮೂಡಿಸಿರುತ್ತಾರೆ. ಈ ಬಗ್ಗೆ ಪತ್ರಿಕಾ ವರದಿಯನ್ನು ಸಹ ನಡೆಸಲಾಗಿರುತ್ತದೆ. ವರದಿಯು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ.

. . . . .4

ಈ ಕಾಮಗಾರಿಯು ಕರ್ನಾಟಕದಲ್ಲೇ ಪ್ರಪ್ರಥಮವಾಗಿ ಕೈಗೊಳ್ಳಲಾಗಿರುತ್ತದೆ (Pilot Project). ಇದರ ಯಶಸ್ಸಿನಿಂದ ಶಾಲಾ ವಿದ್ಯಾರ್ಥಿಗಳು, ಬಡವರಿಗೆ ಬಹಳ ಅನುಕೂಲವಾಗುವುದಲ್ಲದೆ, ಟ್ರಾಫಿಕ್ ಸಮಸ್ಯೆಯನ್ನು ಹಾಗೂ Non Motorised ವಾಹನಗಳಿಗೆ ಉತ್ತೇಜಿಸಿದಂತಾಗುವುದು ಹಾಗೂ ಪರಿಸರ ಮಾಲಿನ್ಯವನ್ನು ಕಡಿಮೆಗೊಳಿಸುತ್ತದೆ.

ಈ ಹಿನ್ನಲೆಯಲ್ಲಿ, ಸದರಿ ಗುತ್ತಿಗೆದಾರರು ಸಂಧಾನದಲ್ಲಿ ತಿಳಿಸಿರುವ ಮೇಲಿನ ಅಂಶಗಳನ್ನು ಪರಿಗಣಿಸಬಹುದಾಗಿದ್ದು, ಅದರಂತೆ ಸದರಿ ಗುತ್ತಿಗೆದಾರರು ನಮೂದಿಸಿದ ದರವನ್ನು ಸಂಧಾನದ ನಂತರ ಟೆಂಡರ್‌ಗಿಟ್ಟ ಮೊತ್ತಕ್ಕೆ ಅಂದರೆ ಸಿ.ಎಸ್.ಆರ್ 2010-11 ಮತ್ತು ದಿನಾಂಕ:15-04-2011 ರ ಬಿಟುಮಿನ್‌ನ ಪರಿಷ್ಕೃತ ದರ ರೂ.2,64,23,580.63 ಗಳಿಗಿಂತ ಶೇ.14.95 ರಷ್ಟು ಹೆಚ್ಚು ಅಂದರೆ ಒಟ್ಟು ಟೆಂಡರ್ ಮೊತ್ತ ರೂ.3,03,73,905.00 (ಮೂರು ಕೋಟಿ ಮೂರು ಲಕ್ಷದ ಎಪ್ಪತ್ತೂರು ಸಾವಿರದ ಒಂಭೈನೂರ ಐದು ಮಾತ್ರ) ಆಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, Providing Bicycle friendly routes in Jayanagar Area, Bangalore ರ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿದ್ದು, ಸದರಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವ್ಯಾಪ್ತಿಯಲ್ಲಿರುವುದರಿಂದ, ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-07-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-07-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ: 21-07-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 41 (159)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆಟ್ರೋ ಕಾರಿಡಾರ್ ರೀಚ್-1 ಕಾಮಗಾರಿಯಾದ ಮಹಾತ್ಮಗಾಂಧಿ ರಸ್ತೆಯಿಂದ ಬೈಯಪ್ಪನ ಹಳ್ಳಿಯ ಮಾರ್ಗದ ಮೆಟ್ರೋ ಕಾಮಗಾರಿಯು ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ. ಈ ಸಂದರ್ಭದಲ್ಲಿ ಈ ಮಾರ್ಗದಲ್ಲಿನ ತಳ ಮಟ್ಟದ ರಸ್ತೆಯು ಹದಗೆಟ್ಟಿರುವ ಮಾರ್ಗದಲ್ಲಿ, ಮೆಟ್ರೋ ರೈಲು ಆರಂಭಿಸುವ ಮುನ್ನ ಸಾರ್ವಜನಿಕರ ಉಪಯೋಗಕ್ಕಾಗಿ ರಸ್ತೆಯನ್ನು ಅಭಿವೃದ್ಧಿಗೊಳಿಸುವುದು ಅತ್ಯವಶ್ಯಕವಾಗಿರುತ್ತದೆ. ಮೆಟ್ರೋ ಕಾಮಗಾರಿ ಪೂರ್ಣಗೊಂಡ ನಂತರ ಮೆಟ್ರೋ ಸ್ಟೇಷನ್ ಸ್ಥಳದಲ್ಲಿ ಸಾರ್ವಜನಿಕ ಸಂಚಾರವು ಹೆಚ್ಚಾಗಲಿದ್ದು, ಇಲ್ಲಿ ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಅಂದರೆ ಸುರಕ್ಷಿತ ಪಾದಾಚಾರಿ ಮಾರ್ಗ, ಬಸ್ ಬೇ ನಿರ್ಮಾಣ, ಉನ್ನತ ಮಟ್ಟದ ಸಂಚಾರಿ ರಸ್ತೆ ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಸ್ಥಳದಲ್ಲಿ ಉನ್ನತ ಮಟ್ಟದ ಅತ್ಯಾಧುನಿಕವಾದ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ. ಈ ದಿಸೆಯಲ್ಲಿ, ಈ ಮಾರ್ಗದಲ್ಲಿ ಕಾಂಕ್ರೀಟ್ ಮೇಲ್ಪದರವನ್ನು (White Topping) ಹಾಕಲು ದಿನಾಂಕ:12-01-2011 ರಲ್ಲಿ ನಡೆದ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಚರ್ಚಿಸಲಾಯಿತು. ಚರ್ಚೆಯ ನಂತರ ಸಮಿತಿಯು ಮೆಟ್ರೋ ಕಾಮಗಾರಿ ಪೂರ್ಣಗೊಂಡ ಪ್ರದೇಶಗಳಲ್ಲಿನ ಕಾಂಕ್ರೀಟ್ ಮೇಲ್ಪದರವನ್ನು (White Topping) ಅನುಷ್ಠಾನಗೊಳಿಸಲು ಸಮ್ಮತಿಸಿರುತ್ತದೆ ಹಾಗೂ ಈಗಾಗಲೇ 2010-11 ರ ಸಾಲಿನ ಆಯವ್ಯಯದ ಅಂದಾಜಿನಲ್ಲಿ White Topping ಗಾಗಿ ರೂ.25.00 ಕೋಟಿಗಳನ್ನು ಲಭ್ಯವಿರುವ ಅನುದಾನದಲ್ಲಿ ಭರಿಸಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ.

ತದನಂತರ ಮಾನ್ಯ ಮುಖ್ಯ ಮಂತ್ರಿಗಳ ತಾಂತ್ರಿಕ ಸಲಹೆಗಾರರಾದ ಡಾ॥ ಎ.ರವೀಂದ್ರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ, BMRCL ಸಂಸ್ಥೆಯವರು ಸಹ ಈ ಕಾಮಗಾರಿ ವೆಚ್ಚದಲ್ಲಿ ಶೇ.50 ರಷ್ಟನ್ನು ಭರಿಸಲು ಸೂಚಿಸಿ, ಈ ಕಾಮಗಾರಿಯನ್ನು ಹಂತಹಂತವಾಗಿ ಕೈಗೊಳ್ಳಲು ಸೂಚಿಸಿರುತ್ತಾರೆ. ಪ್ರಾರಂಭಿಕವಾಗಿ, ಎಂ.ಜಿ. ರಸ್ತೆಯಿಂದ ಬೈಯಪ್ಪನಹಳ್ಳಿ ಹಾಗೂ ಮೆಟ್ರೋ ನಿಲ್ದಾಣದ ಕೂಡುರಸ್ತೆಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಸಮಗ್ರ ಯೋಜನಾ ವರದಿಯನ್ನು ತಯಾರಿಸಲು e-Procurement ಮುಖಾಂತರ ಟೆಂಡರ್ ಅನ್ನು ಆಹ್ವಾನಿಸಿ, M/s. Infra Support Engineers Consultants Pvt. Ltd., ಯೋಜನಾ ಸಮಾಲೋಚಕರನ್ನು ನೇಮಿಸಲಾಗಿದೆ. ಈ ಕಾಮಗಾರಿಯ ಸಮಗ್ರ ಯೋಜನಾ ವರದಿಯನ್ನು ತಾಂತ್ರಿಕ ಸಲಹಾ ಸಮಿತಿಯ ಮುಂದೆ ದಿನಾಂಕ:27-06-2011 ರಂದು ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಇದರ ಯೋಜನಾ ವೆಚ್ಚ ಸುಮಾರು ರೂ.50.00 ಕೋಟಿಗಳಾಗಿದ್ದು, ಸದರಿ ಸಭೆಯು ಈ ಸಮಗ್ರ ಯೋಜನಾ ವರದಿಗೆ ತಾತ್ವಿಕ ಅನುಮೋದನೆ ನೀಡಿರುತ್ತದೆ.

ತದನಂತರ ದಿನಾಂಕ:16-07-2011 ರಲ್ಲಿ BMRCL Board Room ನಲ್ಲಿ ನಡೆದ ಸಭೆಯಲ್ಲಿ ಹಾಜರಿದ್ದ ಮಾನ್ಯ ಮುಖ್ಯ ಮಂತ್ರಿಯವರ ಸಲಹೆಗಾರರಾದ ಡಾ॥ ಎ.ರವೀಂದ್ರ ಅಬೈಡ್ ಸದಸ್ಯರಾದ ಶ್ರೀ. ಅಶ್ವಿನ್ ಮಹೇಶ್ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವ್ಯವಸ್ಥಾಪಕ ನಿರ್ದೇಶಕರು BMRCL ಹಾಗೂ BMTC, BWSSB, BESCOM ಅಧಿಕಾರಿಗಳ ಸಮಕ್ಷಮದಲ್ಲಿ ಈ ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ ಹಾಗೂ ಸದರಿ ಸಭೆಯಲ್ಲಿ ಅಂದಾಜು ವೆಚ್ಚವನ್ನು ಶೇ.50:50 ಅನುಪಾತದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ BMRCL ಸಂಸ್ಥೆಯವರು ಭರಿಸಿ ಶೇ.50 ರಷ್ಟು ಹಣವನ್ನು

. . . . .2

BMRCL ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಠೇವಣಿ ಇಡಲು ತಾತ್ವಿಕವಾಗಿ ಒಪ್ಪಿಗೆ ನೀಡಲಾಗಿರುತ್ತದೆ. ಮುಂದುವರೆದಂತೆ, ಸದರಿ ಕಾರಿಡಾರ್‌ಗಳಲ್ಲಿ, ಬಸ್ ಬೇಗಳನ್ನು ಜಾಗತಿಕ ಗುಣಮಟ್ಟದಲ್ಲಿ ನಿರ್ಮಿಸಲು ಯೋಜಿಸಲಾಗಿದ್ದು, BMRCL ಸಂಸ್ಥೆಯವರು ಸಹ World Class Bus Feedar Service Stop ಗಳನ್ನು ನಿರ್ಮಿಸಲು ಒಪ್ಪಿಗೆ ಸೂಚಿಸಿರುತ್ತದೆ. ಸದರಿ, ಬಸ್ ಬೇಗಳನ್ನು ನಿರ್ಮಾಣದ ನಂತರ, ಖಾಸಗಿ ಸಂಸ್ಥೆಗಳಿಗೆ ಜಾಹೀರಾತು ಹಕ್ಕನ್ನು ನೀಡಿ ಇದರಿಂದ ಬರುವ ಆದಾಯವನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಡಿಯಲ್ಲಿ ಒಂದು 'CORPUS FUND' ತಯಾರಿಸಿ ಹಾಗೂ ಸದರಿ ಲೆಕ್ಕ ಶೀರ್ಷಿಕೆಯನ್ನು ರಚಿಸಿ, ಇದರಿಂದ ಬರುವ ಹಣವನ್ನು BMRCL Reach-1 ಅಡಿಯಲ್ಲಿನ ರಸ್ತೆ, ಪಾದಚಾರಿ, ಬಸ್ ಬೇ ಹಾಗೂ ಇತರ ವಾರ್ಷಿಕ ನಿರ್ವಹಣೆಗಳಿಗಾಗಿ ಉಪಯೋಗಿಸಲು ಒಪ್ಪಿಗೆಯನ್ನು ಸಹ ಸೂಚಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಕೋರಲಾಗಿದೆ.

- ಸದರಿ ಡಿಪಿಆರ್ ಹಾಗೂ ಅಂದಾಜು ಮೊತ್ತವಾದ ರು.50.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
- ಸದರಿ ಅಂದಾಜು ಮೊತ್ತದ ಶೇ.50:50 ಅನುಪಾತದಲ್ಲಿ BMRCL ಸಂಸ್ಥೆಯವರು ರೂ.25.00 ಕೋಟಿ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಠೇವಣಿ ಇಡಲು BMRCL ರವರಿಗೆ ಪತ್ರ ಬರೆಯಲು ಅನುಮೋದನೆ.
- ಸದರಿ ಕಾಮಗಾರಿಯನ್ನು ಕೂಡಲೇ ತೆಗೆದುಕೊಳ್ಳುವುದು ಅತ್ಯವಶ್ಯಕವಾಗಿರುವುದರಿಂದ ಹಾಗೂ ಶೀಘ್ರವಾಗಿ ನಿರ್ವಹಿಸಬೇಕಾಗಿರುವುದರಿಂದ ಕಾಲ ವಿಳಂಬವನ್ನು ತಪ್ಪಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಹಾಗೂ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆಗಾಗಿ ಒಟ್ಟಾರೆಯಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.
- ಸದರಿ ಮೆಟ್ರೋ ರೀಚ್: 1 ರಲ್ಲಿ ನಿರ್ಮಿಸುವ ಬಸ್ ಬೇ ಗಳಲ್ಲಿ ಖಾಸಗಿ ಸಂಸ್ಥೆಗಳಿಗೆ ಜಾಹೀರಾತು ಹಕ್ಕನ್ನು ನೀಡಿ, ಅದರಿಂದ ಬರುವ ಆದಾಯವನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಹೆಸರಿನಲ್ಲಿ 'Corpus fund' ಎಂಬ ಲೆಕ್ಕ ಶೀರ್ಷಿಕೆಯನ್ನು ಪ್ರಾರಂಭಿಸಲು ಹಾಗೂ ಈ ಅನುದಾನವನ್ನು ಮೆಟ್ರೋ ರೀಚ್-1 ರ ಅಡಿಯಲ್ಲಿನ ರಸ್ತೆ, ಪಾದಚಾರಿ ಮಾರ್ಗ, ಬಸ್ ಬೇ ಇತ್ಯಾದಿಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗಳಿಗೆ ವಿನಿಯೋಗಿಸಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 24-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 11-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯವನ್ನು ಒಪ್ಪುವುದು".

. . . . .3

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ: 11-08-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ : 43 (161)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 94ರಲ್ಲಿನ ಹಾಲಿ ದುರಸ್ಥಿಯಲ್ಲಿರುವ ಈಜುಕೊಳವನ್ನು ಪುನರ್ ನವೀಕರಿಸುವ ಕಾಮಗಾರಿಗಾಗಿ 2010-11 ನೇ ಸಾಲಿನ ಆಯವ್ಯಯದಲ್ಲಿ ರೂ.200 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಉಳಿಕೆ ರೂ.167.00 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ.

ಈ ಸಂಬಂಧ ದಿನಾಂಕ:22-06-2011 ರಂದು ಗಾಂಧಿನಗರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ. ದಿನೇಶ್ ಗುಂಡೂರಾವ್ ರವರು ಪತ್ರವನ್ನು ನೀಡಿ, ಈ ಕಾಮಗಾರಿಯನ್ನು ತುರ್ತಾಗಿ Land Army (KRIDL) ರವರ ಮುಖೇನ ಕೈಗೆತ್ತಿಕೊಂಡು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿರುತ್ತಾರೆ. ಆದ್ದರಿಂದಾಗಿ, ಸದರಿ ಕಾಮಗಾರಿಯನ್ನು Land Army (KRIDL) ರವರ ಮುಖೇನ ಕೈಗೆತ್ತಿಕೊಂಡು ನಿರ್ವಹಿಸಲು ಹಾಗೂ ಈಗಾಗಲೇ ಆಡಳಿತಾತ್ಮಕ ಅನುಮೋದನೆ ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ: 11-08-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07–09–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 44 (162)/2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಶವಂತಪುರ–ಯಲಹಂಕ ವಿಭಾಗದಲ್ಲಿನ ವಿರುಪಾಕ್ಷಪುರ ಬಳಿಯ ಎಲ್.ಸಿ ನಂ. 10 ಬಿ, ಕೊಡಿಗೆಹಳ್ಳಿ ಗೇಟ್ ರೈಲ್ವೆ ಕಿ.ಮೀ. 12/300–400 ಕೊಡಿಗೆಹಳ್ಳಿ ರೈಲ್ವೆ ನಿಲ್ದಾಣ ಬಳಿ ಆರ್‌ಯುಬಿ ನಿರ್ಮಾಣ ಮಾಡಲು ನೈರುತ್ಯ ರೈಲ್ವೆ ಇಲಾಖೆ ಜೊತೆಯಲ್ಲಿ ಜಂಟಿಯಾಗಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನೆಯನ್ನು ಸಮಾಲೋಚಕರಾದ ಮೆ॥ ಮಾನಸ ಕನ್ಸಲ್‌ಟೆಂಟ್ಸ್ ರವರು ಸಿದ್ಧಪಡಿಸಿ, ಸಲ್ಲಿಸಿದ್ದ ಜಿ.ಎ.ಡಿಯನ್ನು ನೈರುತ್ಯ ರೈಲ್ವೆ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಿ, ಅನುಮೋದನೆ ಪಡೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ.31.36 ಕೋಟಿಗಳಾಗುತ್ತದೆ. ಈ ಅಂದಾಜನ್ನು, ಪಾಲಿಕೆಯಿಂದ ನೇಮಕ ಮಾಡಿರುವ ಸಲಹೆಗಾರರಾದ ಮೆ॥ ಮಾನಸ ಕನ್ಸಲ್‌ಟೆಂಟ್ಸ್ ರವರು ತಯಾರಿದ್ದು, ಬಾಕ್ಸ್ ಪುಷಿಂಗ್ ವಿಧಾನದಲ್ಲಿ ಕೆಳಸೇತುವೆಯನ್ನು ನಿರ್ಮಿಸಲು ಯೋಜಿಸಲಾಗಿದೆ. ಈ ಸಂಬಂಧ, ನೈರುತ್ಯ ರೈಲ್ವೆ ಇಲಾಖೆಯವರು ಬಾಕ್ಸ್ ನಿರ್ಮಾಣ ಮತ್ತು ಅಪ್ರೋಚ್ ನಿರ್ಮಾಣಕ್ಕೆ ರೂ.20,77,60,936.00 ಅಂದಾಜನ್ನು ಸಲ್ಲಿಸಿ, ಪಾಲಿಕೆಯ ಅನುಮೋದನೆ ಕೋರಿರುತ್ತಾರೆ.

ಈ ಕಾಮಗಾರಿಯ ಅಂದಾಜು ವೆಚ್ಚ ರೂ. 31.36 ಕೋಟಿಗಳಾಗಿದ್ದು, ಅಂದಾಜಿನಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಈ ಯೋಜನೆಯಲ್ಲಿ ಕೊಡಿಗೆಹಳ್ಳಿ ಮುಖ್ಯ ರಸ್ತೆ ಕಡೆಯಿಂದ ತಿಂಡ್ಲು ಕಡೆಗೆ ಸಂಚರಿಸುವಂತೆ 4 ಪಥದ ರಸ್ತೆ ನಿರ್ಮಾಣ, ನಾಗರೀಕ ಸೌಲಭ್ಯಗಳ ಸ್ಥಳಾಂತರ, ಭೂಸ್ವಾಧೀನ ಮತ್ತು ವಾಹನ ಸಂಚಾರಗಳಿಗೆ ತಾತ್ಕಾಲಿಕ ರಸ್ತೆ ಮತ್ತು ವಿದ್ಯುತ್ ಕಾಮಗಾರಿಗಳು ಅಲ್ಲದೇ ಇತ್ಯಾದಿ ಅಂಶಗಳನ್ನು ಕಾಮಗಾರಿ ಪೂರ್ಣಗೊಳಿಸಲು ಅಳವಡಿಸಿಕೊಳ್ಳಲಾಗಿದೆ.

ಈ ಆರ್‌ಯುಬಿ ನಿರ್ಮಾಣದಿಂದ ನಗರ ಹಾಗೂ ಕೊಡಿಗೆಹಳ್ಳಿ ತಿಂಡ್ಲು ಪ್ರದೇಶಗಳಿಗೆ ವಾಹನ ಸಂಚಾರ ಸುಗಮವಾಗುತ್ತದೆ. ಅಲ್ಲದೆ, ಪರಿಸರ ಮಾಲಿನ್ಯ, ವಾಹನಗಳ ನಿರ್ವಹಣೆಯ ವೆಚ್ಚ, ಪೆಟ್ರೋಲಿಯಂ ಪ್ರಾಡಕ್ಟ್‌ಗಳ ಉಪಯೋಗ ಕಡಿಮೆ ಮಾಡಬಹುದಾಗಿದೆ. ಈ ಆರ್‌ಯುಬಿ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು ರೂ. 200.00 ಲಕ್ಷಗಳನ್ನು ನೈರುತ್ಯ ರೈಲ್ವೆ ಇಲಾಖೆಗೆ ಪ್ರಾರಂಭಿಕ ಠೇವಣಿ ಮಾಡಲಾಗಿದೆ. ಕೆಳಸೇತುವೆ ಬಾಕ್ಸ್ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣ ಮತ್ತು ಯುಟಿಲಿಟಿ ಸ್ಥಳಾಂತರ ಇತ್ಯಾದಿಗಳನ್ನು ರೈಲ್ವೆ ಇಲಾಖೆಯ ನಿಯಮಗಳಿಗನುಗುಣವಾಗಿ ತಯಾರಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ.20,77,60,936.00 ಗಳಿಗೆ ಪಾಲಿಕೆಯ ಅನುಮೋದನೆಯನ್ನು ದೃಢೀಕರಿಸುವ ಸಲುವಾಗಿ ಮೇಲುರುಜು ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ.

ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ, ಕೆಳಸೇತುವೆ ನಿರ್ಮಾಣಕ್ಕೆ ಅವಶ್ಯಕವಾಗಿರುವ ಭೂಸ್ವಾಧೀನಕ್ಕೆ ತಗಲುವ ವೆಚ್ಚಕ್ಕಾಗಿ ಅವಕಾಶ ಕಲ್ಪಿಸಿಕೊಂಡಿರುವುದಿಲ್ಲ. ಸದರಿ ಕಾಮಗಾರಿಗೆ ಸಮಾಲೋಚಕರು ನೀಡಿರುವ ಜೆ.ಎ.ಡಿ ಗೆ ಅನುಮೋದನೆ ದೊರೆತಿದ್ದು, ನಕ್ಷೆಯಲ್ಲಿ ಭೂಸ್ವಾಧೀನ ಮಾಡಬೇಕಾಗಿರುವ ಪ್ರದೇಶವನ್ನು ತೋರಿಸಿದ್ದು, ಅದರ ಪ್ರಕಾರ ಸುಮಾರು 76767.97 ಚದರ ಅಡಿಗಳಷ್ಟು ಭೂವಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ಪತ್ರ ನೊಂದಣಿ ಮತ್ತು ಮುದ್ರಾಂಕ ಇಲಾಖೆಯವರ ಅಧಿಸೂಚನೆ ಸಂಖ್ಯೆ:ಸಿ.ವಿ.ಸಿ/ಬಿಯುಡಿ/5/2006–07, ಬೆಂಗಳೂರು ದಿನಾಂಕ:17–04–2007 ಅದರಂತೆ ಕೊಡಿಗೆಹಳ್ಳಿಯಲ್ಲಿ ಚದರ ಅಡಿ ಒಟ್ಟು ರೂ.950/– ಗಳಿದ್ದು, ಭೂಮಿಯನ್ನು ಹಾಗೂ ಕಟ್ಟಡಗಳನ್ನು ಮೌಲ್ಯಮಾಪನ ಮಾಡಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಪಾಲಿಕೆ

. . . . .2

ವತಿಯಿಂದ, ವಹಿಸಬೇಕಾಗಿರುವುದರಿಂದ ರೂ.10.00 ಕೋಟಿಗಳ ಅನುದಾನವನ್ನು ಅಂದಾಜು ಪಟ್ಟಿಯಲ್ಲಿ ಪ್ರಾರಂಭಿಕ ಠೇವಣಿಯಾಗಿ ಸೇರಿಸಿಕೊಳ್ಳಲಾಗಿರುತ್ತದೆ.

ಈ ಯೋಜನೆಯಲ್ಲಿ ಕೊಡಿಗೆಹಳ್ಳಿಯ ರೈಲ್ವೆ ಹಳಿಯಿಂದ ತಿಂಡ್ಲು ಕಡೆಗೆ 193.35 ಮೀ ಉದ್ದದ ಅಪ್ರೋಚ್ ರಸ್ತೆ ಹಾಗೂ ರೈಲ್ವೆ ಹಳಿಯ ಕೊಡಿಗೆಹಳ್ಳಿಯ ಕಡೆಗೆ 103.97 ಮೀ ಉದ್ದದ ಅಪ್ರೋಚ್ ರಸ್ತೆಗೆ ಜಿಎಡಿಯಲ್ಲಿ ಅನುಮೋದನೆ ದೊರೆತಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ, ಎರಡು ಬದಿಯ ಅಪ್ರೋಚ್ ರಸ್ತೆಗಳನ್ನು ನಿರ್ಮಿಸಲು ಹಾಲಿ ಇರುವ ನಾಗರೀಕ ಸೌಲಭ್ಯಗಳನ್ನು ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗಳಿಂದ ಸ್ಥಳಾಂತರಿಸಬೇಕಾಗಿರುತ್ತದೆ. ಕೊಡಿಗೆಹಳ್ಳಿಯ ಹತ್ತಿರವಿರುವ ರೈಲ್ವೆ ಹಳಿಯು ಹಳೆಯ ಸಿಎಂಸಿ ವಾರ್ಡ್ ಆಗಿದ್ದು, ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿರುತ್ತದೆ. ಆದ್ದರಿಂದ, ಸದರಿ ಕಾಮಗಾರಿಯ ಸ್ಥಳದಲ್ಲಿ ಯಾವುದೇ ತರಹದ ನೀರಿನ ಪೈಪ್‌ಗಳು ಹಾಗೂ ಸ್ಯಾನಿಟರಿ ಪೈಪ್‌ಗಳು ಇರುವುದರ ಬಗ್ಗೆ ಪೂರ್ಣ ಚಿತ್ರಣ ಇಲ್ಲವಾದ ಕಾರಣ ಹಾಗೂ ಹಾಲಿ ಇರುವ ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟ ಸಾರ್ವಜನಿಕ ಸಂಪರ್ಕಗಳ ಸ್ಥಳಾಂತರಕ್ಕೆ ಮೀಸಲಿಟ್ಟಿರುವ ಮೊತ್ತವು ತೀರಾ ಕಡಿಮೆಯಾಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ಹೆಚ್ಚುವರಿಯಾಗಿ ರೂ. 50,00,000.00 ಗಳ ಅನುದಾನವನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ ಆಯವ್ಯಯಗಳಲ್ಲಿ ನೀಡಿರುವ ಮೊತ್ತದ ವರದಿ ಕೆಳಗಿನಂತಿದೆ.

2009-10 ---------- ರೂ. 250.00 ಲಕ್ಷಗಳು
2010-11 ---------- ನೀಡಿರುವುದಿಲ್ಲ
2011-12 ---------- ರೂ. 14.18 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದ ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ. 31,36,00,000.00 ಗಳಿಗೆ ತಯಾರಿಸಿದ್ದು, ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಭಾಗ-1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ. 20,77,60,936.00 |
| ಭಾಗ-2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಮೊತ್ತ | ರೂ. 10,00,00,000.00 |
| | ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ | ರೂ. 50,00,000.00 |
| | ವಿದ್ಯುದೀಕರಣ | ರೂ. 8,00,000.00 |
| | ರೌಂಡಿಂಗ್ ಚಾರ್ಜಸ್ | ರೂ. 39,064.00 |
| | **ಒಟ್ಟಾರೆ ಮೊತ್ತ ರೂ.** | **ರೂ. 31,36,000.00** |

ಆದ್ದರಿಂದ, ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಿದೆ.

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.31,36,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ನೈರುತ್ಯ ರೈಲ್ವೆ ಇಲಾಖೆಗೆ ಠೇವಣಿ ಮಾಡಬೇಕಾದ ಮೊತ್ತ ರೂ. 14,38,88,177.00 ಗಳಿಗೆ ಆಡಳಿತಾತ್ಮಕ ಅನುಮೋದನೆ.

3. ಪಾಲಿಕೆ ವತಿಯಿಂದ ನಿರ್ವಹಿಸಬಹುದಾದ ಅಂದಾಜು ಪಟ್ಟಿಯ ಮೊತ್ತ ರೂ.10,58,39,064.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
4. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.
5. ಸದರಿ ಯೋಜನೆಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜು ಪಟ್ಟಿಗೆ ಮೇಲುರುಜು ಮಾಡಿ ನೈರುತ್ಯ ರೈಲ್ವೆಗೆ ಸಲ್ಲಿಸಲು ಅನುಮೋದನೆ ಹಾಗೂ ರೈಲ್ವೆ ವತಿಯಿಂದ ಟೆಂಡರ್ ಆಹ್ವಾನ ಮಾಡಲು ಕೋರಿ ಅನುಮೋದನೆ.
6. ರೈಲ್ವೆ ಇಲಾಖೆಗೆ ಪಾಲಿಕೆಯಿಂದ ಈ ಕಾಮಗಾರಿಯ ಪ್ರಗತಿಯ ಆಧಾರದ ಮೇಲೆ ಆಗಿಂದಾಗ್ಗೆ ಠೇವಣಿ ಇಡಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04–07–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21–07–2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21–07–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21–07–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 45 (163)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಾಪೂಜಿನಗರದ ಬಳಿ ಎಲ್.ಸಿ.5 ಕ್ಕೆ ಬೆಂಗಳೂರು-ಮೈಸೂರು ರೈಲ್ವೆ ಹಳಿಗೆ ಅಡ್ಡಲಾಗಿ ಆರ್.ಯು.ಬಿ ಯನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರಿ ಕಾಮಗಾರಿಯನ್ನು ನೈರುತ್ಯ ರೈಲ್ವೆ ಇಲಾಖೆಯ ಜೊತೆಯಲ್ಲಿ ಜಂಟಿಯಾಗಿ ಕೈಗೊಳ್ಳಲು, ಮೆ॥ರೈಟ್ಸ್ ಸಂಸ್ಥೆಯವರು ಸಿದ್ಧಪಡಿಸಿ ಸಲ್ಲಿಸಿದ್ದ ಜಿ.ಎ.ಡಿ.ಯನ್ನು ಮೇಲು ರುಜು ಮಾಡಿ ನೈರುತ್ಯ ರೈಲ್ವೆ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಈ ಸಂಬಂಧ ನೈರುತ್ಯ ರೈಲ್ವೆ ಇಲಾಖೆಯವರು 9.50 ಮೀ. ಅಗಲ 2.50 ಮೀ. ಎತ್ತರವುಳ್ಳ ಒಂದೇ ಬಾಕ್ಸ್‌ನ ನಿರ್ಮಾಣ ಮತ್ತು ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ರೂ.5,30,54,879-00 ಅಂದಾಜನ್ನು ಸಲ್ಲಿಸಿ, ಪಾಲಿಕೆಯ ಅನುಮೋದನೆಯನ್ನು ಕೋರಿರುತ್ತಾರೆ.

ಈ ಕಾಮಗಾರಿಯ ಒಟ್ಟು ಅಂದಾಜು ಮೊತ್ತವನ್ನು ರೂ.12,20,00,000,00 ಗಳಿಗೆ ತಯಾರಿಸಿದ್ದು, ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಯೋಜನೆಯಿಂದಾಗಿ ವಿಜಯನಗರದ ಪ್ರದೇಶದಿಂದ ಮೈಸೂರು ರಸ್ತೆ ಕಡೆಗೆ ಪ್ರಯಾಣಿಸುವ ವಾಹನಗಳಿಗೆ ಅಡತಡೆಯಿಲ್ಲದೆ ಓಡಾಡಬಹುದಾಗಿದ್ದು, ವಾಹನ ಸಂಚಾರ ಸುಗಮವಾಗುತ್ತದೆ. ಎರಡೂ ಪಥ ಹಾಗೂ ಎರಡೂ ಬದಿಯಲ್ಲಿ ಪಾದಚಾರಿ ರಸ್ತೆಯುಳ್ಳ ಒಂದು ಬಾಕ್ಸ್ ನಿರ್ಮಾಣ, ನಾಗರೀಕ ಸೌಲಭ್ಯ ಸ್ಥಳಾಂತರ, ವಿದ್ಯುಧೀಕರಣ, ಭೂಸ್ವಾಧೀನ ವೆಚ್ಚಗಳನ್ನೊಳಗೊಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಸೌಕರ್ಯದಿಂದಾಗಿ ಪರಿಸರ ಮಾಲಿನ್ಯ ವಾಹನಗಳ ನಿರ್ವಹಣೆಯ ವೆಚ್ಚ, ಪೆಟ್ರೋಲಿಯಂ ಪ್ರಾಡಕ್ಟ್‌ಗಳ ಉಪಯೋಗ ಇತ್ಯಾದಿಗಳನ್ನು ಕಡಿಮೆ ಮಾಡಬಹುದಾಗಿದೆ.

ಕೆಳಸೇತುವೆ ಬಾಕ್ಸ್ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣವನ್ನು ರೈಲ್ವೆ ಇಲಾಖೆಯ ನಿಯಮಗಳಿಗನುಗುಣವಾಗಿ ತಯಾರಿಸಿರುವ ಅಂದಾಜು ಪಟ್ಟಿ ಮೊತ್ತ ರೂ.5,30,54,879.00 ಗಳಿಗೆ ಪಾಲಿಕೆಯ ಅನುಮೋದನೆಯನ್ನು ದೃಢೀಕರಿಸುವ ಸಲುವಾಗಿ ಮೇಲು ರುಜು ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ.

ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ, ಕೆಳಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಅವಶ್ಯಕವಾಗಿರುವ ಭೂಸ್ವಾಧೀನಕ್ಕೆ ತಗಲುವ ವೆಚ್ಚಕ್ಕೆ ಅವಕಾಶ ಕಲ್ಪಿಸಿಕೊಂಡಿರುವುದಿಲ್ಲ. ಭೂಮಿಯನ್ನು ಹಾಗೂ ಕಟ್ಟಡಗಳನ್ನು ಮೌಲ್ಯಮಾಪನ ಮಾಡಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಪಾಲಿಕೆ ವತಿಯಿಂದ ವಹಿಸಬೇಕಾಗಿರುವುದರಿಂದ ರೂ.4.75 ಕೋಟಿಗಳ ಅನುದಾನವನ್ನು ಅಂದಾಜು ಪಟ್ಟಿಯಲ್ಲಿ ಪ್ರಾರಂಭಿಕ ಠೇವಣಿಯಾಗಿ ಸೇರಿಸಿಕೊಳ್ಳಲಾಗಿರುತ್ತದೆ. ಬೆಂಗಳೂರು ಜಲಮಂಡಳಿಯ ಕೊಳವೆ ಸಾಲುಗಳ ಸ್ಥಳಾಂತರ, ಬೆಸ್ಕಾಂ ಸಾಲುಗಳ ಸ್ಥಳಾಂತರ ಇತರೆ ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕಾಗಿ ರೂ.2.00 ಕೋಟಿಗಳ ಅನುದಾನವನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ ಆಯವ್ಯಯಗಳಲ್ಲಿ ನೀಡಿರುವ ಮೊತ್ತದ ವರದಿ ಕೆಳಗಿನಂತಿದೆ;

2009-10 – ರೂ. 75.00 ಲಕ್ಷಗಳು
2010-11 – ನೀಡಿರುವುದಿಲ್ಲ
2011-12 – ರೂ. 756.00 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

. . . . .2

ಸದರಿ ಯೋಜನೆಗೆ ಸಂಬಂಧಿಸಿದ ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ.12.20.00.000.00 ಗಳಿಗೆ ತಯಾರಿಸಿದ್ದು, ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ;

| | | |
|---|---|---|
| ಭಾಗ-1 | ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಬಾಕ್ಸ್ ಮತ್ತು ಅಪ್ರೋಚ್ ರಸ್ತೆ ಕಾಮಗಾರಿಯ ಅಂದಾಜು ಮೊತ್ತ | ರೂ. 5,30,54,879.00 |
| ಭಾಗ-2 | ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಮೊತ್ತ | ರೂ. 4,75,00,000.00 |
| | ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ | ರೂ. 2,00,00,000,00 |
| | ವಿದ್ಯುದೀಕರಣ | ರೂ. 10,00,000,00 |
| | ರೌಂಡಿಂಗ್ ಚಾರ್ಜಸ್ | ರೂ. 4,45,121,00 |
| | **ಒಟ್ಟು ಮೊತ್ತ ರೂ.** | **ರೂ.12,20,00,000.00** |

ಮೇಲ್ಕಂಡ ಅಂಶಗಳ ಮೇರೆಗೆ, ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಲಾಗಿದೆ;

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ. 12,20,00,000,00 ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ನೈರುತ್ಯ ರೈಲ್ವೆ ಇಲಾಖೆಗೆ ಠೇವಣಿ ಮಾಡಬೇಕಾದ ಪಾಲಿಕೆ ಭಾಗವಾದ ಮೊತ್ತ ರೂ.2,86,67,142.00 ಗಳಿಗೆ ಆಡಳಿತಾತ್ಮಕ ಅನುಮೋದನೆ
3. ಪಾಲಿಕೆ ವತಿಯಿಂದ ನಿರ್ವಹಿಸಬಹುದಾದ ಅಂದಾಜು ಪಟ್ಟಿಯ ಮೊತ್ತ ರೂ.6,89,45,121,00 ಗಳಿಗೆ ಆಡಳಿತಾತ್ಮಕ ಅನುಮೋದನೆ.
4. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.
5. ರೈಲ್ವೆ ಇಲಾಖೆಗೆ ಪಾಲಿಕೆಯಿಂದ ಈ ಕಾಮಗಾರಿಯ ಪ್ರಗತಿಯ ಆಧಾರದ ಮೇಲೆ ಆಗಿಂದಾಗ್ಗೆ ಠೇವಣಿ ಇಡಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯವನ್ನು ಒಪ್ಪುವುದು".

. . . . .3

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

## ದಿನಾಂಕ:07-09-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 46 (164)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಅದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ. ನಿಂದ 800 ಚ.ಕಿ.ಮೀ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷದಷ್ಟಿದ್ದು, 2011 ರ ಅಂತ್ಯಕ್ಕೆ ಒಂದು ಕೋಟಿ ಮೀರುವ ನಿರೀಕ್ಷೆ ಇದೆ. ಬೆಂಗಳೂರು ನಗರವು ಕಳೆದ 5 ದಶಕಗಳಲ್ಲಿ ನಿರಂತರವಾಗಿ ಬೆಳೆಯುತ್ತಿದ್ದು, ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ನಗರದ ವಾಹನ ಸಂಖ್ಯೆಯು ಕೂಡ ಸತತವಾಗಿ ಹೆಚ್ಚುತ್ತಿದ್ದು, 1980 ರಲ್ಲಿ ಸುಮಾರು 17 ಲಕ್ಷದಷ್ಟಿದ್ದ ಸಂಖ್ಯೆಯು, 2011 ರಲ್ಲಿ ಸುಮಾರು 40.00 ಲಕ್ಷಕ್ಕೆ ಬೆಳೆದಿರುತ್ತದೆ. ಈ ವಾಹನಗಳ ಪೈಕಿ ಶೇ.72 ರಷ್ಟು ವಾಹನಗಳು ದ್ವಿಚಕ್ರವಾಹನಗಳಾಗಿದ್ದು, ಇತ್ತೀಚೆಗೆ ಕಾರುಗಳ ಸಂಖ್ಯೆಯು ಸಹ ಅತಿ ವೇಗವಾಗಿ ಬೆಳೆಯುತ್ತಿದೆ.

ಬೆಂಗಳೂರು ನಗರದಲ್ಲಿನ ಪ್ರಮುಖ ಕಾರಿಡಾರ್‌ಗಳಲ್ಲಿ ಸುಮಾರು 600ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಿದ್ದು, ಇವುಗಳಲ್ಲಿ ಸುಮಾರು 200 ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿದ್ದು, ವಾಹನ ವೇಗದ ಮಿತಿ ಪ್ರತಿ ಗಂಟೆಗೆ 10.00 ಕಿ.ಮೀ.ಗಿಂತ ಕಡಿಮೆಯಾಗಿದೆ. ಇಂತಹ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಲು, ಸಿಗ್ನಲ್ ರಹಿತ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿದರೆ ವಾಹನ ಸಂಚಾರದ ವೇಗ ಹೆಚ್ಚಿಸಬಹುದಲ್ಲದೆ ಸುರಕ್ಷಿತ ಸಂಚಾರವನ್ನು ಕಲ್ಪಿಸಿದಂತಾಗುತ್ತದೆ. ಈ ದೃಷ್ಟಿಯಲ್ಲಿ ಹಂತ ಹಂತವಾಗಿ ಸುಮಾರು 12 ಪ್ರಮುಖ ಕಾರಿಡಾರ್‌ಗಳನ್ನು ಜಂಕ್ಷನ್ ಮುಕ್ತ ಕಾರಿಡಾರ್‌ಗಳನ್ನಾಗಿ ಮಾಡಲು ಒಂದು ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪಿಸಿರುತ್ತದೆ. ಈ 12 ಪ್ರಮುಖ ಕಾರಿಡಾರ್‌ಗಳ ಪೈಕಿ ಪ್ರಥಮ ಹಂತದಲ್ಲಿ 7 ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತಗೊಳಿಸಲು ಉದ್ದೇಶಿಸಿದ್ದು, ಅವುಗಳನ್ನು 7 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗಿತ್ತು.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಈ ಪೈಕಿ ಹೊಸದಾಗಿ 5 ವಲಯಗಳನ್ನು ರಚಿಸಲಾಗಿರುತ್ತದೆ. ಹೊಸದಾಗಿ ಸೇರಿಸಿರುವ ಈ 5 ವಲಯಗಳಲ್ಲಿ ಪ್ರಮುಖವಾಗಿ ಬರುವ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ಗುರುತಿಸಿ, ಅವುಗಳನ್ನು ಆರ್.ಎಂ.ಪಿ-2015ರ ಪ್ರಕಾರ ಅಗಲೀಕರಣಗೊಳಿಸಲು ಹಾಗೂ ಅವುಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿ, ಈ 5 ವಲಯಗಳ ವ್ಯಾಪ್ತಿಯಲ್ಲಿ ಬರುವ ಸುಮಾರು-512 ಕಿ.ಮೀ ಉದ್ದದ ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳ ಜಾಲವು ಪ್ರಮುಖವಾಗಿ ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳನ್ನು ಹಾಗೂ ನಗರದ ಕೇಂದ್ರ ಪ್ರದೇಶಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳಾಗಿದ್ದು, ಇವುಗಳನ್ನು ಪ್ರಾರಂಭದ ಹಂತದಲ್ಲೇ ಅಭಿವೃದ್ಧಿಪಡಿಸುವುದರಿಂದ ರಸ್ತೆಗಳ ಮೇಲೆ ಇರುವ ವಾಹನಗಳ ಒತ್ತಡವನ್ನು ಕಡಿಮೆಗೊಳಿಸಬಹುದೆಂದು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹೊಸ 5 ವಲಯಗಳಲ್ಲಿ ಒಟ್ಟು 512 ಕಿ.ಮೀ ಉದ್ದದ ರಸ್ತೆಯನ್ನು ಆರ್.ಎಂ.ಪಿ-2015 ರಂತೆ ಅಗಲೀಕರಣಗೊಳಿಸಿ, ಸಬಲೀಕರಣಗೊಳಿಸಲು ಒಂದು ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ನಿಯಮಾನುಸಾರ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗಿತ್ತು.

. . . . .2

ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆಗಳಂತೆ Standard bidding document ಪ್ರಕಾರ ಮೇಲ್ಕಂಡ ಎಲ್ಲಾ ಯೋಜನೆಗಳ ಅಂದಾಜು ಸುಮಾರು ರೂ.10.00 ಕೋಟಿಗಳು ಮೀರಿದ್ದು, ಗುತ್ತಿಗೆದಾರರ ತಾಂತ್ರಿಕ, ಆರ್ಥಿಕ ಹಾಗೂ ಉಪಕರಣಗಳ capacity ಯನ್ನು ನಿಗಧಿಪಡಿಸಲು ಗುತ್ತಿಗೆದಾರರ ಪೂರ್ವಾರ್ಹತೆಯನ್ನು ನಿಗಧಿಪಡಿಸುವುದು ಅತ್ಯವಶ್ಯಕವೆಂದು ಮನಗಂಡು, ಸದರಿ ಯೋಜನೆಯನ್ನು ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಲು ಹಾಗೂ ಗುಣಾತ್ಮಕ ಅಂಶಗಳನ್ನು ನಿರ್ವಹಿಸಲು ಅರ್ಹ ಗುತ್ತಿಗೆದಾರರನ್ನು ನಿಯೋಜಿಸುವ ಸಲುವಾಗಿ ಪೂರ್ವ ಅರ್ಹತೆಯನ್ನು ನಿರ್ಧರಿಸಲು ಟೆಂಡರ್‌ನ್ನು ದಿನಾಂಕ:23-09-2009 ರಂತೆ e- procurement ಮುಖಾಂತರ ಪ್ರಕಟಣೆ ಹೊರಡಿಸಲಾಗಿತ್ತು.

ಈ ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದ ಸಂದರ್ಭದಲ್ಲಿ ವಿಶೇಷ ಅರ್ಹತೆಯುಳ್ಳ ಗುತ್ತಿಗೆದಾರರನ್ನು ಆಯ್ಕೆ ಮಾಡಬೇಕಾಗಿದ್ದು, ಗುತ್ತಿಗೆದಾರರ/ಸಂಸ್ಥೆಗಳ ಹಣಕಾಸು ವಹಿವಾಟು, ತಾಂತ್ರಿಕ ಅರ್ಹತೆ, ತಾಂತ್ರಿಕ ಸಿಬ್ಬಂದಿ ವರ್ಗದ ಅರ್ಹತೆ ಮತ್ತು ಪೂರ್ವ ಅನುಭವಗಳ ಬಗ್ಗೆ ಟೆಂಡರ್ ಮೂಲಕ ಮಾಹಿತಿಯನ್ನು ಪಡೆದು, ಮೌಲ್ಯ ನಿರ್ಧಾರಣೆ ಮಾಡಿ, ಪೂರ್ವ ಅರ್ಹತೆಯನ್ನು ನಿರ್ಧರಿಸಿ ಗುತ್ತಿಗೆದಾರರುಗಳ ಯಾದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ. ಗುತ್ತಿದಾರರ ಪೂರ್ವ ಅರ್ಹತೆಯನ್ನು, 3- ಸೆಕ್ಷನ್‌ಗಳಲ್ಲಿ 38 ಪ್ಯಾಕೇಜ್‌ಗಳಿಗೆ ಒಳಪಡಿಸಿ, ಒಟ್ಟು 19 ಪ್ರಮುಖ ಏಜೆನ್ಸಿಗಳನ್ನು ಅವರವರ ಆರ್ಥಿಕ ಹಾಗೂ ತಾಂತ್ರಿಕ ಅರ್ಹತೆ ಅನುಗುಣವಾಗಿ ಪೂರ್ವಾರ್ಹತೆಯನ್ನು ನಿಗಧಿಪಡಿಸಿ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗಿರುತ್ತದೆ.

ದಿನಾಂಕ:07-12-2009 ರ ಕರ್ನಾಟಕ ಸರ್ಕಾರದ ನಡವಳಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳನ್ನು ಉನ್ನತಮಟ್ಟದ ರಸ್ತೆಗಳನ್ನಾಗಿ ಪರಿವರ್ತಿಸಲು ಮತ್ತು ಸಿಗ್ನಲ್ ರಹಿತ ಕಾರಿಡಾರ್ ಆಗಿ ಪರಿವರ್ತಿಸುವ ಕಾಮಗಾರಿಗೆ ತಯಾರಿಸಿರುವ ಸಮಗ್ರ ಯೋಜನಾ ವರದಿಗಳ ಒಟ್ಟು 12 ಕಾಮಗಾರಿಗಳಿಗೆ, ಒಟ್ಟು ಯೋಜನೆಗಳ ವೆಚ್ಚ ರೂ.3248 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಮೇಲ್ಕಂಡ 12 ಯೋಜನೆಗಳನ್ನು ನಿರ್ವಹಿಸಲು, ಪೂರ್ವ ಅರ್ಹತೆ ನಿರ್ಧರಿಸಿದ ಏಜೆನ್ಸಿಗಳ ಮುಖೇನ ಕೆಲಸವನ್ನು ಕೈಗೆತ್ತಿಕೊಳ್ಳಲು, ಒಟ್ಟು 19 ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ, 10 ವರ್ಷಗಳ ದೋಷದಾಯತ್ವ ಅವಧಿ ಒಳಗೊಂಡಂತೆ ಟೆಂಡರ್ ಪ್ರಕಟಣೆಯನ್ನು ದಿ:07-12-2009 ರಂತೆ e-procurement ಅಡಿಯಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಪೂರ್ವಾರ್ಹತೆಯಾಗಿರುವ ಏಜೆನ್ಸಿಗಳು ಮಾತ್ರ ಭಾಗವಹಿಸಬಹುದಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆಯು e-procurement portal ನಲ್ಲಿ ಪ್ರಕಟಿತವಾಗಿದ್ದು, State Tender Bulletin ನಲ್ಲಿಯೂ ಸಹ ಪ್ರಕಟಿತವಾಗಿರುತ್ತದೆ. ಸದರಿ ಕಾಮಗಾರಿಗಳಿಗೆ Work Code ಹಾಗೂ ತಾಂತ್ರಿಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ನಿರೀಕ್ಷಿಸಿ ಟೆಂಡರ್ ಅನ್ನು ಕರೆಯಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ಪೂರ್ವಾರ್ಹತೆಗೊಂಡ ಸಂಸ್ಥೆಗಳಿಂದ ಆರ್ಥಿಕ ಬಿಡ್ಡುಗಳನ್ನು ಆಹ್ವಾನಿಸಲಾಗಿದ್ದು, ಒಟ್ಟು 19 ಪ್ಯಾಕೇಜ್‌ಗಳಿಗೆ ಭಾಗವಹಿಸಿದ ಗುತ್ತಿಗೆದಾರರು ಸಲ್ಲಿಸಿದ ಆರ್ಥಿಕ ಬಿಡ್ಡುಗಳನ್ನು ದಿ:12.01.2010 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

. . . . .3

| ಕ್ರ ಸಂ | ಕಾಮಗಾರಿಯ ಹೆಸರು | ಪ್ಯಾಕೇಜ್ ಮತ್ತು ಇಂಡೆಂಟ್ ಸಂ. | ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ ತಿಂಗಳುಗಳಲ್ಲಿ | ಟೆಂಡರ್ ಗಿಟ್ಟ ಮೊತ್ತ ರೂ. ಕೋಟಿಗಳಲ್ಲಿ | ಭಾಗವಹಿಸಿದ ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿದ ಒಟ್ಟು ಮೊತ್ತ ರೂ. ಕೋಟಿಗಳಲ್ಲಿ | 09–10ನೇ ಸಾಲಿನ ದರಪಟ್ಟಿ ಯನ್ವಯ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಹೆಚ್ಚುವರಿ | ಷರಾ |
|---|---|---|---|---|---|---|---|---|
| **1** | **2** | **3** | **4** | **5** | **7** | **8** | **9** | **10** |
| 1 | ಬೊಮ್ಮನಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ) ಯನ್ನು ಒಳಗೊಂಡ ಕಾಮಗಾರಿ | S-1, P-1, W.I-862 | 24 | 181.02 | M/s.SPML. | **252.96** | **39.74** | **1st Lowest** |
| | | | | | M/s.GVR Infratech | 258.58 | 42.85 | 3rd Lowest |
| | | | | | M/s. Ranjit-K.Babu Raju | 256.55 | 41.72 | 2nd Lowest |
| | | | | | M/s. Ramky Infrastruture | 264.39 | 46.06 | 4th Lowest |
| 2 | ಬೊಮ್ಮನಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-2 W.I-855 | 24 | 188.33 | M/s. Gayatri projects Ltd | **263.16** | **39.7** | **1st Lowest** |
| | | | | | M/s. GKC projects ltd | 281.07 | 49.2 | 2nd Lowest |
| | | | | | M/s. Ramky Infrastruture | 281.28 | 49.4 | 3rd Lowest |

. . . . .4

| | | | | | | | | |
|---|---|---|---|---|---|---|---|---|
| 3 | ಬೊಮ್ಮನಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-3 W.I-859 | 24 | 191.39 | M/s. Gayatri projects Ltd | 300.97 | 57.25 | 3rd Lowest |
| | | | | | M/s.GVR Infratech | 292.78 | 52.98 | 2nd Lowest |
| | | | | | M/s. GKC projects ltd | **264.79** | **38.35** | **1st Lowest** |
| 4 | ಬೊಮ್ಮನಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-4 W.I-860 | 24 | 174.94 | M/s. Gayatri projects Ltd | 254.55 | 45.51 | 2nd Lowest |
| | | | | | M/s. Ranjit-K.Babu raju | 256.51 | 46.63 | 3rd Lowest |
| | | | | | M/s. Ramky Infrastruture | **243.09** | **38.96** | **1st Lowest** |
| 5 | ಬೊಮ್ಮನಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ) ಯನ್ನು ಒಳಗೊಂಡ ಕಾಮಗಾರಿ | S-1, P-5 W.I-861 | 24 | 164.74 | M/s.GVR Infratech | **228.6** | **38.76** | **1st Lowest** |
| | | | | | M/s. Ranjit-K.Babu raju | 233.55 | 41.77 | 2nd Lowest |
| | | | | | M/s. GKC projects ltd | 235.19 | 42.76 | 3rd Lowest |

. . . . .5

| | | | | | | | | |
|---|---|---|---|---|---|---|---|---|
| 6 | ರಾಜರಾಜೇಶ್ವರಿ ನಗರ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-6 W.I-888 | 24 | 217.85 | M/s.BSCPL Infrastructure Ltd | 345.57 | 58.63 | 3rd Lowest |
| | | | | | M/s.Unity Infra Projects | 330.61 | 51.76 | 2nd Lowest |
| | | | | | M/s. Nagarjuna Construction Co. | **305.01** | **40.01** | **1st Lowest** |
| | | | | | M/s. SEW Infrastructure Ltd | 345.74 | 58.71 | 4th Lowest |
| 7 | ರಾಜರಾಜೇಶ್ವರಿ ನಗರ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-7 W.I-876 | 24 | 167.94 | M/s. NAPC ltd | 256.12 | 52.51 | 3rd Lowest |
| | | | | | M/s.KNR Constructions | 253.93 | 51.20 | 2nd Lowest |
| | | | | | M/s. RNS Infrastructure | **235.12** | **40.00** | **1st Lowest** |
| 8 | ದಾಸರಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-8, W.I-702 | 24 | 234.66 | M/s. NAPC ltd | **324.00** | **38.07** | **1st Lowest** |
| | | | | | M/s.KNR Constructions | 345.88 | 47.40 | 3rd Lowest |
| | | | | | M/s. RNS Infrastructure | 344.64 | 46.87 | 2nd Lowest |
| | | | | | M/s KMC Ltd | 365.57 | 55.79 | 4th Lowest |

. . . . .6

| | | | | | | | | |
|---|---|---|---|---|---|---|---|---|
| 9 | ದಾಸರಹಳ್ಳಿ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-9 W.I-694 | 24 | 230.84 | M/s. NAPC ltd | 348.15 | 50.82 | 3rd Lowest |
| | | | | | M/s.KNR Constructions | 342.2 | 48.24 | 2nd Lowest |
| | | | | | M/s KMC ltd | **322.84** | **39.85** | **1st Lowest** |
| 10 | ಬ್ಯಾಟರಾಯನಪುರ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-10 W.I-936 | 24 | 259.02 | M/s.KNR Constructions | **357.42** | **37.99** | **1st Lowest** |
| | | | | | M/s KMC Ltd | 383.28 | 47.97 | 2nd Lowest |
| | | | | | M/s. RNS Infrastructure | 388.63 | 50.04 | 3rd Lowest |
| 11 | ಮಹದೇವಪುರ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-11 W.I-696 | 24 | 169.54 | M/s. Nagarjuna Construction Co. | 248.66 | 46.67 | 3rd Lowest |
| | | | | | M/s. IVRCL | 239.81 | 41.45 | 2nd Lowest |
| | | | | | M/s. BSR Infra –tech BSCPL Ltd (JV) | **233.99** | **38.01** | **1st Lowest** |

| | | | | | | | | |
|---|---|---|---|---|---|---|---|---|
| 12 | ಮಹದೇವಪುರ ವಲಯದ ಆಯ್ದ ಆರ್ಟೀರಿಯಲ್/ಸಬ್ ಆರ್ಟೀರಿಯಲ್ ರಸ್ತೆಗಳ ಅಗಲೀಕರಣ, ಸಬಲೀಕರಣ, ಡಾಂಬರೀಕರಣ ಹಾಗೂ ವಿದ್ಯುತೀಕರಣ ರಸ್ತೆಗಳನ್ನು 10 ವರ್ಷಗಳ ನಿರ್ವಹಣಾ (ದೋಷದಾಯಿತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ | S-1, P-12 W.I-693 | 24 | 227.76 | M/s. Nagarjuna Construction Co. | 329.08 | 44.49 | 2nd Lowest |
| | | | | | M/s. SEW Infrastructure | **315.63** | **38.58** | **1st Lowest** |
| 13 | ಡಾ// ರಾಜ್‌ಕುಮಾರ್ ರಸ್ತೆಯಿಂದ ಯಶವಂತಪುರ ಸರ್ಕಲ್‌ನಿಂದ ಓಕಳಿಪುರಂ ರಸ್ತೆಯವರೆಗೆ ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯಿತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ1) | S-2, P-1, W.I-873 | 18 | 60.69 | M/s. SCL Infratech Ltd | **84.9** | **39.89** | **1st Lowest** |
| | | | | | M/s. SEW Infrastructure | 101.02 | 66.45 | 2nd Lowest |
| 14 | ಮಾಗಡಿ ರಸ್ತೆಯಿಂದ ಕಾರ್ಡ್ ರಸ್ತೆಯ ಹೊರವರ್ತುಲ ರಸ್ತೆಯವರೆಗೆ ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯಿತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ(ಸಿ3) | S-2, P-2 W.I-867 | 12 | 65.37 | M/s.SPML ltd | 101.04 | 54.57 | 3rd Lowest |
| | | | | | M/s. Unity Infra Projects | 99.43 | 52.10 | 2nd Lowest |
| | | | | | M/s. Ranjit-K.Babu raju | **90.77** | **38.86** | **1st Lowest** |

. . . . .8

| | | | | | | | | |
|---|---|---|---|---|---|---|---|---|
| 15 | ಹೊರ ವರ್ತುಲ ರಸ್ತೆಯಿಂದ ಮೈಸೂರು ರಸ್ತೆಯ ಸೆಂಟ್ರಲ್ ಸಿಲ್ಕ್ ಬೋರ್ಡ್ ವರೆಗೆ ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ4) | S-2, P-3 W.I-866 | 12 | 150.43 | M/s. IVRCL | 221.05 | 46.95 | 2nd Lowest |
| | | | | | M/s. Unity Infra Projects | **215.21** | **43.06** | **1st Lowest** |
| | | | | | M/s. SEW Infrastructure | 227.86 | 51.47 | 3rd Lowest |
| 16 | ಹೊಸೂರು ರಸ್ತೆಯಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ವೆಲ್ಲಾರ ಜಂಕ್ಷನ್‌ವರೆಗಿನ ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ5) | S-2, P-4 W.I-691 | 24 | 35.96 | M/s. Nagarjuna Construction Co | 58.49 | 62.65 | 2nd Lowest |
| | | | | | M/s. IVRCL | 59.54 | 65.57 | 3rd Lowest |
| | | | | | M/s.BSR Infratech | **57.33** | **59.43** | **1st Lowest** |
| 17 | ಬನ್ನೇರು ಘಟ್ಟ ರಸ್ತೆಯಿಂದ IIMB ನಿಂದ ವಿಲ್‌ಸನ್ ಗಾರ್ಡನ್ ವರೆಗಿನ ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ6) | S2, P-5 W.I-872 | 24 | 88.3 | M/s. SCL Infratech | **124.57** | **41.08** | **Single lowest bidder** |

. . . . .9

| | | | | | | | | |
|---|---|---|---|---|---|---|---|---|
| 18 | ಏರ್‌ಪೋರ್ಟ್ ರಸ್ತೆಯಿಂದ ವೆಲ್ಲಾರ ಜಂಕ್ಷನ್‌ನಿಂದ ವೈಟ್ ಫೀಲ್ಡ್ ವರೆಗಿನ (ಕುಂದಲ ಹಳ್ಳಿ ಮಾರ್ಗವಾಗಿ) ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ7) | S-2, P-6 W.I-667 | 24 | 112.49 | M/s. IVRCL | **164.63** | **46.35** | **1st Lowest** |
| | | | | | M/s. Unity Infra Projects | 168.42 | 49.72 | 2nd Lowest |
| 19 | ಮೇಖ್ರಿ ವೃತ್ತದಿಂದ ಓಫ್ ಫಾರ್ಂ ವರೆಗಿನ (ಹಳೇ ಮದ್ರಾಸ್ ರಸ್ತೆ ಮಾರ್ಗವಾಗಿ) ಉದ್ದೇಶಿತ ಸಿಗ್ನಲ್ ಮುಕ್ತ ಕಾರಿಡಾರ್‌ನ್ನು ನಿರ್ವಹಿಸುವುದು ಹಾಗೂ 10 ವರ್ಷಗಳ ನಿರ್ವಹಣಾ (ದೋಷದಾಯತ್ವ ಅವಧಿ)ಯನ್ನು ಒಳಗೊಂಡ ಕಾಮಗಾರಿ (ಸಿ11) | S-2, P-8 W.I-702 | 30 | 221.82 | M/s. Nagrajuna Construction Co. | **318.29** | **43.49** | **1st Lowest** |
| | | | | | M/s. BSCPL Infrastructure Ltd. | 323.35 | 45.77 | 2nd Lowest |

ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ : UDD/411/MNY/2009 ದಿ:13/01/2010 ರನ್ವಯ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು Project steering Committee ಯನ್ನು ಹಾಗೂ ಸರ್ಕಾರಿ ಆದೇಶ ಸಂಖ್ಯೆ:UDD/411/MNY/2009 ದಿ:08/12/2009 ರನ್ವಯ ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು Empowered Committee ಯನ್ನು ಸಹ ರಚಿಸಿ ಆದೇಶ ಹೊರಡಿಸಲಾಗಿದೆ. ಇದಲ್ಲದೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವಿಶೇಷ ಆಯುಕ್ತರ ಅಧ್ಯಕ್ಷತೆಯಲ್ಲಿ ಟೆಂಡರ್ Evaluation committee ಯನ್ನು ಸಹ ರಚಿಸಿ ಪಾಲಿಕೆಯ ಆಯುಕ್ತರು ಆದೇಶ ಹೊರಡಿಸಿರುತ್ತಾರೆ.

ಈ ಮಧ್ಯೆ ಶ್ರೀ.ಪಿ.ಆರ್. ರಮೇಶ್ ಹಾಗೂ ಇತರರು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಪೂರ್ವಾರ್ಹತೆಗೆ ನಿಗಧಿಪಡಿಸಿರುವ ಮಾನದಂಡಗಳ ಔಚಿತ್ಯವನ್ನು ಪ್ರಶ್ನಿಸಿ 35639-641/2010 ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿ ರಿಟ್‌ಪಿಟಿಷನ್ ಸಲ್ಲಿಸಿ, ಟೆಂಡರ್ ಪ್ರಕ್ರಿಯೆಯನ್ನು ಯಾವುದೇ ಕಾರಣಕ್ಕೂ ಮುಂದುವರಿಸಬಾರದೆಂದು ಕೋರಿಕೆ ಸಲ್ಲಿಸಿರುತ್ತಾರೆ. ಈ ರಿಟ್

. . . . .10

ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಂಡ ಮಾನ್ಯ ಉಚ್ಚನ್ಯಾಯಾಲಯವು ದಿ:10.02.2010 ರಂದು ತಾತ್ಕಾಲಿಕ ಮಧ್ಯಂತರ ತಡೆಯಾಜ್ಞೆಯನ್ನು ನೀಡಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಮಾನ್ಯ ಉಚ್ಚನ್ಯಾಯಾಲಯದ ಮುಂದುವರೆದ ಆದೇಶಗಳನ್ವಯ ದಿ:11.03.2011 ರವರೆಗೆ ತಡೆಹಿಡಿಯಲಾಗಿದೆ. ಅಂತಿಮವಾಗಿ ದಿ:11.03.2011 ರಂದು ಮಾನ್ಯ ಉಚ್ಚನ್ಯಾಯಾಲಯವು ಸದರಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ವಜಾ ಮಾಡಿರುತ್ತದೆ.

ಈ ಹಿನ್ನೆಲೆಯಲ್ಲಿ ಟೆಂಡರ್ ಬಿಡ್ಡುದಾರರಿಗೆ **ದಿ:14.03.2011** ರಂದು ಪತ್ರ ಬರೆದು, ಸದರಿ ಟೆಂಡರ್ validity ಯನ್ನು ವಿಸ್ತರಿಸುವ ಬಗ್ಗೆ ಅವರ ಅಭಿಪ್ರಾಯ ಕೋರಲಾಗಿ, ಸದರಿ ಬಿಡ್ಡುದಾರರು ಟೆಂಡರ್ validity ಯನ್ನು 90 ದಿನಗಳ ಕಾಲ ವಿಸ್ತರಿಸಲು ಒಪ್ಪಿಗೆ ಸೂಚಿಸಿ ಪತ್ರ ನೀಡಿರುತ್ತಾರೆ.

ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ, ಸುಮಾರು ಒಂದು ವರ್ಷದಿಂದ ಬಾಕಿ ಇರುವ ಟೆಂಡರ್‌ಗಳ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ, ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವ ನಿಟ್ಟಿನಲ್ಲಿ, ಒದಗಿಬರಬಹುದಾದ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವ ನಿಟ್ಟಿನಲ್ಲಿ, ವಿವರವಾದ ಒಂದು ವಿಶ್ಲೇಷಣೆಯನ್ನು ನಡೆಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಹೊಸ 5 ವಲಯಗಳಲ್ಲಿ ಆಯ್ದ ಒಟ್ಟು 512.00 ಕಿ.ಮೀ. ಉದ್ದದ ರಸ್ತೆಗಳನ್ನು ಅಗಲೀಕರಣಗೊಳಿಸಬೇಕಾದ ಸಂದರ್ಭದಲ್ಲಿ ಹಾಗೂ ಪ್ರಮುಖ 7 ಕಾರಿಡಾರ್‌ಗಳಲ್ಲಿ ಮೇಲ್ಸೇತುವೆ ಮತ್ತು ಅಂಡರ್ ಪಾಸ್‌ಗಳನ್ನು ನಿರ್ಮಾಣ ಮಾಡಿ ಸಿಗ್ನಲ್ ಮುಕ್ತಗೊಳಿಸಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸುಮಾರು – 41,94,469.00 ಚ.ಮೀ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಒಂದು ವರ್ಷದ ಹಿಂದೆ ಯೋಜನಾ ವರದಿಗಳನ್ನು ತಯಾರಿಸಿದ ಸಂದರ್ಭದಲ್ಲಿ TDR ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿತ್ತು. ಆದರೆ, ಕಳೆದ ಒಂದು ವರ್ಷದಿಂದ ಈಚೆಗೆ ಸಾರ್ವಜನಿಕರು TDR ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿರುವ ಅಂಶವನ್ನು ಗಮನಿಸಬೇಕಾಗಿದೆ, ಹಾಗೂ ಖಾಸಗಿ ಸ್ವತ್ತುಗಳ ಭೂಸ್ವಾಧೀನಕ್ಕೆ ಸಾರ್ವಜನಿಕರು ನಗದು ರೂಪದಲ್ಲಿ ಭೂ ಪರಿಹಾರವನ್ನು ಕೋರುತ್ತಿರುವುದರಿಂದ ಈ ಬಾಬ್ತಿನಲ್ಲಿ ಸುಮಾರು ರೂ.6000.00 ಕೋಟಿಗಳಷ್ಟು ಮೊತ್ತವನ್ನು ಪಾಲಿಕೆ ಭೂಸ್ವಾಧೀನಕ್ಕೆ ಭರಿಸಬೇಕಾದ ಪ್ರಸಂಗ ಒದಗಿ ಬಂದಿರುತ್ತದೆ. ಪಾಲಿಕೆಯು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಹಿನ್ನೆಲೆಯಲ್ಲಿ, ಸದರಿ ಹಣ ಪಾವತಿಸುವ ಮುಖಾಂತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅತ್ಯಂತ ಕ್ಲಿಷ್ಟಕರವಾದುದೆಂದು ಪರಿಗಣಿಸಬೇಕಿರುತ್ತದೆ ಹಾಗೂ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕಾಗುತ್ತದೆ.

- ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಯೋಜನಾ ಅವಧಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾದರೆ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನಕ್ಕೆ ಆಗಿರುವ ಅಡಚಣೆ ಬಗ್ಗೆ ಹಾಗೂ ಕಾಲ ವಿಳಂಬದ ಬಗ್ಗೆ ಕಾನೂನುಬದ್ಧವಾಗಿ ಹೆಚ್ಚಿನ ಮೊತ್ತವನ್ನು ಕೋರುವ ಸಾಧ್ಯತೆಯಿರುತ್ತದೆ. ಇಂತಹ ನಿಯಮವನ್ನು ಟೆಂಡರ್ ದಾಖಲೆಯಲ್ಲಿ ಅಡಕಗೊಳಿಸಲಾಗಿದೆ.
- ಟೆಂಡರ್‌ನಲ್ಲಿ ಗುತ್ತಿಗೆದಾರರು ಪ್ರತಿ ಕಾಮಗಾರಿಗೆ ಸರಾಸರಿ ಶೇ.37 ರಿಂದ 59.43 ರಷ್ಟು ಹೆಚ್ಚಿನ ಟೆಂಡರ್ ದರಗಳನ್ನು ನಮೂದಿಸಿದ್ದು, ಇತ್ತೀಚೆಗೆ ಪಾಲಿಕೆಯಲ್ಲಿ e-procurement ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಎಸ್.ಆರ್ ದರಗಳಿಗೆ ಶೇ.10 ಕ್ಕಿಂತ ಕಡಿಮೆ ದರ ನಮೂದಿಸಿರುವುದನ್ನು ಗಮನಿಸಲಾಗಿದ್ದು, ಈ ಎರಡು ಅಂಶಗಳ ಒಟ್ಟು ಪರಿಣಾಮದಿಂದಾಗಿ ಪಾಲಿಕೆ ಸದರಿ ಯೋಜನೆಯ ಮೇಲೆ ಎಸ್.ಆರ್. ದರಗಳಿಗಿಂತ ಸರಾಸರಿ ಶೇ. 58% ರಷ್ಟು ಹೆಚ್ಚುವರಿ ವೆಚ್ಚ ಭರಿಸಬೇಕಿರುತ್ತದೆ.

. . . . .11

- ಪಾಲಿಕೆಯು ಈ ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಭೂಸ್ವಾಧೀನಕ್ಕೆ ಸುಮಾರು ರೂ.6000.00 ಕೋಟಿಗಳನ್ನು ಖರ್ಚು ಮಾಡಬೇಕಾಗಿದ್ದು, ಪಾಲಿಕೆಯು ಈ ಗಾತ್ರದ ಮೊತ್ತದಲ್ಲಿ ವೆಚ್ಚ ಭರಿಸಿ, ಭೂಸ್ವಾಧೀನಪಡಿಸಿಕೊಳ್ಳುವಷ್ಟು ಆರ್ಥಿಕ ಸಬಲತೆ ಹೊಂದಿರುವುದಿಲ್ಲ.
- ಈಗಾಗಲೇ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಪಾಲಿಕೆ ಸುಮಾರು ರೂ.3000.00 ಕೋಟಿಗಳ ಸಾಲವನ್ನು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದಿದ್ದು, ಇದರ ಜೊತೆಗೆ ರೂ.1560.00 ಕೋಟಿಗಳಷ್ಟು ಕಾಮಗಾರಿಗಳಿಗೆ ಬಾಕಿ ಬಿಲ್ಲಿನ ಹಣ ಪಾವತಿಸಬೇಕಾಗಿದೆ.
- ಸದರಿ ಯೋಜನೆಯ ಅನುಷ್ಠಾನಕ್ಕೆ ಬೇಕಾದ ಖಾಸಗಿ ಸ್ವತ್ತುಗಳನ್ನು ಟಿ.ಡಿ.ಆರ್ ನಿಯಮಾವಳಿ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಕಾನೂನಿನಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿರುವುದಿಲ್ಲ.
- ಈ ಯೋಜನೆಯ ಕಾಮಗಾರಿಗಳಿಗೆ ಗುತ್ತಿಗೆದಾರರು ನಮೂದಿಸಿರುವ ಮೊತ್ತ, ಟೆಂಡರ್ ಮೊತ್ತಕ್ಕಿಂತ ರೂ. 1400.00 ಕೋಟಿಗಳಷ್ಟು ಹೆಚ್ಚಾಗಿದ್ದು, ಈ ಮೊತ್ತವನ್ನು ಪರಿಗಣಿಸಿದಲ್ಲಿ ಒಟ್ಟು ಯೋಜನೆಯ ವೆಚ್ಚವು 4828.00 ಕೋಟಿಗಳಷ್ಟಾಗುತ್ತದೆ ಹಾಗೂ ಖಾಸಗಿ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.6000.00 ಕೋಟಿಗಳಷ್ಟು ಹಣ ಬೇಕಾಗಿದ್ದು, ಯೋಜನೆಯ ಒಟ್ಟು ಮೊತ್ತ ರೂ.10,500.00 ಕೋಟಿಗಳನ್ನು ಮೀರುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ, ಸದರಿ ಯೋಜನೆಗಳನ್ನು ಒಟ್ಟಿಗೆ ಏಕಕಾಲದಲ್ಲಿ ಅನುಷ್ಠಾನಗೊಳಿಸುವುದು ಅತ್ಯಂತ ಕಷ್ಟಕರವಾಗಿರುತ್ತದೆ.

ಮೇಲಿನ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಇಂತಹ ಬೃಹದಾಕಾರವಾದ ಯೋಜನೆಯನ್ನು ಸರ್ಕಾರದ ಆರ್ಥಿಕ ನೆರವನ್ನು ಪಡೆಯದೇ ಪಾಲಿಕೆಯು ತನ್ನ ಸ್ವಂತ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಅನುಷ್ಠಾನಗೊಳಿಸುವುದು ಸಾಧ್ಯವೇ ಇಲ್ಲ. ಆದರೆ, ಈ ಸಮಗ್ರ ಅಭಿವೃದ್ಧಿ ಯೋಜನೆಗೆ ಅವಶ್ಯವಿರುವ ವೆಚ್ಚವನ್ನು ಪಾಲಿಕೆಗೆ ಸರ್ಕಾರದಿಂದ ಅನುದಾನ ನೀಡಿದ ಪಕ್ಷದಲ್ಲಿ ಮಾತ್ರ, ಈ ಯೋಜನೆಯನ್ನು ಏಕ ಕಾಲದಲ್ಲಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಸಾಧ್ಯವಿದೆಯೆಂದು ಅಭಿಪ್ರಾಯಪಡಲಾಗಿದೆ.

ಈ ಯೋಜನೆಯನ್ನು ಅನುಷ್ಠಾಗೊಳಿಸಲು ರೂ.3,248.00 ಕೋಟಿಗಳಿಗೆ ಪೂರ್ವ ಅರ್ಹತೆ ಟೆಂಡರ್ ಹಾಗು ಆರ್ಥಿಕ ಬಿಡ್ಡುಗಳನ್ನು ಈಗಾಗಲೇ ಕರೆಯಲಾಗಿದ್ದು, ಸದರಿ ಯೋಜನೆಯ ಎಲ್ಲಾ ಅಂಶಗಳನ್ನು ಒಮ್ಮೆಲೆ ಅನುಷ್ಠಾನಗೊಳಿಸಲು ಪಾಲಿಕೆಯ ಆರ್ಥಿಕ ದೃಷ್ಠಿಯ ಹಿನ್ನೆಲೆಯಲ್ಲಿ, ಮೇಲೆ ವಿವರಿಸಿದ ಕಾರಣಗಳಿಂದ ಕಷ್ಟವಾಗಿರುತ್ತದೆ. ಪಾಲಿಕೆಯ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಾಕಿ ಇರುವ ಬಿಲ್ಲುಗಳನ್ನು ಹಾಗು ಸಾಲಗಳನ್ನು ಮರುಪಾವತಿ ಮಾಡಬೇಕಾದ ಪರಿಸ್ಥಿತಿ ಎದುರಾಗಿದ್ದು, ಈ ಯೋಜನೆಯನ್ನು ಒಮ್ಮೆಲೆ ಅನುಷ್ಠಾನಗೊಳಿಸುವುದು ಕಷ್ಟವಾಗಿರುತ್ತದೆ. ಆದರೆ ಯೋಜನೆಯನ್ನು ಪ್ರಾಮುಖ್ಯತೆಯ ಆಧಾರದ ಮೇಲೆ ವಿಂಗಡಿಸಿ, ಹಂತ ಹಂತವಾಗಿ ಪ್ರತ್ಯೇಕವಾಗಿ ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

ಪಾಲಿಕೆಯ ವಾಸ್ತವಿಕ ಹಣಕಾಸು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಈ ಸದರಿ ಯೋಜನೆಗೆ ಬೇಕಾಗುವ ಖಾಸಗಿ ಸ್ವತ್ತುಗಳನ್ನು ಹಣ ಪಾವತಿಸಿ, ಭೂಸ್ವಾಧೀನಪಡಿಸುವುದು ಸಾಧ್ಯವಿಲ್ಲದಿರುವುದರ ಪ್ರಯುಕ್ತ, ಸದರಿ ಯೋಜನೆಯ ಮುಂದಿನ ಪ್ರಕ್ರಿಯೆಯನ್ನು ಕೈಬಿಡುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

ಆದುದರಿಂದ ಸದರಿ ಯೋಜನೆಯ ಅನುಷ್ಠಾನದ ಅಂಗವಾಗಿ ಈ ಹಿಂದೆ ದಿನಾಂಕ:07-12-2009 ರ ಪೂರ್ವ ಅರ್ಹತೆ ಅಂತಿಮ ಪಟ್ಟಿಯನ್ನು ಹಾಗೂ 19-ಪ್ಯಾಕೇಜುಗಳ ಅಡಿಯಲ್ಲಿ ಆಹ್ವಾನಿಸಿರುವ ಮೂಲ ಟೆಂಡರ್ ಅಧಿಸೂಚನೆಯಲ್ಲಿ ಈ ಬಿಡ್ಡುಗಳನ್ನು ಯಾವುದೇ ಕಾರಣವನ್ನು ನೀಡದೆ ಒಪ್ಪುವ ಅಥವ

. . . . 1.2

ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊಂದಿರುತ್ತದೆಂದು ಸ್ಪಷ್ಟವಾಗಿ ವಿಧಿಸಲಾಗಿದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 5 ಹೊಸ ವಲಯಗಳಲ್ಲಿನ ಆಯ್ದ ರಸ್ತೆಗಳನ್ನು ಸಮಗ್ರವಾಗಿ ಅಗಲೀಕರಣಗೊಳಿಸಿ ಅಭಿವೃದ್ಧಿಗೊಳಿಸುವುದು ಮತ್ತು 7 ಪ್ರಮುಖ ರಸ್ತೆ ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತ ರಸ್ತೆಗಳನ್ನಾಗಿ ನಿರ್ಮಿಸುವ ಸಮಗ್ರ ಯೋಜನೆಯ ಅನುಷ್ಠಾನದ ಪ್ರಯುಕ್ತ ಆಹ್ವಾನಿಸಿದ್ದ ಟೆಂಡರ್ ಪ್ರಕಟಣೆ ಅಧಿಸೂಚನೆ ಸಂಖ್ಯೆ:EE(MR)/Spl/TEND/15/142/09-10, Dt:23.09.2009, ದಿನಾಂಕ:07-12-2009 ರಂದು ಅಂತಿಮಗೊಳಿಸಿದ ಪೂರ್ವಾರ್ಹತೆ ಪಟ್ಟಿಯನ್ನು ಹಾಗೂ ದಿನಾಂಕ:07-12-2009 ರ ಟೆಂಡರ್ ಅಧಿಸೂಚನೆ ಹಾಗೂ ಇದರ ಪೂರಕವಾಗಿ ಹೊರಡಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ರದ್ದುಪಡಿಸಲು ಅನುಮೋದನೆ.

ಮತ್ತು

ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಸದರಿ ಯೋಜನೆಯಡಿಯಲ್ಲಿ ನಗರಕ್ಕೆ ಅತ್ಯಂತ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಅನುಷ್ಠಾನಗೊಳಿಸಬೇಕಾದ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ಅನುಮೋದನೆಯನ್ನು ನೀಡುವಂತೆ ಕೋರಿ ಸೂಕ್ತ ತೀರ್ಮಾನಕ್ಕಾಗಿ ಪ್ರಸ್ತಾವನೆಯನ್ನು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-05-2011 ರ ಟಿಪ್ಪಣಿ ಹಾಗೂ ದಿನಾಂಕ:20-05-2011 ರ ಆಯುಕ್ತರವರ ಟಿಪ್ಪಣಿಯನ್ನು ಪರಿಶೀಲಿಸಿದ್ದು, ದಿನಾಂಕ:07-12-2009 ರ ಟೆಂಡರ್ ಅಧಿಸೂಚನೆ ಹಾಗೂ ಇದರ ಪೂರಕವಾಗಿ ಹೊರಡಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ರದ್ದುಪಡಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-08-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸ್ಥಾಯಿ ಸಮಿತಿಯ ದಿನಾಂಕ:11-08-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:07–09–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 166/2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಲಿಕೆಯ ವ್ಯಾಪ್ತಿಯ ಹಾಲೀ ವಾರ್ಡ್ ನಂ.106ರ ಬಸವೇಶ್ವರನಗರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪೋಲೀಸ್ ಸ್ಟೇಷನ್‌ಗೆ ನೀಡಿರುವ ಜಾಗದಲ್ಲಿ ಆಟದ ಮೈದಾನ/ಉದ್ಯಾನವನ ನಿರ್ಮಿಸುವ ಜಾಗವಾಗಿದ್ದು, ಈ ಜಾಗವನ್ನು ಈಗಾಗಲೇ ಸಾರ್ವಜನಿಕ ಉಪಯೋಗಕ್ಕಾಗಿ ಉಪಯೋಗಿಸುತ್ತಿರುವ ಕಾರಣ, ಪೋಲಿಸ್ ಇಲಾಖೆಗೆ ನೀಡಿರುವ 0.21 ಗುಂಟೆ ಪ್ರದೇಶದಲ್ಲಿ 0.20 ಗುಂಟೆ ಪ್ರದೇಶ ಹೊರತುಪಡಿಸಿ, ಆಟದ ಮೈದಾನ ಮತ್ತು ಕ್ರೀಡಾಂಗಣಕ್ಕೆ ಪ್ರತ್ಯೇಕವಾಗಿರುವ 0.01 ಗುಂಟೆ ಜಮೀನು ಇಲಾಖೆಯ ಉಪಯೋಗಕ್ಕೆ ಬರುವುದಿಲ್ಲವಾದ್ದರಿಂದ, ಪಾಲಿಕೆಗೆ ವಾಪಸ್ಸು ಪಡೆದು ಸದರಿ ಆಸ್ತಿ ವರ್ಗಾವಣೆ ಪತ್ರವನ್ನು ಮಾರ್ಪಾಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸ್ಥಳೀಯ ಪಾಲಿಕೆಯ ಸದಸ್ಯರಾದ ಶ್ರೀ. ಗಂಗಭೈರಯ್ಯರವರು ಪತ್ರದ ಮೂಲಕ ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಸರ್ವೆ ನಂ.70, 1–14 ಎಕರೆ/ಗುಂಟೆ ಇದ್ದು, ಅನುಪಯೋಗಿ ಸ್ಮಶಾನದ ಜಾಗವಾಗಿರುತ್ತದೆ. ಇದರಲ್ಲಿ ಸಾರ್ವಜನಿಕ ರಸ್ತೆ ನಿರ್ಮಾಣಗೊಂಡು 1580.70 ಚ.ಮೀ. ಜಾಗ ಉಳಿದಿರುತ್ತದೆ. ಇದರಲ್ಲಿ ಇದ್ದ ಅನಧಿಕೃತ ಮನೆಗಳನ್ನು ತೆರವುಗೊಳಿಸಲಾಗಿರುತ್ತದೆ.

ಸಿ.ಡಿ.ಪಿ ಯಲ್ಲಿ ಈ ಜಾಗ ಉದ್ಯಾನವನವೆಂದು ಗುರುತಿಸಲಾಗಿದೆ. ಈ ಜಾಗ ಚಿಕ್ಕದಾಗಿರುವುದರಿಂದ, ಸಾರ್ವಜನಿಕರ ಸೌಲಭ್ಯ ಒದಗಿಸುವ ಸಲುವಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಉಪಯೋಗ ಬದಲಾವಣೆ ಕೋರಿದ್ದು, ಸರ್ಕಾರಿ ಆದೇಶ ದಿನಾಂಕ:01–04–2002 ರಲ್ಲಿ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದ್ದು, ಇದರನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ದಿನಾಂಕ:11–09–2002 ರಲ್ಲಿ ಸರ್ವೆ ನಂ.70ರಲ್ಲಿರುವ 1580.70 ಚ.ಮೀ. ಅಂದರೆ, 0–15.50 ಗುಂಟೆ ಪ್ರದೇಶಕ್ಕೆ ಭೂ–ಪರಿವರ್ತನೆಗೊಳಿಸಿ ಆದೇಶ ಹೊರಡಿಸಿದ್ದು, ಇದರ ಷರತ್ತುಗಳನ್ವಯ ಪಾಲಿಕೆಯು ರೂ.1,19,343/– ಗಳನ್ನು ಸಂದಾಯ ಮಾಡಿ, ಪ್ರಾರಂಭಿಕ ದೃಢೀಕರಣ ಪತ್ರ ಪಡೆದಾಗ ಈ ಪ್ರದೇಶಕ್ಕೆ ಯಾವುದೇ ಚೆಕ್ಕುಬಂದಿಯನ್ನು ನಗರಾಭಿವೃದ್ಧಿ ಇಲಾಖೆಯ ಸರ್ಕಾರಿ ಆದೇಶದಲ್ಲಾಗಲೀ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಾರಂಭಿಕ ದೃಢೀಕರಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ.

ದಿನಾಂಕ:29–01–2003ರ ಸರ್ಕಾರದ ಕಂದಾಯ ಇಲಾಖೆಯಿಂದ 0.21 ಗುಂಟೆ ಜಮೀನನ್ನು ಪೋಲಿಸ್ ಇಲಾಖೆಗೆ ವರ್ಗಾಯಿಸಿದೆ. ದಿನಾಂಕ:17–02–2003ರ ಜಿಲ್ಲಾಧಿಕಾರಿಗಳ ಆದೇಶದಲ್ಲಿ 0.21 ಗುಂಟೆ ಜಮೀನು ಪೊಲೀಸ್ ಇಲಾಖೆಗೆ ಬಸವೇಶ್ವರನಗರ ಪೋಲೀಸ್ ಸ್ಟೇಷನ್ ನಿರ್ಮಾಣಕ್ಕೆ ವರ್ಗಾಯಿಸಿದೆ. ದಿನಾಂಕ:21–02–2003ರಲ್ಲಿ ತಹಶೀಲ್ದಾರರಿಂದ ಪೋಲಿಸ್ ಠಾಣೆಗೆ 0.21 ಗುಂಟೆ ಹಸ್ತಾಂತರ ಪತ್ರದಲ್ಲಿ ಚೆಕ್ಕುಬಂದಿ ಈ ರೀತಿ ಇದೆ.

ಸರ್ವೆ ನಂ.70ರ ಬ್ಲಾಕ್ ನಂ.1ರ ವಿಸ್ತೀರ್ಣ : 0.05 ಗುಂಟೆಗೆ ಚೆಕ್ಕುಬಂದಿ

| | | |
|---|---|---|
| ಪೂರ್ವ | – | ಅಗ್ರಹಾರ ದಾಸರಹಳ್ಳಿ ಮುಖ್ಯರಸ್ತೆ |
| ಪಶ್ಚಿಮ | – | ರಸ್ತೆ |
| ಉತ್ತರ | – | ಬಸವೇಶ್ವರನಗರ ಮುಖ್ಯರಸ್ತೆ |
| ದಕ್ಷಿಣ | – | ರಸ್ತೆ |

2

<u>ಸರ್ವೆ ನಂ.70ರ ಬ್ಲಾಕ್ ನಂ.2ರ ವಿಸ್ತೀರ್ಣ : 0.15 ಗುಂಟೆಗೆ ಚೆಕ್ಕುಬಂದಿ</u>

ಪೂರ್ವ – ಬಿ.ಡಿ.ಎ. ರಸ್ತೆ
ಪಶ್ಚಿಮ – ಅಗ್ರಹಾರ ದಾಸರಹಳ್ಳಿ ಮುಖ್ಯರಸ್ತೆ
ಉತ್ತರ – ಬಸವೇಶ್ವರನಗರ ಮುಖ್ಯರಸ್ತೆ
ದಕ್ಷಿಣ – ಸರ್ವೆ ನಂ.78

<u>ಸರ್ವೆ ನಂ.70ರ ಬ್ಲಾಕ್ ನಂ.3ರ ವಿಸ್ತೀರ್ಣ : 0.01 ಗುಂಟೆಗೆ ಚೆಕ್ಕುಬಂದಿ</u>

ಪೂರ್ವ – ಒಳಚರಂಡಿ ಮೋರಿ
ಪಶ್ಚಿಮ – ಬಿ.ಡಿ.ಎ. ರಸ್ತೆ
ಉತ್ತರ – ಬಸವೇಶ್ವರನಗರ ಮುಖ್ಯರಸ್ತೆ
ದಕ್ಷಿಣ – ಸರ್ವೆ ನಂ.78

ಅಂದಿನ ಆಯುಕ್ತರು ದಿನಾಂಕ:11–07–2003 ಪೊಲೀಸ್ ಇಲಾಖೆಗೆ ವರ್ಗಾಯಿಸಿದೆ ಆದೇಶ ಪುನರ್ ಪರಿಶೀಲಿಸಿ, ಮಾಲೀಕತ್ವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಂದುವರೆಸಲು ಜಿಲ್ಲಾಧಿಕಾರಿಗಳನ್ನು ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಪತ್ರ ದಿನಾಂಕ:17–06–2004ರಲ್ಲಿ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಹಾಗೂ ಪೊಲೀಸ್ ಠಾಣೆಗೆ ಸದರಿ ಜಾಗದ ಅವಶ್ಯಕತೆಯಿರುವುದರಿಂದ, ಪುನರ್ ಪರಿಸೀಲಿಸುವ ಅವಶ್ಯಕತೆ ಕಂಡು ಬರುವುದಿಲ್ಲವೆಂದು ಉತ್ತರಿಸಿರುತ್ತಾರೆ.

ಈ 0.21 ಗುಂಟೆ ಜಮೀನನ್ನು ದಿನಾಂಕ:27–06–2005ರಲ್ಲಿ ಪಾಲಿಕೆ ಸಭೆ ನಿರ್ಣಯದಂತೆ ಪೋಲಿಸ್ ಇಲಾಖೆಗೆ ಉಚಿತವಾಗಿ ಹಸ್ತಾಂತರ ಮಾಡಲು ನಿರ್ಣಯಿಸಿದ್ದು, ಇದರ ಅನುಮೋದನೆ ಕೋರಿ, ದಿನಾಂಕ:18–11–2005 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ. ಸರ್ಕಾರವು ತನ್ನ ಪತ್ರದ ಸಂಖ್ಯೆ:ನಅಇ/312/ಎಂಎನ್‌ಜಿ/2005, ದಿನಾಂಕ:13–10–2006ರಲ್ಲಿ ಪಾಲಿಕೆಯ ನಿರ್ಣಯವನ್ನು ಅನುಮೋದಿಸಿರುತ್ತದೆ. ಈ ಸ್ವತ್ತುಗಳಿಗೆ ಪ್ರತ್ಯೇಕ ಚಕ್ಕುಬಂದಿಗಳನ್ನು ನಮೂದಿಸಿ, ಒಟ್ಟು 0.21 ಗುಂಟೆ ಜಮೀನನ್ನು ದಿನಾಂಕ:20–08–2009 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರವಾಗಿ ಜಂಟಿ ಆಯುಕ್ತರು (ಪಶ್ಚಿಮ) ರವರು ಹಾಗೂ ಪೊಲೀಸ್ ಇಲಾಖೆ ಪರವಾಗಿ ಪ್ರತಿನಿಧಿಸುವ ಪ್ರತಿನಿಧಿಯಾಗಿ ಪೊಲೀಸ್ ಆಯುಕ್ತರು, ಬೆಂಗಳೂರು ಇವರಿಗೆ ಆಸ್ತಿ ವರ್ಗಾವಣೆ ಪತ್ರ ನೋಂದಾಯಿಸಿ ಕೊಟ್ಟಿರುತ್ತಾರೆ.

ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುವ 0.21 ಗುಂಟೆ ಜಮೀನು ಪೋಲೀಸ್ ಇಲಾಖೆಗೆ ಹಸ್ತಾಂತರ ಮಾಡುವಾಗ ಬ್ಲಾಕ್ 1, 2, 3 ರಲ್ಲಿ ಕ್ರಮವಾಗಿ 0.05 ಗುಂಟೆ, 0.15 ಗುಂಟೆ ಹಾಗೂ 0.01 ಗುಂಟೆ ಒಟ್ಟು 0.21 ಗುಂಟೆ ಆರಕ್ಷಕ ಇಲಾಖೆಗೆ ವಹಿಸಿಕೊಡಲಾಗಿರುತ್ತದೆ. ಆರಕ್ಷಕ ಇಲಾಖೆಯವರು ಬ್ಲಾಕ್: 2ರಲ್ಲಿ ಕಛೇರಿ ಕಟ್ಟಡ ನಿರ್ಮಿಸಿದ್ದು, ಬ್ಲಾಕ್ 1ರ ಜಾಗ ಖಾಲಿ ಇರುತ್ತದೆ. ಬ್ಲಾಕ್ 3ರಲ್ಲಿ ವಶಪಡಿಸಿಕೊಂಡಿರುವ ಹಳೆ ವಾಹನಗಳನ್ನು ನಿಲ್ಲಿಸಿರುತ್ತಾರೆ.

ಬ್ಲಾಕ್ 1ರಲ್ಲಿ ಪಾಲಿಕೆಗೆ ಸೇರಿದ್ದ 0.01 ಗುಂಟೆ ಹಾಗೂ ಬ್ಲಾಕ್ 3ರಲ್ಲಿ 1/2 ಗುಂಟೆ ಜಾಗ ಇರುತ್ತದೆ. ಈ ಸಂಪೂರ್ಣ ಜಾಗವು ಪೋಲೀಸ್ ಇಲಾಖೆಯ ವಶದಲ್ಲಿರುತ್ತದೆ. ಈ ಅಧಿಕವಾಗಿ ಪಾಲಿಕೆಗೆ ಉಳಿದಿರುವ ಪ್ರದೇಶದಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣಕ್ಕೆ ಮತ್ತು ಉದ್ಯಾನವನಕ್ಕೆ ಬರುವ ಸಾರ್ವಜನಿಕರ ಉಪಯೋಗಕ್ಕಾಗಿ ನಿರ್ಮಲ ಶೌಚಾಲಯವನ್ನು ಕಟ್ಟಲು KRIDL ಸಂಸ್ಥೆಗೆ ವಹಿಸಲಾಗಿರುವುದರಿಂದ, ಬ್ಲಾಕ್ 3ರ 0.01 ಗುಂಟೆ ಜಾಗವನ್ನು ಪೋಲೀಸ್ ಇಲಾಖೆಯಿಂದ ವಾಪಸ್ಸು ಪಡೆಯಲು ಸ್ಥಳೀಯ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3

ಈ ಹಿನ್ನಲೆಯಲ್ಲಿ, ಬ್ಲಾಕ್ ನಂ.1ರಲ್ಲಿ ಒಟ್ಟು ವಿಸ್ತೀರ್ಣ 0.06 ಗುಂಟೆ ಇದ್ದು, ಪೋಲಿಸ್ ಇಲಾಖೆಗೆ 0.05 ಗುಂಟೆ ಮಾತ್ರ ವಹಿಸಲಾಗಿದ್ದು, ಇದರಲ್ಲಿ ಸಂಪೂರ್ಣ 0.06 ಗುಂಟೆಯನ್ನು ಅವರಿಗೆ ವಹಿಸಿ, ಬ್ಲಾಕ್ ನಂ.3ರಲ್ಲಿರುವ 0.01 1/2 ಗುಂಟೆ ಪ್ರದೇಶವನ್ನು ಪಾಲಿಕೆಗೆ ಉಳಿಸಿಕೊಳ್ಳುವ ಬಗ್ಗೆ ಕಂದಾಯ ಮತ್ತು ಆರಕ್ಷಕ ಇಲಾಖೆಯ ಸಹಮತದೊಂದಿಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ಪರಿಷ್ಕೃತ ಆದೇಶ ಹೊರಡಿಸಿ ಅದರಂತೆ, ಎರಡೂ ಇಲಾಖೆಯವರು ಆಸ್ತಿ ವರ್ಗಾವಣೆ ತಿದ್ದುಪಡಿ ಪತ್ರ ನೋಂದಾಯಿಸುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-08-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-09-2011 ರ ನಿರ್ಣಯ.

ಶ್ರೀ ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಆಯುಕ್ತರವರ ದಿನಾಂಕ:12-08-2011 ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಾಲಿ ವಾರ್ಡ್-106ರ ಬಸವೇಶ್ವರನಗರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪೋಲಿಸ್ ಸ್ಟೇಷನ್‌ಗೆ ಪಾಲಿಕೆವತಿಯಿಂದ ಉಚಿತವಾಗಿ ನೀಡಿರುವ ಜಾಗವು ಆಟದ ಮೈದಾನ/ಉದ್ಯಾನವನ ನಿರ್ಮಿಸುವ ಜಾಗವಾಗಿದ್ದು, ಸದರಿ ಜಾಗದ ಮಧ್ಯದಲ್ಲಿ ಎರಡು ಪ್ರತ್ಯೇಕ ರಸ್ತೆಗಳು ಇದ್ದು, ಜಾಗವು ಮೂರು ಭಾಗಗಳಾಗಿ ವಿಭಜನೆಯಾಗಿರುತ್ತದೆ. ಈ ರೀತಿ ವಿಭಜನೆಯಾದ ಒಂದು ಭಾಗವು (ಅಂದಾಜು 0.01 ಗುಂಟೆ) ಅಂಬೇಡ್ಕರ್ ಕ್ರೀಡಾಂಗಣಕ್ಕೆ ಹೊಂದಿಕೊಂಡಂತಿದ್ದು, ಪೋಲಿಸ್ ಸ್ಟೇಷನ್‌ನಿಂದ ಬೇರ್ಪಟ್ಟಿದ್ದು, ಬೃಹತ್ ನೀರುಗಾಲುವೆಯು ಹಾದು ಹೋಗಿರುವುದರಿಂದ, ಸದರಿ ಪ್ರದೇಶದಲ್ಲಿ ಇರುವ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶೌಚಾಲಯವು ಇಲ್ಲದೇ ಇರುವುದರಿಂದ, ಸಾರ್ವಜನಿಕರ ಉಪಯೋಗಕ್ಕಾಗಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಲು, ನಗರ ಪಾಲಿಕೆಯ ಮೂಲ ಸ್ವತ್ತಿನ ಪೈಕಿ 0.01 ಗುಂಟೆ ಜಾಗವನ್ನು ಮಾತ್ರ ಪೋಲಿಸ್ ಇಲಾಖೆಯ ವಶದಿಂದ ನಗರ ಪಾಲಿಕೆಗೆ ಹಿಂಪಡೆಯಲು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:12-08-2011 ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಾಲಿ ವಾರ್ಡ್-106ರ ಬಸವೇಶ್ವರನಗರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪೋಲಿಸ್ ಸ್ಟೇಷನ್‌ಗೆ ಪಾಲಿಕೆವತಿಯಿಂದ ಉಚಿತವಾಗಿ ನೀಡಿರುವ ಜಾಗವು ಆಟದ ಮೈದಾನ/ಉದ್ಯಾನವನ ನಿರ್ಮಿಸುವ ಜಾಗವಾಗಿದ್ದು, ಸದರಿ ಜಾಗದ ಮಧ್ಯದಲ್ಲಿ ಎರಡು ಪ್ರತ್ಯೇಕ ರಸ್ತೆಗಳು ಇದ್ದು, ಜಾಗವು ಮೂರು ಭಾಗಗಳಾಗಿ ವಿಭಜನೆಯಾಗಿರುತ್ತದೆ. ಈ ರೀತಿ ವಿಭಜನೆಯಾದ ಒಂದು ಭಾಗವು (ಅಂದಾಜು 0.01 ಗುಂಟೆ) ಅಂಬೇಡ್ಕರ್ ಕ್ರೀಡಾಂಗಣಕ್ಕೆ ಹೊಂದಿಕೊಂಡಂತಿದ್ದು, ಪೋಲಿಸ್ ಸ್ಟೇಷನ್‌ನಿಂದ ಬೇರ್ಪಟ್ಟಿದ್ದು, ಬೃಹತ್ ನೀರುಗಾಲುವೆಯು ಹಾದು ಹೋಗಿರುವುದರಿಂದ, ಸದರಿ ಪ್ರದೇಶದಲ್ಲಿ ಇರುವ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶೌಚಾಲಯವು ಇಲ್ಲದೇ ಇರುವುದರಿಂದ, ಸಾರ್ವಜನಿಕರ ಉಪಯೋಗಕ್ಕಾಗಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಲು, ನಗರ ಪಾಲಿಕೆಯ ಮೂಲ ಸ್ವತ್ತಿನ ಪೈಕಿ 0.01 ಗುಂಟೆ ಜಾಗವನ್ನು ಮಾತ್ರ ಪೋಲಿಸ್ ಇಲಾಖೆಯ ವಶದಿಂದ ನಗರ ಪಾಲಿಕೆಗೆ ಹಿಂಪಡೆಯುವುದು.

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ: 07-09-2011 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ : 167/2011-12

ಶ್ರೀ. ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ದಾಸರಹಳ್ಳಿ ವಲಯದ ವಾರ್ಡ್-6 ಕ್ಕೆ ಸೇರಿರುವ ಈ ಕೆಳಕಂಡ ಚೆಕ್ಕುಬಂದಿಯ ಪ್ರದೇಶಕ್ಕೆ ಕಾವೇರಿ ಬಡಾವಣೆ ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಸೂಕ್ತ ಕ್ರಮಕೈಗೊಳ್ಳುವುದು.

1. ಜಗದಾಂಬ ಇಂಜಿನಿಯರಿಂಗ್ ವರ್ಕ್ಸ್‌ನಿಂದ ಆರಂಭವಾಗಿ ಮುನಿಸ್ವಾಮಪ್ಪ ಕಾಂಪ್ಲೆಕ್ಸ್‌ವರೆಗೆ ವಾರ್ಡ್-6 ರ ದಾಸರಹಳ್ಳಿ ಗ್ರಾಮದ ಮುಖ್ಯ ರಸ್ತೆಯಾದ, ನಾಡಪ್ರಭು ಕೆಂಪೇಗೌಡ ರಸ್ತೆ (ಜಕ್ಕೂರಿನಿಂದ ಹೊರವರ್ತುಲ ರಸ್ತೆ - ಹೆಬ್ಬಾಳಕ್ಕೆ ಸೇರುವ ರಸ್ತೆ) ಯ ಪಶ್ಚಿಮ ಭಾಗ.
2. ಮರಿಯಣ್ಣಪಾಳ್ಯದಿಂದ ಕಾಫೀ ಬೋರ್ಡ್ ಬಡಾವಣೆಗೆ ಹೋಗುವ ರಸ್ತೆಯ ಉತ್ತರ ಭಾಗದ ವಲಯ.
3. ಸೇಂಟ್ ಜಾನ್ಸ್ ಶಾಲೆಯಿಂದ ಭುವನೇಶ್ವರಿ ನಗರಕ್ಕೆ ಹೋಗುವ ರಸ್ತೆಯ ಪೂರ್ವ ಭಾಗದ ವಲಯ.
4. ಮುನಿಕೆಂಪಣ್ಣ ಬಡಾವಣೆಯ ದಕ್ಷಿಣಕ್ಕಿರುವ ವಲಯ.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ದಾಸರಹಳ್ಳಿ ವಲಯದ ವಾರ್ಡ್-6 ಕ್ಕೆ ಸೇರಿರುವ ಈ ಕೆಳಕಂಡ ಚೆಕ್ಕುಬಂದಿಯ ಪ್ರದೇಶಕ್ಕೆ ಕಾವೇರಿ ಬಡಾವಣೆ ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಸೂಕ್ತ ಕ್ರಮಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1. ಜಗದಾಂಬ ಇಂಜಿನಿಯರಿಂಗ್ ವರ್ಕ್ಸ್‌ನಿಂದ ಆರಂಭವಾಗಿ ಮುನಿಸ್ವಾಮಪ್ಪ ಕಾಂಪ್ಲೆಕ್ಸ್‌ವರೆಗೆ ವಾರ್ಡ್-6 ರ ದಾಸರಹಳ್ಳಿ ಗ್ರಾಮದ ಮುಖ್ಯ ರಸ್ತೆಯಾದ, ನಾಡಪ್ರಭು ಕೆಂಪೇಗೌಡ ರಸ್ತೆ (ಜಕ್ಕೂರಿನಿಂದ ಹೊರವರ್ತುಲ ರಸ್ತೆ - ಹೆಬ್ಬಾಳಕ್ಕೆ ಸೇರುವ ರಸ್ತೆ) ಯ ಪಶ್ಚಿಮ ಭಾಗ.
2. ಮರಿಯಣ್ಣಪಾಳ್ಯದಿಂದ ಕಾಫೀ ಬೋರ್ಡ್ ಬಡಾವಣೆಗೆ ಹೋಗುವ ರಸ್ತೆಯ ಉತ್ತರ ಭಾಗದ ವಲಯ.
3. ಸೇಂಟ್ ಜಾನ್ಸ್ ಶಾಲೆಯಿಂದ ಭುವನೇಶ್ವರಿ ನಗರಕ್ಕೆ ಹೋಗುವ ರಸ್ತೆಯ ಪೂರ್ವ ಭಾಗದ ವಲಯ.
4. ಮುನಿಕೆಂಪಣ್ಣ ಬಡಾವಣೆಯ ದಕ್ಷಿಣಕ್ಕಿರುವ ವಲಯ".

ಶಾರದಮ್ಮ
(ಶಾರದಮ್ಮ)
ಮಹಾಪೌರರು